ಹೊಸಪೇಟೆ ನಗರದ ವರ್ತಕ ಸಮುದಾಯಗಳು : ಚಾರಿತ್ರಿಕ ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯ, ಹಂಪಿ, ಚರಿತ್ರೆ ವಿಭಾಗಕ್ಕೆ ಎಂ.ಫಿಲ್. ಪದವಿಗಾಗಿ ಸಲ್ಲಿಸಿದ ನಿಬಂಧ)

ಸಂಶೋಧಕರು

ಅನುಪಮ.ಬಿ

ಮಾರ್ಗದರ್ಶಕರು

ಡಾ.ಕೆ.ಮೋಹನ್‌ಕೃಷ್ಣ ರೈ

ಸಹ ಪ್ರಾಧ್ಯಾಪಕರು

ಚರಿತ್ರೆ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

ಅಕ್ಟೋಬರ್ ೨೦೦೯



ಹೊಸಪೇಟೆ ನಗರದ ವರ್ತಕ ಸಮುದಾಯಗಳು : ಚಾರಿತ್ರಿಕ ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯ, ಹಂಪಿ, ಚರಿತ್ರೆ ವಿಭಾಗಕ್ಕೆ ಎಂ.ಫಿಲ್. ಪದವಿಗಾಗಿ ಸಲ್ಲಿಸಿದ ನಿಬಂಧ)

ಸಂಶೋಧಕರು
ಅನುಪಮ.ಬಿ

ಮಾರ್ಗದರ್ಶಕರು
ಡಾ.ಕೆ.ಮೋಹನ್‌ಕೃಷ್ಣ ರೈ
ಸಹ ಪ್ರಾಧ್ಯಾಪಕರು

ಚರಿತ್ರೆ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಅಕ್ಟೋಬರ್ ೨೦೦೯

ಪ್ರಮಾಣ ಪತ್ರ

‘ಹೊಸಪೇಟೆ ನಗರದ ವರ್ತಕ ಸಮುದಾಯಗಳು : ಚಾರಿತ್ರಿಕ ಅಧ್ಯಯನ’ ಎಂಬ ನಿಬಂಧವನ್ನು ಡಾ.ಕೆ.ಮೋಹನ್‌ಕೃಷ್ಣ ರೈ, ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಎಂ.ಫಿಲ್. ಪದವಿಗಾಗಿ ಸಮಾಜ ವಿಜ್ಞಾನಗಳ ನಿಕಾಯದ ಚರಿತ್ರೆ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ನಿಬಂಧವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ
ದಿನಾಂಕ :

Anu.B
(ಅನುಪಮ.ಬಿ)
ಸಂಶೋಧಕ
ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ದೃಢೀಕರಣ ಪತ್ರ

'ಹೊಸಪೇಟೆ ನಗರದ ವರ್ತಕ ಸಮುದಾಯಗಳು: ಚಾರಿತ್ರಿಕ ಅಧ್ಯಯನ' ಎಂಬ ನಿಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್. ಪದವಿಗಾಗಿ ಅನುಪಮ.ಬಿ., ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ. ಪ್ರಸ್ತುತ ನಿಬಂಧವನ್ನು ಈ ಮೊದಲು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ
ದಿನಾಂಕ :

ಡಾ. ಮೋಹನ್‌ಕೃಷ್ಣ ರೈ
ಮಾರ್ಗದರ್ಶಕರು ಹಾಗೂ ಸಹ ಪ್ರಾಧ್ಯಾಪಕರು
ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಪರಿವಿಡಿ

• • •

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ

ಪ್ರಸ್ತಾವನೆ

ಹೊಸಪೇಟೆಯು ಇಂದು ಕರ್ನಾಟಕ ರಾಜ್ಯದಲ್ಲೆ ಅತ್ಯಂತ ಶ್ರೀಮಂತವಾದ ತಾಲೂಕು, ಗಣಿಗಾರಿಕೆಯಿಂದಾಗಿ ಇದು ವಿಶ್ವದ ಭೂಪಟದಲ್ಲಿ ಪ್ರಧಾನವಾಗಿ ಕಾಣಿಸಿಕೊಳ್ಳುತ್ತಿದೆ. ಪ್ರಪಂಚದ ಬೇರೆ ಬೇರೆ ದೇಶಗಳೊಂದಿಗೆ ಇದು ವ್ಯಾಪಾರ-ವಾಣಿಜ್ಯದ ಸಂಬಂಧವನ್ನು ಇಟ್ಟುಕೊಂಡಿದೆ. ಈ ಎಲ್ಲ ಬೆಳವಣಿಗೆಗಳಿಗೆ ಹೊಸಪೇಟೆಯ ಭೌಗೋಳಿಕ ಹಾಗೂ ಚಾರಿತ್ರಿಕ ಹಿನ್ನೆಲೆಗಳು ಬಹುಮುಖ್ಯವಾದ ಕಾರಣ. ಅದಿರು ತುಂಬಿದ ಬೆಟ್ಟಗುಡ್ಡಗಳು ಹಾಗೂ ತುಂಗಭದ್ರಾ ನದಿ ಈ ಪ್ರದೇಶಕ್ಕೆ ವರದಾನವಾಗಿವೆ. ಅದೇ ರೀತಿ ವಿಜಯನಗರದ ಅರಸರ ಆಳ್ವಿಕೆಯಲ್ಲಿ ಈ ಪ್ರದೇಶ ಪಟ್ಟಣವಾಗಿ ರೂಪು ತಳೆದು ಎಲ್ಲ ಸೌಲಭ್ಯಗಳನ್ನು ಪಡೆದುಕೊಂಡಿತು. ಅರೇಬಿಯನ್, ಪರ್ಷಿಯನ್ ಹಾಗೂ ಯುರೋಪಿಯನ್ ವರ್ತಕರ ವ್ಯಾಪಾರಿ ತಂತ್ರಗಳನ್ನು ಹಾಗೂ ಗುಜರಾತಿ, ರಾಜಸ್ಥಾನಿ ಮುಂತಾದ ದೇಶಿ ವರ್ತಕರ ವ್ಯಾಪಾರ ಕಲೆಯನ್ನು ಈ ಪ್ರದೇಶವು ಮೈಗೂಡಿಸಿಕೊಂಡಿತು. ಭಾರತ ದೇಶದ ಪ್ರಮುಖ ವ್ಯಾಪಾರಸ್ಥರಾದ ಗುಜರಾತಿಗಳು ಹಾಗೂ ರಾಜಸ್ಥಾನಿಗಳು ಇಲ್ಲಿಗೆ ವಲಸೆ ಬಂದಿರುವುದು ಈ ಪ್ರದೇಶದ ವ್ಯಾಪಾರ ಚಟುವಟಿಕೆ ಚುರುಕುಗೊಳ್ಳುವುದಕ್ಕೆ ಹಾಗೂ ನಗರ ಅಭಿವೃದ್ಧಿಗೊಳ್ಳುವುದಕ್ಕೆ ಕಾರಣವಾಯಿತು. ಈ ಎಲ್ಲ ವಿಚಾರಗಳನ್ನು ನಗರೀಕರಣದ ಹಿನ್ನೆಲೆಯಿಂದ ಇಲ್ಲಿ ಅಧ್ಯಯನ ನಡೆಸಲಾಗಿದೆ.[೧]

ವ್ಯಾಪಾರ-ವಾಣಿಜ್ಯ, ವರ್ತಕರು, ನಗರಾಭಿವೃದ್ಧಿ ಈ ಮುಂತಾದ ವಿಚಾರಗಳು ಚರಿತ್ರೆಯನ್ನು ಆರ್ಥಿಕ ಚರಿತ್ರೆಯನ್ನಾಗಿ ಪರಿಭಾವಿಸಿಕೊಂಡಾಗ ಮಾತ್ರ ಮಹತ್ವವನ್ನು ಪಡೆದುಕೊಳ್ಳಲು ಸಾಧ್ಯ. ಅರಸ ಕೇಂದ್ರಿತ ಅಥವಾ ರಾಜಕೀಯ ಕೇಂದ್ರಿತ ಚರಿತ್ರೆ ಬರವಣಿಗೆ ಈ ವಿಷಯಗಳಿಗೆ ಮಹತ್ವವನ್ನು ನೀಡುವುದಿಲ್ಲ. ಇದರಿಂದಾಗಿಯೇ ಚರಿತ್ರೆ ಕೃತಿಗಳಲ್ಲಿ ಕೃಷಿ, ವ್ಯಾಪಾರ, ಕೈಗಾರಿಕೆ ಮುಂತಾದ ವಿಷಯಗಳಿಗೆ ಪ್ರವೇಶ

ಪಡೆಯಲು ಸಾಧ್ಯವಾಗಲಿಲ್ಲ. ಮಾರ್ಕ್ಸ್‌ವಾದಿ ಚಿಂತನೆಯು ಚರಿತ್ರೆಯನ್ನು ಆರ್ಥಿಕ ಚರಿತ್ರೆಯನ್ನಾಗಿ ವಿಶ್ಲೇಷಿಸಿ, ಚರಿತ್ರೆ ಅಧ್ಯಯನಕ್ಕೆ ಹೊಸ ಅಧ್ಯಯನ ವಿಧಾನ ಹಾಗೂ ದೃಷ್ಟಿಕೋನವನ್ನು ನೀಡಿತು. ಇದರ ಪರಿಣಾಮವಾಗಿ ಚರಿತ್ರೆಯ ಬೇರೆ ಬೇರೆ ಕಾಲಘಟ್ಟಗಳಲ್ಲಿನ ಅರ್ಥ ವ್ಯವಸ್ಥೆಯ ಸ್ವರೂಪದ ಚರ್ಚೆಗಳು ಆರಂಭಗೊಂಡವು. ಪ್ರಸ್ತುತ ಅಧ್ಯಯನವನ್ನು ಈ ಅಧ್ಯಯನವಿಧಾನದ ಮೂಲಕ ರೂಪಿಸುವ ಪ್ರಯತ್ನವನ್ನು ಮಾಡಲಾಗಿದೆ.

ನಗರಗಳು ಅಸ್ತಿತ್ವಕ್ಕೆ ಬಂದ ಬಗೆ, ಅವುಗಳ ಹುಟ್ಟು, ಬೆಳವಣಿಗೆ ಅವನತಿ ಹಾಗೂ ನಗರ ಸಿದ್ಧಾಂತ ಮತ್ತು ನಗರ ಅಧ್ಯಯನ ಕುರಿತು ಅನೇಕ ವಿದ್ವಾಂಸರು ಚರ್ಚೆ ನಡೆಸಿದ್ದಾರೆ. ಅವರಲ್ಲಿ ಮುಖ್ಯವಾಗಿ ಆರ್ನಾಲ್ಡ್ ಟಾಯಿನ್‌ಬಿ, ಸ್ಪಂಗ್ಲರ್, ಗೋರ್ಡನ ಚೈಲ್ಡ್. ಮ್ಯಾಕ್ಸ್‌ವೇಬರ್, ಗಿಡ್ಯಾನ್ ಸ್ಜೋಬರ್ಗ್, ಕಿಂಗ್‌ಸ್ಲಿಡೇವಿಸ್, ಜಿ.ಎಸ್.ಘುರ್ಯೆ, ಹೆನ್ರಿಪೈರೆನ್, ಲೂಯಿಮುಮ್‌ಫರ್ಡ್, ಬಿ.ಬಿ.ದತ್ತ, ಅಮಿತ್‌ರಾಯ್, ಎ.ಘೋಷ್, ಆರ್.ಎಸ್.ಶರ್ಮ, ವಿಜಯಕುಮಾರ್ ಟಾಕೂರ್, ಇಂದೂಭಂಗ, ಚಂಪಕಲಕ್ಷ್ಮಿ, ದಿಲೀಪ್ ಬಸು, ಆಶಿಸ್ ಬೋಸ್, ಓಮ್ ಪ್ರಕಾಶ ಪ್ರಸಾದ್, ರಣಬೀರ ಚಕ್ರವರ್ತಿ, ಸಂಜಯ ಸುಬ್ರಹ್ಮಣ್ಯಯಂ ಮೊದಲಾದವರು ಪ್ರಮುಖರು. ಆರಂಭದಲ್ಲಿ ನಗರ ಚರಿತ್ರೆ ಚರಿತ್ರೆ ಬರವಣಿಗೆಯಲ್ಲಿಯೇ ತುಂಬ ನಿರ್ಲಕ್ಷ್ಯಕ್ಕೆ ಒಳಪಟ್ಟ ವಿಷಯವಾಗಿತ್ತು.[2] ಆದರೆ ಇವರೆಲ್ಲರ ಚಿಂತನೆಗಳು ನಗರ ಚರಿತ್ರೆ ಮತ್ತು ಅದರಲ್ಲಿನ ವರ್ತಕ ಸಮುದಾಯ ಮತ್ತು ವರ್ತಕ ಸಂಘಗಳ ಅಧ್ಯಯನವು ಒಂದು ಸಮಾಜದ ಸಾಮಾಜಿಕ, ಆರ್ಥಿಕ ಸ್ಥಿತಿ-ಗತಿಗಳನ್ನು ಅರ್ಥೈಸಿಕೊಳ್ಳುವಲ್ಲಿ ಅನಿವಾರ್ಯ ಎನ್ನುವ ವಿಚಾರವನ್ನು ತಿಳಿಸಿಕೊಟ್ಟವು.

ಕರ್ನಾಟಕಕ್ಕೆ ಸಂಬಂಧಿಸಿದಂತೆ ವರ್ತಕ ಸಮುದಾಯಗಳ ಕುರಿತು ಅಧ್ಯಯನಗಳು ನಡೆದಿವೆ. ಇದುವರೆಗೆ ಎಕನಾಮಿಕ್ ಹಿಸ್ಟರಿ ಆಫ್ ನಾರ್ದರ್ನ್ ಇಂಡಿಯಾ, ಎ.ಅಪ್ಪೂದೊರೈಯವರ ಎಕನಾಮಿಕ್ ಕಂಡಿಶನ್ಸ್ ಇನ್ ನಾರ್ದರ್ನ್ ಇಂಡಿಯಾ, ಸೌಥ್ ಇಂಡಿಯನ್ ಗಿಲ್ಡ್ಸ್, ಹಿರೇಮಠ ಆರ್.ಬಿ. ಶಾಸನಗಳಲ್ಲಿ ಕರ್ನಾಟಕದ ವರ್ತಕರು, ಚಿದಾನಂದಮೂರ್ತಿ ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಎಕನಾಮಿಕ್ ಕಂಡಿಶನ್ಸ್ ಡ್ಯೂರಿಂಗ್ ದಿ ವಿಜಯನಗರ ಟೈಮ್ ಲೋಕಲ್ ಸೆಲ್ಫ್ ಗವರ್ನ್‌ಮೆಂಟ್ ಇನ್ ಮಿಡಿವಲ್ ಕರ್ನಾಟಕ[3] ಇತ್ಯಾದಿ ಕೃತಿಗಳು ರಚನೆಯಾಗಿವೆ. ಆದರೂ ಈ ಸಮುದಾಯಗಳ ಬಗ್ಗೆ ಹೆಚ್ಚಿನ ಅಧ್ಯಯನದ ಅವಶ್ಯಕತೆಯಿದೆ.

ಹೊಸಪೇಟೆಗೆ ಸಂಬಂಧಸಿದಂತೆ ಅನೇಕ ಅಧ್ಯಯನಗಳು ನಡೆದಿವೆ. ಅದರಲ್ಲಿ ಮುಖ್ಯವಾಗಿ ಡಾ.ಸಿ.ಮಹಾದೇವ, ಸುಬ್ಬಣ್ಣ ರೈ., ಮಾಧವ ಪೆರಾಜೆ ಇವರ ಹೊಸಪೇಟೆ ತಾಲ್ಲೂಕು ದರ್ಶನವೂ ಒಂದು. ಹಾಗೂ ತುಕಾರಾಮ ಎಚ್., ಹೊಸಪೇಟೆ ಚಾರಿತ್ರಿಕ ವಿವೇಚನೆ; ಐತಿಹ್ಯ: ಪರಿಶೀಲನೆ, ಕುಂಬಾಸ್., ಬಳ್ಳಾರಿ ಜಿಲ್ಲಾ ಸಾಂಸ್ಕೃತಿಕ ದರ್ಶನ, ಮಾಲತೇಶ ಪ್ರಕಾಶನ ಕುಂಚೂರು ತಾ ಹರಪನಹಳ್ಳಿ ಇವುಗಳಾಗಿವೆ.

ಅಧ್ಯಯನದ ಉದ್ದೇಶ

ಹೊಸಪೇಟೆಯಲ್ಲಿ ಸ್ಥಳೀಯ ವರ್ತಕರಲ್ಲದೆ, ಬೇರೆ ರಾಜ್ಯಗಳಿಂದ ವಲಸೆ ಬಂದ ವರ್ತಕರು ವ್ಯಾಪಾರ -ವಾಣಿಜ್ಯದಲ್ಲಿ ಪ್ರಮುಖವಾಗಿ ಕಂಡುಬರುತ್ತಾರೆ. ಉದಾರಹರಣೆಗೆ ಗುಜರಾತಿಗಳು ಹಾಗೂ ರಾಜಸ್ಥಾನಿಗಳು ಇಲ್ಲಿನ ಪ್ರಮುಖ ವರ್ತಕ ಸಮುದಾಯಗಳು ಈ ವರ್ತಕರು ಹೊಸಪೇಟೆಗೆ ವಲಸೆ ಬಂದ ಚಾರಿತ್ರಿಕ ಹಿನ್ನೆಲೆ, ಸಂದರ್ಭ ಹಾಗೂ ಕಾರಣಗಳನ್ನು ಈ ಅಧ್ಯಯನದಲ್ಲಿ ಚರ್ಚಿಸುವ ಪ್ರಯತ್ನ ಮಾಡಲಾಗಿದೆ. ಹೊರಗಿನಿಂದ ಬಂದ ವರ್ತಕ ಸಮುದಾಯಗಳು ಸ್ಥಳೀಯ ವರ್ತಕರೊಂದಿಗೆ ಹೊಂದಿರುವ ಸಂಬಂಧಗಳು, ವರ್ತಕರ ವಸತಿ ನೆಲೆಗಳು ಹಾಗೂ ವ್ಯಾಪಾರದ ನೆಲೆಗಳು, ಪ್ರಭುತ್ವದೊಂದಿಗೆ ಹೊಂದಿದ್ದು ಸಂಬಂಧಗಳು ಹಾಗೂ ನಗರಾಭಿವೃದ್ಧಿಗೆ ನೀಡಿದ ಕೊಡುಗೆ ಮುಂತಾದ ವಿಚಾರಗಳನ್ನು ಅಧ್ಯಯನ ನಡೆಸುವ ಉದ್ದೇಶವನ್ನು ಪ್ರಸ್ತುತ ಅಧ್ಯಯನವು ಹೊಂದಿದೆ.

ಅಧ್ಯಯನದ ವ್ಯಾಪ್ತಿ

ಪ್ರಸ್ತುತ ಪ್ರಬಂಧವು ಕಾಲದ ಮತ್ತು ಪ್ರದೇಶದ ಚೌಕಟ್ಟಿಗೆ ಒಳಪಟ್ಟಿದೆ. ಈ ಅಧ್ಯಯನವು ವಿಜಯನಗರದಿಂದ ಪ್ರಜಾಪ್ರಭುತ್ವದ ಅವಧಿಯವರೆಗಿನ ವಿವರಗಳನ್ನು ಒಳಗೊಂಡಿದೆ. ಇದು ಹೊಸಪೇಟೆ ನಗರದಲ್ಲಿ ನೆಲೆಸಿರುವ ವರ್ತಕ ಸಮುದಾಯಗಳ ಅಧ್ಯಯನವಾಗಿರುವದರಿಂದ ಇದರ ವ್ಯಾಪ್ತಿಯು ಹೊಸಪೇಟೆ ನಗರಕ್ಕೆ ಸೀಮಿತವಾಗಿದೆ.

ಅಧ್ಯಯನದ ಸ್ವರೂಪ

ಪ್ರಸ್ತುತ ಅಧ್ಯಯನವು ಹೊಸಪೇಟೆ ನಗರಲ್ಲಿ ನೆಲೆಸಿರುವ ವರ್ತಕ ಸಮುದಾಯಗಳ ಹಾಗೂ ಅವರ ಕಾರ್ಯಚಟುವಟಿಕೆಗಳ ಕುರಿತದ್ದಾಗಿದೆ. ಈ ಅಧ್ಯಯನವನ್ನು ಆರು ಅಧ್ಯಾಯಗಳಾಗಿ ವಿಂಗಡಿಸಲಾಗಿದೆ.

ಅಧ್ಯಾಯ ಒಂದರಲ್ಲಿ ಅಧ್ಯಯನದ ಉದ್ದೇಶ, ವ್ಯಾಪ್ತಿ ಹಾಗೂ ಸ್ವರೂಪದ ಜೊತೆಗೆ ಚರಿತ್ರೆಯ ಬದಲಾದ ಅಧ್ಯಯನ ವಿಧಾನದ ಕುರಿತಾಗಿಯೂ ಚರ್ಚಿಸಲಾಗಿದೆ.

ಅಧ್ಯಾಯ ಎರಡರಲ್ಲಿ ಹೊಸಪೇಟೆ ಪಟ್ಟಣದ ಚಾರಿತ್ರಿಕ ಹಿನ್ನೆಲೆಯನ್ನು ಅಧ್ಯಯನ ಮಾಡಲಾಗಿದೆ. ಈ ಅಧ್ಯಾಯದಲ್ಲಿ ಈ ಪಟ್ಟಣವನ್ನು ಆಳ್ವಿಕೆ ಮಾಡಿದ ಅನೇಕ ರಾಜವಂಶಗಳ ಬಗ್ಗೆ ಹಾಗೂ ಭೌಗೋಳಿಕ ಲಕ್ಷಣವನ್ನು ವಿವರಿಸಲಾಗಿದೆ. ಈ ಪಟ್ಟಣದಲ್ಲಿ ಆದಿ ಶಿಲಾಯುಗದಿಂದ ನವ ಶಿಲಾಯುಗದವರೆಗಿನ ಅನೇಕ ಕುರುಹುಗಳು ದೊರೆತಿವೆ. ನಂತರದ ಕಾಲಾವಧಿಯಲ್ಲಿ ಬರುವ ನಂದರು, ಶಾತವಾಹನರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ನೊಳಂಬರು, ಗಂಗರು, ಕಲ್ಯಾಣದ ಚಾಲುಕ್ಯರು, ಪಾಂಡ್ಯರು, ಕಳಚೂರಿಗಳು, ಹೊಯ್ಸಳರು, ಕುಮ್ಮಟದ ನಾಯಕರು, ವಿಜಯನಗರದ ಅರಸರು, ಪಾಳೆಗಾರರು, ಹೈದರ್‌ಅಲಿ, ಬ್ರಿಟಿಷರು, ಹಾಗೂ ನಿಜಾಮರ ಆಳ್ವಿಕೆಯ ಕುರಿತು ಚರ್ಚಿಸಲಾಗಿದೆ.[೪]

ಅಧ್ಯಾಯ ಮೂರರಲ್ಲಿ ನಗರದಲ್ಲಿ ನೆಲೆಸಿರುವ ಪ್ರಮುಖ ವರ್ತಕ ಸಮುದಾಯಗಳ ಕುರಿತು ಚರ್ಚಿಸಲಾಗಿದೆ. ಸ್ಥಳೀಯ ವರ್ತಕರು ಹಾಗೂ ವಲಸೆ ಬಂದ ವರ್ತಕ ಸಮುದಾಯಗಳ ಚಾರಿತ್ರಿಕ ಹಿನ್ನೆಲೆಯನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ವರ್ತಕ ಸಮುದಾಯಗಳ ವಸತಿ ನೆಲೆಗಳು, ಪಂಗಡಗಳು ಹಾಗೂ ವೃತ್ತಿಯ ಕುರಿತು ಅಧ್ಯಯನ ನಡೆಸಲಾಗಿದೆ.

ಅಧ್ಯಾಯ ನಾಲ್ಕರಲ್ಲಿ ವರ್ತಕ ಸಮುದಾಯಗಳು ರಾಜಪ್ರಭುತ್ವ, ವಸಾಹತು ಪ್ರಭುತ್ವ, ಹಾಗೂ ಪ್ರಜಾಪ್ರಭುತ್ವದ ಕಾಲಾವಧಿಗಳಲ್ಲಿ ಹೊಂದಿದ್ದ ಸ್ಥಾನಮಾನ, ಸವಲತ್ತು ಹಾಗೂ ಪ್ರಭುತ್ವದೊಂದಿಗಿನ ಅಂತರ್ ಸಂಬಂಧವನ್ನು ಚರ್ಚಿಸಲಾಗಿದೆ. ಈ ವರ್ತಕ ಸಮುದಾಯಗಳಿಗೆ ರಾಜಪ್ರಭುತ್ವದ ಕಾಲಾವಧಿಯಲ್ಲಿ ವರ್ತಕ ಸಮುದಾಯಗಳು ಮಹತ್ವದ ಪಾತ್ರವನ್ನು ವಹಿಸುತ್ತಿದ್ದವು. ಬ್ರಿಟಿಷರ ಕಾಲಾವಧಿಯಲ್ಲಿ ಅವರು ತಮ್ಮ ವ್ಯಾಪಾರದ ಉದ್ದೇಶಗಳಿಗನುಗುಣವಾಗಿ ವರ್ತಕರನ್ನು ಬಳಸಿಕೊಂಡರು. ಪ್ರಸ್ತುತ ಪ್ರಜಾಪ್ರಭುತ್ವದಲ್ಲಿ ವರ್ತಕ ಸಮುದಾಯಗಳು ಹೆಚ್ಚಿನ ಸ್ವಾತಂತ್ರ್ಯವನ್ನು ಪಡೆದುಕೊಂಡವು. ಈ ಮೂರು ಪ್ರಭುತ್ವಗಳು ವರ್ತಕ ಸಮುದಾಯಗಳ ಅಭಿವೃದ್ಧಿಗೆ ಹಾಗೂ ಆ ಮೂಲಕ ನಗರದ ಅಭಿವೃದ್ಧಿಗೆ ಹೇಗೆ ಪೂರಕವಾದವು ಎನ್ನುವ ವಿಚಾರವನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಅಧ್ಯಾಯ ಐದರಲ್ಲಿ ಹೊಸಪೇಟೆ ನಗರದಲ್ಲಿನ ವರ್ತಕ ಸಮುದಾಯಗಳು ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡು, ನಗರದ ಬೆಳವಣಿಗೆಗೆ ಕಾರಣರಾದ ಬಗೆಯನ್ನು ವಿವರಿಸಲಾಗಿದೆ. ಈ ಸಮುದಾಯಗಳು ತಾವು ವಾಸಿಸುವ ಪ್ರದೇಶದಲ್ಲಿ ತಮ್ಮ ಸಮುದಾಯಕ್ಕೆ ಸಂಬಂಧಿಸಿದಂತೆ ಶಿಕ್ಷಣ ಸಂಸ್ಥೆಗಳನ್ನು, ಧಾರ್ಮಿಕ ಸಂಸ್ಥೆಗಳನ್ನು ಹಾಗೂ ತಮ್ಮ ವೃತ್ತಿಗೆ ಸಂಬಂಧಿಸಿದಂತೆ ಸಂಘ-ಸಂಸ್ಥೆಗಳನ್ನು, ಹಾಗೂ ವ್ಯಾಪಾರದ ಮಳಿಗೆಗಳನ್ನು ಸ್ಥಾಪಿಸಿಕೊಂಡಿರುತ್ತಾರೆ.[೫] ಇದರ ಮೂಲಕ ಈ ಸಮುದಾಯಗಳು ನಗರದ ಬೆಳವಣಿಗೆ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಕಾರಣರಾಗಿದ್ದಾರೆ. ವ್ಯಾಪಾರದಲ್ಲಿ ಸಮುದಾಯಗಳಿಗೆ ಪೈಪೋಟಿ ಇದ್ದರೂ, ನಗರದಲ್ಲಿನ ಸಮುದಾಯಗಳು ಉತ್ತಮ ಸಂಬಂಧವನ್ನು ಹೊಂದಿವೆ. ಈ ಎಲ್ಲ ವಿಚಾರಗಳನ್ನು ಪ್ರಸ್ತುತ ಅಧ್ಯಾಯದಲ್ಲಿ ಕೂಲಕಂಷವಾಗಿ ಚರ್ಚಿಸಲಾಗಿದೆ. ಕೊನೆಯ ಅಧ್ಯಾಯದಲ್ಲಿ ಒಟ್ಟಾರೆ ಅಧ್ಯಯನದ ಫಲಿತಗಳನ್ನು ನೀಡವ ಪ್ರಯತ್ನ ಮಾಡಲಾಗಿದೆ. ವರ್ತಕರು, ವ್ಯಾಪಾರ-ವಾಣಿಜ್ಯ ಹಾಗೂ ನಗರೀಕರಣದ ಮೂಲಕ ಚರಿತ್ರೆಯನ್ನು ನೋಡುವ ಅಧ್ಯಯನ ವಿಧಾನದ ಮಹತ್ವದ ಕುರಿತೂ ಇಲ್ಲಿ ಚರ್ಚಿಸಲಾಗಿದೆ.

ಟಿಪ್ಪಣಿಗಳು

೧. ಮಹಾದೇವ ಸಿ., ಹಾಗೂ ಮತ್ತಿತರರು, ಹೊಸಪೇಟೆ ತಾಲ್ಲೂಕು ದರ್ಶನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨, ಪುಟ.೨-೩

೨. ಮೋಹನ್‌ಕೃಷ್ಣ ರೈ.ಕೆ., ವಸಾಹತು ಪೂರ್ವ ಕರ್ನಾಟಕದ ನಗರ ಚರಿತ್ರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬, ೧-೨

೩. ಹಿರೇಮಠ.ಬಿ.ಆರ್., ಶಾಸನಗಳಲ್ಲಿ ಕರ್ನಾಟಕದ ವರ್ತಕರು, ಧಾರವಾಡ, ೧೯೮೬, ಪುಟ.೪

೪. ಮಹಾದೇವ.ಸಿ., ಹಾಗೂ ಮತ್ತಿತರರು, ೨೦೦೨, ಪೂರ್ವೋಕ್ತ ಪುಟ.೫-೬೧

೫. ಮೋಹನ್‌ಕೃಷ್ಣ ರೈ.ಕೆ., ವಸಾಹತುಶಾಹಿ ಮತ್ತು ನಗರೀಕರಣ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭, ಪುಟ.೫-೨೫

• • •

ಅಧ್ಯಾಯ ಎರಡು

ಹೊಸಪೇಟೆ ಪಟ್ಟಣದ ಚಾರಿತ್ರಿಕ ಹಿನ್ನೆಲೆ

ಅಧ್ಯಾಯ ಎರಡು

ಹೊಸಪೇಟೆ ಪಟ್ಟಣದ ಚಾರಿತ್ರಿಕ ಹಿನ್ನೆಲೆ

ಭೌಗೋಳಿಕ ಲಕ್ಷಣ

ಇಂದಿನ ಕರ್ನಾಟಕ ರಾಜ್ಯದ ಪ್ರಮುಖ ಜಿಲ್ಲೆಗಳಲ್ಲಿ ಬಳ್ಳಾರಿಯೂ ಒಂದು. ಬಳ್ಳಾರಿ ಜಿಲ್ಲೆಯಲ್ಲಿ ಹೊಸಪೇಟೆ ಪ್ರಮುಖ ತಾಲೂಕು ಕೇಂದ್ರವಾಗಿದೆ. ಹೊಸಪೇಟೆ ತಾಲೂಕು ಪ್ರದೇಶವನ್ನು ಭೌಗೋಳಿಕವಾಗಿ ಎರಡು ಭಾಗಗಳಲ್ಲಿ ಗುರುತಿಸಲಾಗಿದೆ. ತಾಲೂಕಿನ ಹೆಚ್ಚು ವಿಶಾಲವಾಗಿರುವ ಭಾಗವನ್ನು ಈಶಾನ್ಯದಲ್ಲಿ ಸಿರಗುಪ್ಪ, ಪೂರ್ವದಲ್ಲಿ ಬಳ್ಳಾರಿ, ದಕ್ಷಿಣದಲ್ಲಿ ಸಂಡೂರು ಹಾಗೂ ಉತ್ತರದಲ್ಲಿ ಕೊಪ್ಪಳ ಜಿಲ್ಲೆ ಪ್ರದೇಶಗಳು ಸುತ್ತುವರೆದಿವೆ. ನೈರುತ್ಯಕ್ಕಿರುವ ತಾಲೂಕಿನ ಮತ್ತೊಂದು ಭಾಗ ಪೂರ್ವದಲ್ಲಿ ಸಂಡೂರು, ದಕ್ಷಿಣದಲ್ಲಿ ಕೂಡ್ಲಿಗಿ, ಪಶ್ಚಿಮದಲ್ಲಿ ಹಗರಿಬೊಮ್ಮನಹಳ್ಳಿ ಮತ್ತು ಉತ್ತರದಲ್ಲಿ ಜಲಾಶಯದ ಹಿನ್ನೀರಿನ ಪ್ರದೇಶಗಳಿಂದ ಸುತ್ತುವರಿದಿದೆ.[೧] ೮೯೪.೮ ಚದರ ಕಿ.ಮೀ. ವಿಸ್ತೀರ್ಣವುಳ್ಳ ತಾಲೂಕು ಪ್ರದೇಶವು ಜನವಸತಿಯುಳ್ಳ ಒಟ್ಟು ೭೫ ಗ್ರಾಮಗಳನ್ನು ಹೊಂದಿದೆ.[೨] ೭೬°೨೬,೧೩, ರೇಖಾಂಶ ಮತ್ತು ೧೫°.೧೫,೩೬ ಅಕ್ಷಾಂಶ ಇರುವ ಹೊಸಪೇಟೆಯು ಸಮುದ್ರಮಟ್ಟದಿಂದ ೪೬೭ ಮೀಟರ್ ಎತ್ತರದಲ್ಲಿದೆ.[೩]

ಹೊಸಪೇಟೆಯು ಬಳ್ಳಾರಿ ಜಿಲ್ಲೆಯ ತಾಲೂಕು ಹಾಗೂ ಉಪ ವಿಭಾಗ ಕೇಂದ್ರವಾಗಿದೆ. ಇದು ಬಳ್ಳಾರಿಯಿಂದ ಪಶ್ಚಿಮ ದಿಕ್ಕಿಗೆ ೬೪ ಕಿ.ಮೀ. ದೂರದಲ್ಲಿದೆ. ನೀರಾವರಿ, ಕೃಷಿ ಮತ್ತು ಕೈಗಾರಿಕಾ, ಸಂಪನ್ಮೂಲ ಹೊಂದಿರುವ ಈ ಪರಿಸರವು ನಗರದ ನಿರಂತರ ಬೆಳವಣಿಗೆಗೆ ಕಾರಣವಾಗಿದೆ.[೪]

ಹೊಸಪೇಟೆಯಲ್ಲಿನ ಬೆಟ್ಟಗುಡ್ಡಗಳು ಪ್ರಾಕೃತಿಕ ಸೌಂದರ್ಯವನ್ನು ಹೆಚ್ಚಿಸಿವೆ. ಸಂಡೂರಿನ ಬೆಟ್ಟಸಾಲುಗಳು ಸಹ ಅತೀ ಎತ್ತರವಾಗಿದ್ದು ಕಬ್ಬಿಣದ ಅದಿರಿನಿಂದ ಕೂಡಿವೆ. ಪಟ್ಟಣಕ್ಕೆ ಹೊಂದಿಕೊಂಡಂತಿರುವ ಜೋಳದರಾಶಿ ಗುಡ್ಡ ಆಕರ್ಷಕವಾಗಿದೆ. ಉತ್ತರದಲ್ಲಿ ಹರಿಯುವ ತುಂಗಭದ್ರಾ ನದಿ ಹೊಸಪೇಟೆ ತಾಲೂಕು ಮತ್ತು ಕೊಪ್ಪಳ ಜಿಲ್ಲೆಯ ಗಡಿಯಾಗಿ ಹರಿಯುತ್ತದೆ. ಜಲಾಶಯದಿಂದ ಹೊರಟ ಇದರ ಕಾಲುವೆಗಳು

ಹೊಸಪೇಟೆ ಪಟ್ಟಣದೊಳಗೆ ಹರಿದು ನಂತರ ಕೃಷಿ ಭೂಮಿಗೆ ನೀರುಣಿಸುತ್ತವೆ. ಕಪ್ಪು ಜೇಡಿಮಣ್ಣು, ಕೆಂಪು ಜೆಡಿಮಣ್ಣು ಮತ್ತು ಮರಳು ಮಿಶ್ರಿತ ಮಣ್ಣುಗಳನ್ನು ಕಾಣುತ್ತೇವೆ. ಈ ಪ್ರದೇಶದಲ್ಲಿ ಭತ್ತ, ಕಬ್ಬು, ಬಾಳೆ, ಜೋಳ, ಶೇಂಗಾ, ದ್ವಿದಳ ಧಾನ್ಯಗಳು ಮುಂತಾದ ಬೆಳೆಗಳನ್ನು ಬೆಳೆಯುತ್ತಾರೆ. ತಾಲೂಕಿನಲ್ಲಿ ಸುಮಾರು ೨೯.೦೦೦ ಹೆಕ್ಟೇರ್ ಮೀಸಲು ಅರಣ್ಯ ಪ್ರದೇಶವಿದೆ. ವಾರ್ಷಿಕ ಮಳೆಯ ಪ್ರಮಾಣ ಸರಾಸರಿ ೬೮೪.೮೩ ಮಿ.ಮೀ. ಇದು ವಿಪುಲ ನೈಸರ್ಗಿಕ ಸಂಪನ್ಮೂಲಗಳನ್ನು ಹೊಂದಿರುವ ಪ್ರದೇಶವಾಗಿದೆ.

ಹೊಸಪೇಟೆ ತಾಲೂಕಿನ ಗ್ರಾಮಗಳನ್ನು ೪ ಹೋಬಳಿಗಳಡಿಯಲ್ಲಿ ವಿಂಗಡಿಸಲಾಗಿದೆ. ಅವುಗಳೆಂದರೆ ಮರಿಯಮ್ಮನಹಳ್ಳಿ, ಹೊಸಪೇಟೆ, ಕಮಲಾಪುರ ಮತ್ತು ಕಂಪ್ಲಿ.[೫]

ಹೊಸಪೇಟೆಯು ಇಂದು ಗಣಿಗಾರಿಕೆಗೆ ಹೆಸರುವಾಸಿಯಾಗಿದ್ದು, ಇಲ್ಲಿನ ಅದಿರಿಗೆ ದೇಶ ವಿದೇಶಗಳಲ್ಲಿ ಬೇಡಿಕೆ ಕಂಡುಬಂದಿದೆ. ಅತ್ಯಂತ ಹೆಚ್ಚಿನ ಆದಾಯವನ್ನು ಹೊಂದಿರುವ ಹಾಗೂ ತೆರಿಗೆಯನ್ನು ಪಾವತಿಸುವ ಪ್ರದೇಶವಾಗಿಯೂ ಇದು ಗುರುತಿಸಿಕೊಂಡಿದೆ. ಸ್ಥಳೀಯವಾಗಿ ಉದ್ಯೋಗಾವಕಾಶಗಳೂ ನಿರ್ಮಾಣವಾಗಿವೆ.

ಹೊಸಪೇಟೆ ಪ್ರದೇಶವು ಗಣಿಗಾರಿಕೆ, ಕೃಷಿ, ಕೈಗಾರಿಕೆ, ತುಂಗಭದ್ರ ಅಣೆಕಟ್ಟು, ವಿಶ್ವವಿಖ್ಯಾತ ಹಂಪಿ, ಮತ್ತು ಕನ್ನಡ ವಿಶ್ವವಿದ್ಯಾಲಯ ಈ ಎಲ್ಲವುಗಳ ಮೂಲಕ ಕರ್ನಾಟಕ ರಾಜ್ಯದಲ್ಲಿ ತನ್ನದೇ ಆದ ವೈಶಿಷ್ಟ್ಯತೆಯನ್ನು ಹೊಂದಿದೆ.

ಚಾರಿತ್ರಿಕ ಹಿನ್ನೆಲೆ

ಹೊಸಪೇಟೆ ಪ್ರದೇಶವು ಪ್ರಾಗೈತಿಹಾಸಿಕ ಕಾಲದಿಂದಲೂ ಮಾನವನ ವಾಸಸ್ಥಾನವಾಗಿದೆ. ಈ ಪ್ರದೇಶದಲ್ಲಿ ಆದಿಶಿಲಾಯುಗದ ಅವಶೇಷಗಳು ದೊರಕಿವೆ. ಆ ಕಾಲದ ಕಲ್ಲಿನ ಮತ್ತು ಲೋಹದ ಆಯುಧಗಳು ಮತ್ತು ಒರಟು ಮಣ್ಣಿನ ಪಾತ್ರೆಗಳ ಅವಶೇಷಗಳು ಅಲ್ಲಲ್ಲಿ ಕಂಡುಬಂದಿವೆ. ಗ್ರಾನೈಟ್ ಗುಡ್ಡಗಳ ಮೇಲೆ ಇಂತಹ ವಸಾಹತುಗಳಿದ್ದ ಗುರುತುಗಳು ಕಂಡುಬಂದಿರುವುದನ್ನು ಕಾಣಬಹುದಾಗಿದೆ.[೬] ಪ್ರಾಚೀನ ಕಾಲದಿಂದಲೂ ಮಾನವನ ಚಟುವಟಿಕೆಗಳ ಕೇಂದ್ರವಾಗಿದ್ದ ಈ ಪ್ರದೇಶವು ಅವನ ನಿರಂತರ ಬದುಕಿನ ಅವಶೇಷಗಳನ್ನು ಹೊಂದಿದೆ. ತಾಲೂಕಿನ ಗಡಿಯಾಗಿ ಹರಿಯುವ ತುಂಗಭದ್ರ ನದಿಯ ಹಂಪಿ ಪರಿಸರದಲ್ಲಿ ಸೂಕ್ಷ್ಮಶಿಲಾಯುಗ ಕಾಲದ ಉಪಕರಣಗಳು ಬೆಳಕಿಗೆ ಬಂದಿವೆ.

ರಾಬರ್ಟ್ ಬ್ರೂಸ್ ಫೂಟ್ ಎಂಬುವವನು ಜಿಲ್ಲೆಯ ಪ್ರಾಗೈತಿಹಾಸಿಕ ನೆಲೆಗಳನ್ನು ಸರ್ವೇಕ್ಷಣೆ ಮಾಡಿದ್ದಾನೆ. ಈತನು ಸುಮಾರು ೨೨ ನೆಲೆಗಳನ್ನು ಗುರುತಿಸಿದ್ದಾನೆ. ಅವುಗಳಲ್ಲಿ ಸುಮಾರು ೩೬ ನೆಲೆಗಳು ಪ್ರಮುಖವಾಗಿವೆ ಎಂದು ತಿಳಿಸುತ್ತಾನೆ.[೭] ಮದ್ರಾಸ್ ಪ್ರಾಂತ್ಯದ ಇತರೆ ಜಿಲ್ಲೆಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಶಿಲಾಯುಗ ನೆಲೆಗಳನ್ನು ಮತ್ತು ಅವಶೇಷಗಳನ್ನು ಬಳ್ಳಾರಿ ಜಿಲ್ಲೆಯಲ್ಲಿ ಗುರುತಿಸಲಾಗಿದೆ ಎಂದು ೧೯೦೪-೧೯೦೮ರ ಭಾರತದ ಗೆಜೆಟಿಯರ್ ತಿಳಿಸುತ್ತದೆ.

ಹೊಸಪೇಟೆಯ ತಾಲೂಕಿನ ಗಾದಿಗನೂರು ಮತ್ತು ಕುರಿಕುಪ್ಪಿ ಬೆಟ್ಟಗಳಲ್ಲಿ ಹಳೆ ಶಿಲಾಯುಗಕ್ಕೆ ಸಂಬಂಧಿಸಿದ ಅವಶೇಷಗಳು ಪತ್ತೆಯಾಗಿವೆ. ಈ ಪ್ರದೇಶದ ಸಮೀಪವಿರುವ ಜೇಡರ ಬೆಳಗಲ್ಲು, ದರೋಜಿ, ಬದನಹಟ್ಟಿಬೆಟ್ಟ, ಜೋಗ, ಹಾಲಕುಂಟಿಹಳ್ಳಿಯ ಸಮೀಪ ಮತ್ತು ಬಳ್ಳಾರಿ ಜಿಲ್ಲೆಯ ದಕ್ಷಿಣಕ್ಕಿರುವ ತಾಮ್ರ ಪರ್ವತದ ತಪ್ಪಲಲ್ಲಿ ಹಳೆ ಶಿಲಾಯುಗಕ್ಕೆ ಸಂಬಂಧಿಸಿದ ಅವಶೇಷಗಳು ಬೆಳಕಿಗೆ ಬಂದಿವೆ. ಈ ಶಿಲಾಯುಗ ಅವಶೇಷಗಳನ್ನು ಬೆಣಚು ಮತ್ತು ಹಿಮಟೈಟ್ ಶಿಲೆಗಳಿಂದ ಮಾಡಲಾಗಿದೆ. ಇದರಿಂದ ಹೊಸಪೇಟೆ ಪ್ರದೇಶದಲ್ಲಿ ಹಳೆಶಿಲಾಯುಗ ಕಾಲದಿಂದಲೂ ಮಾನವನ ಅಸ್ತಿತ್ವವಿರುವುದು ಸುಸ್ಪಷ್ಟ.[೮] ಹಂಪೆಯ ಸುತ್ತಮುತ್ತ ಸೂಕ್ಷ್ಮಶಿಲಾಯುಧಗಳು ಕಂಡುಬರುತ್ತವೆ. ಮುಖ್ಯವಾಗಿ ಶೃಂಗಾರದ ಹೆಬ್ಬಾಗಿಲಿನ ಹತ್ತಿರದ ಬೆಟ್ಟದ ತಪ್ಪಲಿನಲ್ಲಿ ಸೂಕ್ಷ್ಮ ಶಿಲಾಯುಧಗಳು ಹೆಚ್ಚಿನ ಸಂಖ್ಯೆಯಲ್ಲಿ ದೊರೆತಿವೆ.[೯] ಹೊಸಪೇಟೆ ತಾಲೂಕಿನ ನಿಂಜಾಪುರದ ಸಮೀಪ ಕಂಡುಬಂದಿರುವ ಬೂದಿದಿಬ್ಬವು ನವಶಿಲಾಯುಗ ಸಂಸ್ಕೃತಿಗೆ ಪ್ರಮುಖ ಉದಾಹರಣೆಯಾಗಿದೆ. ಇದನ್ನು ಸ್ಥಳೀಯರು ವಾಲಿ ದಿಬ್ಬವೆಂದು ಕರೆಯುತ್ತಾರೆ. ಈ ರೀತಿಯ ಬೂದಿ ದಿಬ್ಬಗಳು ಜಿಲ್ಲೆಯ ಸಂಗನಕಲ್ಲು ಮತ್ತು ಕಪ್ಪುಗಲ್ಲುಗಳಲ್ಲಿ ಕಂಡುಬರುತ್ತವೆ. ಈ ದಿಬ್ಬಗಳು ಸಗಣಿ ಸುಡುವಿಕೆಯಿಂದಾಗಿವೆ ಎಂದು ತಿಳಿದುಬಂದಿವೆ ಎಂದು ವಿದ್ವಾಂಸರು ಊಹಿಸಿದ್ದಾರೆ.[೧೦]

ಹೊಸಪೇಟೆ ತಾಲೂಕಿನ ಕುರಿಕುಪ್ಪಿಬೆಟ್ಟದ ನೆಲೆಯಲ್ಲಿ ಹಳೆ ಶಿಲಾಯುಗ, ಸೂಕ್ಷ್ಮ ಶಿಲಾಯುಗ, ನವ ಶಿಲಾಯುಗದ ಜೊತೆಯಲ್ಲಿ ಬೃಹತ್ ಶಿಲಾಯುಗ ಅಥವಾ ಕಬ್ಬಿಣ ಯುಗದ ಅವಶೇಷಗಳು ಕಂಡುಬಂದಿವೆ. ಹೊಸಪೇಟೆಯ ಪ್ರದೇಶವೂ ಸಹ ತನ್ನದೆ ಆದ ಪ್ರಾಚೀನತೆಯನ್ನು ಹೊಂದಿದೆ. ರಾಮಾಯಣ ಮಹಾಕಾವ್ಯದಲ್ಲಿ ಬರುವ ವಾನರರು ಇಂದಿನ ಹಂಪಿ ಪರಿಸರದ ಕಿಷ್ಕಿಂದ ಪ್ರದೇಶದಲ್ಲಿ ವಾಸಿಸುತ್ತಿದ್ದರು ಎಂದು ಹೇಳಲಾಗಿದೆ.[೧೧] ಐದು ಪರ್ವತಗಳು ಹಾಗೂ ಪಂಪಾಸರೋವರ, ಶಬರಿ ಆಶ್ರಮ, ಆಂಜಿನೇಯನ ಜನ್ಮಸ್ಥಳ ಮೊದಲಾದವು ಇಲ್ಲಿವೆ. ಪುರಾಣಗಳಲ್ಲಿ ಹಂಪೆಯನ್ನು ಪಂಪಾಕ್ಷೇತ್ರವೆಂದು ಕರೆಯಲಾಗಿದೆ. ಪಂಪಾ ಎಂಬುದು ತುಂಗಭದ್ರೆಯ ಮತ್ತೊಂದು ಹೆಸರು. ಪಂಪಾಸರೋವರ ಅನೇಕ ಋಷಿಗಳ ತಪೋಭೂಮಿಯಾಗಿತ್ತೆಂದು ಐತಿಹಾಸಿಕ ದಾಖಲೆಗಳಿಂದ ತಿಳಿದು ಬರುತ್ತದೆ.

ಹೇಮಕೂಟ, ಕಾಳಿದಾಸ ಹಾಗೂ ಬಾಣರು ತಮ್ಮ ಕೃತಿಗಳಲ್ಲಿ ಹೇಳಿರುವ ಹೇಮಕೂಟವಾಗಿದೆ ಎಂದು ತಿಳಿಯಲಾಗಿದೆ. ಹರಿಹರ, ರಾಘವಾಂಕ ಮತ್ತು ವಾದಿರಾಜರು ಹೇಮಕೂಟವನ್ನು ಕುರಿತು ಹೇಳಿದ್ದಾರೆ. ಜೈನರಿಗೂ, ಹಂಪೆಯ ಹೇಮಕೂಟ ಪ್ರದೇಶವು ಪುಣ್ಯಸ್ಥಳವಾಗಿತ್ತು ಎಂಬ ವಿಷಯವು ಕನ್ನಡದ ಪ್ರಪ್ರಥಮ ಕೃತಿಯಾದ ವಡ್ಡಾರಾಧನೆಯಿಂದ ತಿಳಿದು ಬರುತ್ತದೆ. ಹೇಮಕೂಟದ ಚರಿತ್ರೆಯನ್ನು ಶೋಧಿಸಲು ಹೊರಟರೆ ಪ್ರಾಚೀನ ಕನ್ನಡ ನಾಡಿನ ಚರಿತ್ರೆಯೂ ಬೆಳಕಿಗೆ ಬರುವುದೆಂದು ಭಾವಿಸಲಾಗಿದೆ.[೧೨]

ಪುರಾಣಗಳ ಪ್ರಕಾರ ಸಮಗ್ರ ಭಾರತವು ನಂದರ ಅಧೀನಕ್ಕೊಳಪಟ್ಟಿತೆಂದು ತಿಳಿದುಬರುತ್ತದೆ. ಕೆಲವು ಮಾಹಿತಿಗಳಿಂದ ಕ್ರಿ.ಪೂ. ನಾಲ್ಕನೆಯ ಶತಮಾನದಲ್ಲಿ ನಂದರು ಬಳ್ಳಾರಿ ಪ್ರದೇಶವನ್ನು ಆಳಿದರೆಂದು

ತಿಳಿದುಬರುತ್ತದೆ. ನಂತರ ಕಾಲದ ಕೆಲವು ಕನ್ನಡ ಶಾಸನಗಳು. (ಕ್ರಿ.ಶ.೧೦ ರಿಂದ ೧೩ನೇಯ ಶತಮಾನ) ನಂದರು ಕುಂತಳ ದೇಶವನ್ನಾಳಿದ ಬಗ್ಗೆ ಬೆಳಕು ಚೆಲ್ಲುತ್ತವೆ. ಅಂತಹ ಒಂದು ಶಾಸನವು ಕುಂತಳ ರಾಜ್ಯಕ್ಕೆ ನಂದರು ಅಧಿಪತಿಗಳಾಗಿದ್ದರೆಂದು ತಿಳಿಸುತ್ತದೆ. ಇದರಿಂದ ಮೌರ್ಯರ ಪೂರ್ವದಲ್ಲಿ ನಂದರು ಈ ಭಾಗವನ್ನು ಆಳ್ವಿಕೆ ನಡೆಸಿದ್ದರು ಎನ್ನುವ ಅಂಶವನ್ನು ತಿಳಿಯಬಹುದಾಗಿದೆ.[೧೩]

ನಂದರ ನಂತರ ಭಾರತವನ್ನಾಳಿದ ಮೌರ್ಯ ಚಕ್ರವರ್ತಿ ಅಶೋಕನ ಅನೇಕ ಬಂಡೆಗಲ್ಲು ಶಾಸನಗಳು ಈ ಪ್ರದೇಶದ ಸಮೀಪದಲ್ಲಿ ದೊರೆತಿವೆ. ಕೂಡ್ಲಿಗಿ ತಾಲೂಕಿನಲ್ಲಿ ಸಿಕ್ಕಿರುವ ಕ್ರಿ.ಪೂ. ೨೫೮ರ ಶಿಲಾಸ್ತಂಭ ಶಾಸನ ವಾಕ್ಯವಾಡಿದೆ ಮತ್ತು ನಿಟ್ಟೂರು ಉದೇಗೊಳ್ಳ ಶಾಸನಗಳು ಅಶೋಕನ ಹೆಸರನ್ನು ನೇರವಾಗಿ ಹೇಳುವುದರಿಂದ ಚಾರಿತ್ರಿಕ ಮಹತ್ವ ಪಡೆದಿವೆ. ನಂತರದಲ್ಲಿ ಅಶೋಕ ಆಳಿದನೆಂದು ತಿಳಿಯುತ್ತದೆ. ಅಶೋಕ ಮರಣ ಹೊಂದಿದ ಮೇಲೆ ಈ ಪ್ರದೇಶವನ್ನು ಮಹಾರಥಿಗಳು ಸ್ವತಂತ್ರವಾಗಿ ಆಳ್ವಿಕೆ ಮಾಡಿದ್ದಾರೆ. ನಂತರ ದಕ್ಷಿಣದಲ್ಲಿ ಶಾತವಾಹನರು ಪ್ರಾಬಲ್ಯಕ್ಕೆ ಬಂದರು. ಸುಮಾರು ಕ್ರಿ.ಶ. ೨೨೦ ರಿಂದ ಕ್ರಿ.ಶ. ೨೩೦ರ ವರೆಗೆ ರಾಜ್ಯವಾಳಿದ ಇವರ ಮೂಲವನ್ನು ಕುರಿತಂತೆ ವಿವಿಧ ಅಭಿಪ್ರಾಯಗಳಿವೆ. ಸಕುಥಂಕರ್‌ರವರು ಶಾತವಾಹನರ ಕೆಲವು ಸಂಸ್ಕೃತಿ ಶಾಸನಗಳಲ್ಲಿ ವ್ಯಕ್ತವಾಗುವ ಶಾತಮಹನೀಹಾರ ಮತ್ತು ಶಾತವಾಹನೀರದ್ದು ಅಂದರೆ ಶಾತವಾದಿ ಪ್ರದೇಶ ಮೂಲ ಪದಗಳ ಆಧಾರದ ಮೇಲೆ ಅವರು ಕನ್ನಡ ಪ್ರದೇಶದವರೆಂದು, ಅವರು ಬಳ್ಳಾರಿ ಪ್ರದೇಶದವರೆಂದು ಗುರುತಿಸುತ್ತಾರೆ. ಕರ್ನಾಟಕದಲ್ಲೇ ಹೆಚ್ಚಿಗೆ ದೊರೆಯುವ ಶಾತವಾಹನರ ಶಾಸನಗಳಲ್ಲಿ ಅವರನ್ನು ಕುಂತಳಸ್ವಾಮಿ ಎಂದು ಕರೆಯಲಾಗಿದೆ.[೧೪]

ಕರ್ನಾಟಕದ ಕುಂತಳವು ಭೀಮಾ-ವಿದ್ಯಾವತಿ ನದಿಗಳ ನಡುವೆ, ಪಶ್ಚಿಮ ಘಟ್ಟಗಳಿಂದ ಸೀಮಿತವಾಗಿ ಶಿವಮೊಗ್ಗ, ಚಿತ್ರದುರ್ಗ, ಬಳ್ಳಾರಿ, ಧಾರವಾಡ, ಬಿಜಾಪುರ ಮತ್ತು ನಿಜಾಮರ ರಾಜ್ಯದ ಭಾಗಗಳಿಂದ ಕೂಡಿತ್ತು. ಈ ಮೇಲಿನ ಎಲ್ಲ ಅಂಶಗಳು ಈ ಪ್ರದೇಶದಲ್ಲಿನ ಶಾತವಾಹನರ ಆಳ್ವಿಕೆಯನ್ನು ಸ್ಪಷ್ಟವಾಗಿ ತಿಳಿಸುತ್ತವೆ. ಶಾತವಾಹನರ ಕೊನೆಯ ಅರಸರಲ್ಲಿ ಒಬ್ಬನಾದ ಪುಳುಮಾಯಿಗೆ ಸೇರಿದ ಶಾಸನವೊಂದು ಬಳ್ಳಾರಿ ಜಿಲ್ಲೆಯಲ್ಲಿ ದೊರೆತಿದೆ.[೧೫]

ಶಾತವಾಹನರ ಅವನತಿಯ ನಂತರ ಅವರ ಸಾಮ್ರಾಜ್ಯವು ವಾಯುವ್ಯದಲ್ಲಿ ಅಭೀರರು, ದಕ್ಷಿಣದಲ್ಲಿ ಮತ್ತು ಆಂಧ್ರ ಪ್ರಾಂತ್ಯದಲ್ಲಿ ಇಕ್ಷ್ವಾಕುಗಳಲ್ಲಿ ಭಾಗಗೊಂಡಿತು. ಇವರಲ್ಲಿ ಚುಟುಗಳು ಕರ್ನಾಟಕದ ಭಾಗಗಳಲ್ಲಿ ಆಳಿದರು.[೧೬]

ಇತ್ತೀಚಿಗೆ ಹಂಪಿಯಲ್ಲಿ ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆಯವರು ಕೈಗೊಂಡ ಉತ್ಖನನದ ಪರಿಣಾಮವಾಗಿ ಬ್ರಾಹ್ಮಿ ಲಿಪಿ ಮತ್ತು ಪ್ರಾಕೃತ ಭಾಷೆಯ ಶಾಸನಗಳಿರುವ ಸುಣ್ಣಕಲ್ಲಿನ ಫಲಕಗಳು ಬೆಳಕಿಗೆ ಬಂದಿವೆ.

ಹಂಪೆ ಪ್ರದೇಶದಲ್ಲಿ ಗಾಂಧಾರಶೈಲಿಯ ಬಿಳಿಯ ಜೇಡಿಮಣ್ಣಿನ ಗೊಂಬೆಗಳು ದೊರೆತಿದ್ದು, ಅವುಗಳ ಕಾಲ ಕ್ರಿ.ಶ. ೨ನೇ ಶತಮಾನವೆಂದು ಡಾ.ಅ.ಸುಂದರ ತಿಳಿಸುತ್ತಾರೆ.[೧೬] ಹಂಪೆಯು ಕೂಡ ಉತ್ತರದ ಸನ್ನತಿ, ದಕ್ಷಿಣದ ಚಂದ್ರವಳ್ಳಿ, ವಾಯುವ್ಯದ ವೆಡ್‌ಗಾಂವ್ ಮಾದವಪುರ ಮತ್ತು ಕೊಲ್ಲಾಪುರ ಮುಂತಾದ ಪ್ರಸಿದ್ಧ ಪ್ರಾಚೀನ ವ್ಯಾಪಾರ ಕೇಂದ್ರಗಳಂತೆ ಒಂದು ಪ್ರಮುಖ ಕೇಂದ್ರವಾಗಿದ್ದು, ದೂರ ಪ್ರದೇಶಗಳ ವರ್ತಕರನ್ನು ಆಕರ್ಷಿಸಿತ್ತು. ಹೀಗೆ ಚುಟುಗಳ ಆಳ್ವಿಕೆಯಲ್ಲಿ ಈ ಪ್ರದೇಶವು ಬೌದ್ಧ ಧರ್ಮದ ಪ್ರಮುಖ ಕೇಂದ್ರವಾಗುವುದರ, ಜೊತೆಗೆ ವ್ಯಾಪಾರ ವಾಣಿಜ್ಯವನ್ನು ಹೊಂದಿತ್ತು.

ನಂತರದ ಕಾಲದಲ್ಲಿ ಕದಂಬರ ಆಳ್ವಿಕೆ ಕಂಡುಬರುತ್ತದೆ. ಕದಂಬರ ಮಯೂರಶರ್ಮನ ಶಾಸನವು ನೆರೆಯ ಚಿತ್ರದುರ್ಗದ ಚಂದ್ರವಳ್ಳಿಯಲ್ಲಿ ದೊರೆತಿದೆ. ಇವರ ರಾಜ್ಯವು ಪಶ್ಚಿಮ ತೀರದಿಂದ ಬಳ್ಳಾರಿ ಪ್ರದೇಶದವರೆಗೂ ಹಬ್ಬಿತು. ಹೊಸಪೇಟೆಯ ಆಗ್ನೇಯ ದಿಕ್ಕಿಗಿರುವ ಸಂಡೂರು ಪ್ರದೇಶ ಮತ್ತು ಅಲ್ಲಿನ ಕುಮಾರಸ್ವಾಮಿ ದೇವಾಲಯವು ಕದಂಬರ ಕಾಲದಲ್ಲೇ ಪ್ರಾಮುಖ್ಯತೆಯನ್ನು ಪಡೆದಿತ್ತು. ಬಾದಾಮಿ ಚಾಲುಕ್ಯರ ಪ್ರಾಬಲ್ಯದಿಂದಲೂ ಕದಂಬರು ಅವರ ಸಾಮಂತರಾಗಿ ಮುಂದುವರಿಯುತ್ತಾರೆ.[೧೭]

ಬಾದಾಮಿ ಚಾಲುಕ್ಯರು

ಬಾದಾಮಿ ಚಾಲುಕ್ಯರು ಒಂದನೆಯ ಪುಲಿಕೇಶಿಯ ಕಾಲಕ್ಕೆ ಪ್ರಾಬಲ್ಯಕ್ಕೆ ಬಂದರು. ಈತನ ಮಗನಾದ ಶಾಂತಿವರ್ಮನು (ಕ್ರಿ.ಶ. ೫೬೬-೫೯೭) ಕೊಂಕಣದ ಮೌರ್ಯರನ್ನು, ಬವನಾಸಿಯ ಕದಂಬರನ್ನು ಹಾಗೂ ಬಳ್ಳಾರಿ ಮತ್ತು ಕರ್ನೂಲ್ ಪ್ರಾಂತ್ಯಗಳನ್ನಾಳುತ್ತಿದ್ದನು.

ಇಮ್ಮಡಿ ಪುಲಿಕೇಶಿಯ ಐಹೊಳೆ ಪ್ರಶಸ್ತಿ ಶಾಸನವು ಈ ಪ್ರದೇಶ ಸೇರಿದಂತೆ ಇಡೀ ದಕ್ಷಿಣ ಪ್ರಾಂತವು ಅವನ ಆಳ್ವಿಕೆಗೆ ಒಳಗಾದ ಬಗ್ಗೆ ತಿಳಿಸುತ್ತದೆ. ಬಾದಾಮಿ ಚಾಲುಕ್ಯರ ಕಾಲದಲ್ಲಿ ನಿರ್ಮಾಣವಾದ ದುರ್ಗ ದೇವಾಲಯವೊಂದು ಹೊಸಪೇಟೆಯ ಸಮೀಪದ ಸಂಡೂರಿನ ಕುಮಾರಸ್ವಾಮಿ ಬೆಟ್ಟದಲ್ಲಿದೆ. ಇಲ್ಲಿರುವ ಕುಮಾರಸ್ವಾಮಿ ಮತ್ತು ಕಾರ್ತಿಕೇಯ ಬಾದಾಮಿ ಚಾಲುಕ್ಯರ ಆರಾಧ್ಯ ದೈವವಾಗಿತ್ತು. ಇದು ಕದಂಬರ ಕಾಲದಲ್ಲೇ ಪ್ರಖ್ಯಾತಿ ಪಡೆದಿತ್ತು. ಇಮ್ಮಡಿ ಪುಲಿಕೇಶಿಯು ತನ್ನ ಮಕ್ಕಳನ್ನು ಬಳ್ಳಾರಿ ಮತ್ತು ಕರ್ನೂಲ್ ಪ್ರದೇಶಗಳಿಗೆ ಪ್ರಾಂತ್ಯಾಧಿಕಾರಿಗಳನ್ನಾಗಿ ನೇಮಿಸಿದನು. ಬಾದಾಮಿಯು ಪಲ್ಲವರ ದಾಳಿಗೀಡಾದಾಗ. ಚಾಲುಕ್ಯರ ಆದಿತ್ಯವರ್ಮ ಮತ್ತು ಚಂದ್ರಾದಿತ್ಯರು ಕೆಲಕಾಲ ಈ ಪ್ರದೇಶವನ್ನಾಳಿದರು. ಆದಿತ್ಯವರ್ಮನು ಈ ಪರಿಸರದ ಮುಂಡಕಲ್ ಮತ್ತು ಪೆರಗೆರೆ ಗ್ರಾಮಗಳನ್ನು ದತ್ತಿ ಬಿಟ್ಟಿದ್ದನು. ವಿಜಯಾದಿತ್ಯನು ತನ್ನ ಸೈನ್ಯದೊಂದಿಗೆ ಪಂಪಾತೀರ್ಥದಲ್ಲಿ ಬೀಡುಬಿಟ್ಟಾಗ ಭೂಮಿಯನ್ನು ದತ್ತಿ ಕೊಟ್ಟನೆಂದು ಕ್ರಿ.ಶ. ೬೮೯ರ ತಾಮ್ರ ಶಾಸನವೊಂದು ಉಲ್ಲೇಖಿಸುತ್ತದೆ. ಬಾದಾಮಿ ಚಾಲುಕ್ಯರು ಕ್ರಿ.ಶ. ೭೫೩ರ ವರೆಗೂ ಈ ಪ್ರದೇಶವನ್ನು ಆಳಿದರು.[೧೮]

ರಾಷ್ಟ್ರಕೂಟರು

ರಾಷ್ಟ್ರಕೂಟರ ಅರಸ ದಂತಿದುರ್ಗನು ಬಾದಾಮಿ ಚಾಲುಕ್ಯರ ದೊರೆ ಇಮ್ಮಡಿ ಕೀರ್ತಿವರ್ಮನನ್ನು ಕ್ರಿ.ಶ ೭೫೨ರಲ್ಲಿ ಸೋಲಿಸಿ, ಮಾನ್ಯಖೇಟದಿಂದ ಆಳ್ವಿಕೆಯನ್ನು ಆರಂಭಿಸಿದನು. ಎ.ಎಸ್. ಅಲ್ಟೇಕರರು ರಾಷ್ಟ್ರಕೂಟರು ಕನ್ನಡಿಗರಾಗಿದ್ದು, ಎರಡು ಶತಮಾನಕ್ಕೂ ಮೀರಿ ಆಳ್ವಿಕೆ ನಡೆಸಿದರೆಂದು ತಿಳಿಸುತ್ತಾರೆ. ನಂತರ ಬಂದ ಒಂದನೇಯ ಕೃಷ್ಣ ಮತ್ತು ಧ್ರುವ ರಾಷ್ಟ್ರಕೂಟರ ಪರಮಾಧಿಕಾರವನ್ನು ಉತ್ತರ ಮತ್ತು ದಕ್ಷಿಣ ಭಾರತಗಳಲ್ಲಿ ಸ್ಥಾಪಿಸಿದರು. ಧ್ರುವನ ಮಗನಾದ ಮೂರನೆಯ ಗೋವಿಂದನು ನೊಳಂಬವಾಡಿಯನ್ನು ಜಯಿಸಿದನು. ಇಂದಿನ ಚಿತ್ರದುರ್ಗ, ತುಮಕೂರು, ಬಳ್ಳಾರಿ, ಅನಂತಪುರ ಮತ್ತು ಕೋಲಾರ ಜಿಲ್ಲೆಗಳ ಕೆಲ ಭಾಗಗಳನ್ನು ಈ ರಾಜಮನೆತನ ಒಳಗೊಂಡಿತ್ತು.

ಹೊಸಪೇಟೆಯ ಸಮೀಪದ ಕುಡತಿನಿ ಶಾಸನವೊಂದು ರಾಷ್ಟ್ರಕೂಟರ ಖೊಟ್ಟಿಗನನ್ನು ಉಲ್ಲೇಖಿಸುತ್ತದೆ. ರಾಷ್ಟ್ರಕೂಟರ ಕಾಲದಲ್ಲಿ ಹಂಪಿಯಲ್ಲಿ ಅನೇಕ ದೇವಾಲಯಗಳು ನಿರ್ಮಾಣಗೊಂಡವು. ಆ ಕಾಲಕ್ಕಾಗಲೇ ಹಂಪೆಯು ಪ್ರಮುಖ ಧಾರ್ಮಿಕ ಕ್ಷೇತ್ರವಾಗಿತ್ತು. ರಾಷ್ಟ್ರಕೂಟರು ಉತ್ತರ ಭಾರತದ ದಿಗ್ವಿಜಯಗಳಿಂದಾಗಿ ಕರ್ನಾಟಕ ಇತಿಹಾಸದಲ್ಲಿ ಪ್ರಮುಖ ಸ್ಥಾನ ಪಡೆದಿದ್ದರು.[೧೯]

ನೊಳಂಬರು

ರಾಷ್ಟ್ರಕೂಟರ ಸಾಮಂತರಾಗಿ ನೊಳಂಬರು ಮತ್ತು ಗಂಗರು ಈ ಪ್ರದೇಶವನ್ನು ಆಳಿದರು. ಮೊದಲಿಗೆ ಬಳ್ಳಾರಿ ಪ್ರದೇಶವು ನೊಳಂಬವಾಡಿಯ ಒಂದು ಭಾಗವಾಗಿತ್ತು. ಇವರ ರಾಜಧಾನಿಗಳು ಉಚ್ಚಂಗಿ ಹರಪನಹಳ್ಳಿ ತಾಲೂಕು, ಹೆಂಜೇರು ಅಥವಾ ಹೇಮಾವತಿ ಮಡಕಶಿರ ತಾಲೂಕು, ಕಂಪ್ಲಿ, ಹೊಸಪೇಟೆ ತಾಲೂಕುಗಳಾಗಿದ್ದವು. ಮೊದಲಿಗೆ ಬಾದಾಮಿ ಚಾಲುಕ್ಯರ ಸಾಮಂತರಾಗಿದ್ದ ನೊಳಂಬರು, ತಲಕಾಡಿನ ಗಂಗರಿಗೂ ಸಾಮಂತರಾಗಿದ್ದರು.

ರಾಷ್ಟ್ರಕೂಟರ ನಂತರ ನೊಳಂಬರು ಕಲ್ಯಾಣಿ ಚಾಲುಕ್ಯರ ಅಧೀನರಾಗಿ ಕಂಪ್ಲಿಯಿಂದ ಈ ಪ್ರದೇಶವನ್ನಾಳಿದರು. ಕ್ರಿ.ಶ. ೧೦೧೪ರ ಶಾಸನವೊಂದು ಇರಿವ ನೊಳಂಬವಾಡಿ ರಾಜರು ಮತ್ತು ಆತನ ಹೆಂಡತಿಯಾದ ಮಬ್ಬರಸಿಯು ಸಂತಾಪದಲ್ಲಿನ (ಹಂಪೆ) ಮಹಾಕಾಲ ದೇವರಿಗೆ ತೆರಿಗಳನ್ನು ದತ್ತಿ ಬಿಟ್ಟ ಬಗ್ಗೆ ತಿಳಿಸುತ್ತದೆ.

ಗಂಗರು ಬಳ್ಳಾರಿ ಜಿಲ್ಲೆಯ ಕೆಲ ಭಾಗಗಳನ್ನು ತಮ್ಮ ಹತೋಟಿಯಲ್ಲಿಟ್ಟುಕೊಂಡಿದ್ದರು. ದುರ್ವಿನೀತ ಮತ್ತು ಶ್ರೀ ಪುರುಷ ತಮ್ಮ ತಮ್ಮ ರಾಜ್ಯವನ್ನು ಈ ಪ್ರದೇಶದ ಹಗರಿ ನದಿಯವರಿಗೆ ವಿಸ್ತರಿಸಿದ್ದು, ಧ್ರುವನ ಮಗನಾದ ಕಂಬರಸನು ಗಂಗಾವಾಡಿಯ ರಾಜ್ಯಪಾಲನಾಗಿದ್ದನು. ಧ್ರುವನ ಕಿರಿಯ ಸಹೋದರನಾದ ಗೋವಿಂದ ಪ್ರಭೂತ ಸೇನನು ಪಟ್ಟಕ್ಕೆ ಬಂದ ನಂತರ ಗಂಗವಾಡಿಯನ್ನು ತನ್ನ ವಶಕ್ಕೆ ತೆಗೆದುಕೊಳ್ಳುತ್ತಾನೆ.[೨೦]

ಕಲ್ಯಾಣದ ಚಾಲುಕ್ಯರು

ಕ್ರಿ.ಶ. ೯೭೩ರಲ್ಲಿ ಕಲ್ಯಾಣದ ಚಾಲುಕ್ಯರು ತಮ್ಮ ಆಳ್ವಿಕೆಯನ್ನು ಪ್ರಾರಂಭಿಸಿದರು. ಈ ವಂಶದ ಇಮ್ಮಡಿ ತೈಲನು, ರಾಷ್ಟ್ರಕೂಟರ ಕೊನೆಯ ದೊರೆಯನ್ನು ಪದಚ್ಯುತಗೊಳಿಸಿ ತನ್ನ ಅಧಿಕಾರವನ್ನು ಸ್ಥಾಪಿಸಿದನು. ಪಾಂಚಾಲದೇವನನ್ನು ಯುದ್ಧದಲ್ಲಿ ಸೋಲಿಸಿ ಬಳ್ಳಾರಿ, ಪ್ರಾಂತ್ಯವನ್ನು ಚಾಲುಕ್ಯರ ವಶಕ್ಕೆ ತೆಗೆದುಕೊಂಡನು.[೨೧]

ಕಲ್ಯಾಣ ಚಾಲುಕ್ಯರ ಶಾಸನಗಳು ಬಳ್ಳಾರಿ ಜಿಲ್ಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ದೊರೆತಿವೆ. ಆದರೆ ಹೊಸಪೇಟೆ ತಾಲೂಕಿನಲ್ಲಿ ಅತೀ ವಿರಳವಾಗಿವೆ. ಹೊಸಪೇಟೆ ಸುತ್ತಮುತ್ತಲಿನ ಪ್ರದೇಶ ಸ್ವಲ್ಪ ಕಾಲ ಚೋಳರ ವಶದಲ್ಲಿತ್ತು ಎಂದು ತಿಳಿಯುತ್ತದೆ.

ಕ್ರಿ.ಶ. ೧೦೧೪ರ ಗೋಣಹುಳಿನ ಶಾಸನವು (ಹೊಸಪೇಟೆ ತಾಲೂಕು) ಸಾಮಂತನಾದ ಇರಿವ ನೊಳಂಬಾದಿ ರಾಜನು ಕಂಪ್ಲಿ ನೆಲೆಯಿಂದ ಈ ಪ್ರದೇಶದ ಆಡಳಿತವನ್ನು ನೋಡಿಕೊಳ್ಳುತ್ತಿದ್ದನು ಎಂದು ತಿಳಿಸುತ್ತದೆ.

ಚೋಳರ ರಾಜಾದಿ ರಾಜನು ನೊಳಂಬವಾಡಿ ಮೇಲೆ ದಾಳಿ ಮಾಡಿ ಕಂಪ್ಲಿಯನ್ನು ಹಾಳುಮಾಡಿದ ನಂತರ ಕಂಪ್ಲಿಯು ಚಾಲುಕ್ಯರ ಪ್ರಾಂತದ ರಾಜಧಾನಿಯಾಗಿತ್ತು. ಕೋಗಳಿಯ ಕ್ರಿ.ಶ. ೧೦೫೪ರ ಶಾಸನವು ಒಂದನೆಯ ಸೋಮೇಶ್ವರನು ಕಂಪ್ಲಿಯಿಂದ ರಾಜ್ಯವಾಳಿದನೆಂದು ತಿಳಿಸುತ್ತದೆ.

ವಿಕ್ರಮಾದಿತ್ಯನ ಕ್ರಿ.ಶ. ೧೦೭೬ರ ಹಂಪಿಯ ಶಾಸನವು ಮಹಾಪ್ರಧಾನ ದಂಡನಾಯಕ ಸೋಮೇಶ್ವರ ಚಟ್ಟೋಪಾಧ್ಯಾಯನು ಮಠವೊಂದರಲ್ಲಿ ಪುರಾಣವನ್ನು ಹೇಳುವ ಉಪಾಧ್ಯಾಯರಿಗೆ ಪ್ರತಿವರ್ಷ ೮೦ ಲೊಕ್ಕಿಗದ್ಯಾರಣಗಳನ್ನು ದತ್ತಿ ನೀಡಿದ ಬಗ್ಗೆ ತಿಳಿಸುತ್ತದೆ.

ಕಲ್ಯಾಣಿ ಚಾಲುಕ್ಯರಿಗೂ, ಚೋಳರಿಗೂ ಅನೇಕ ಯುದ್ಧಗಳು ನಡೆದರೂ ಚೋಳರು ತಮ್ಮ ಪ್ರಯತ್ನದಲ್ಲಿ ಯಶಸ್ಸನ್ನು ಗಳಿಸಲಿಲ್ಲ. ಇದರಿಂದಾಗಿ ಈ ಪ್ರದೇಶವು ಚಾಲುಕ್ಯ ಮತ್ತು ಚೋಳರ ರಾಜಕೀಯ ಜೂಜಾಟದ ಕೇಂದ್ರಭಾಗದಂತಿತ್ತು. ಕಲ್ಯಾಣಿ ಚಾಲುಕ್ಯರ ಕೊನೆಯ ದೊರೆ ನಾಲ್ಕನೆಯ ಸೋಮೇಶ್ವರ (೧೧೫೮-೧೧೯೮) ಮತ್ತು ಈತನ ಸಹೋದರರು ಬಿಜ್ಜಳನಿಂದ ತಪ್ಪಿಸಿಕೊಂಡು ಬಂದು ಬಳ್ಳಾರಿ ಮತ್ತು ಚಿತ್ರದುರ್ಗ ಪ್ರದೇಶಗಳಲ್ಲಿ ನೆಲೆ ನಿಂತರು. ಸುಮಾರು ೨೦ ವರ್ಷದ ನಂತರ ಅಂದರೆ ಕ್ರಿ.ಶ. ೧೧೮೩ರ ವೇಳೆಗೆ ನಾಲ್ಕನೆಯ ಸೋಮೇಶ್ವರನು ಚಾಲುಕ್ಯ ರಾಜ್ಯವನ್ನು ಮತ್ತೆ ಗಳಿಸಿದನು. ಆದರೆ ಈ ವೇಳೆಗೆ ಹೊಯ್ಸಳರು ಮತ್ತು ಸೇವುಣರು ಪ್ರಬಲರಾಗಿದ್ದು ಅಂತಿಮವಾಗಿ ಚಾಲುಕ್ಯ ರಾಜ್ಯವು ಅವರಲ್ಲಿ ಹಂಚಿಹೋಯಿತು.[೨೨]

ಪಾಂಡ್ಯರು

ಪಾಂಡ್ಯರು 'ಉಚ್ಚಂಗಿಯ' ಪಾಂಡ್ಯರೆಂದೇ ಪ್ರಸಿದ್ಧರಾಗಿದ್ದವರು. ಇವರು ಚಾಲುಕ್ಯರ ಸಾಮಂತರಾಗಿ ನೊಳಂಬವಾಡಿಯನ್ನು ಆಳುತ್ತಿದ್ದರು. ಇವರ ಕಾಲಕ್ಕೆ ಹೊಸಪೇಟೆ ನೆರೆಯ ಸಂಡೂರಿನ ಕುಮಾರಸ್ವಾಮಿ ದೇವಾಲಯ ತುಂಬಾ ಪ್ರಸಿದ್ಧಿಯನ್ನು ಪಡೆದಿತ್ತು. ಈಗಿನ ಹೊಸಪೇಟೆ ಪ್ರದೇಶ ಸಿಮರವಾಡಿ ನಾಡಿನ ಭಾಗವಾಗಿತ್ತು. ಕ್ರಿ.ಶ. ೧೧೪೮ರ ಒರುವಾಯಿ ಶಾಸನವು ದೊರವಾಡಿಯನ್ನು ಕುರಿತು ಉಲ್ಲೇಖಿಸುತ್ತದೆ. ಉಚ್ಚಂಗಿ ಪಾಂಡ್ಯರು ಮುಂದೆ ಕಲ್ಯಾಣದಲ್ಲಿ ಅಧಿಕಾರಕ್ಕೆ ಬಂದ ಕಳಚೂರಿ ಅರಸರ ಸಾಮಂತರಾಗಿ ನೊಳಂಬವಾಡಿಯನ್ನು ಆಳುತ್ತಾರೆ.[೨೩]

ಕಳಚೂರಿಗಳು

ಕಲ್ಯಾಣ ಚಾಲುಕ್ಯರ ಮೂರನೆಯ ತೈಲಪನು ಕ್ರಿ.ಶ. ೧೧೬೨ರಲ್ಲಿ ಮರಣ ಹೊಂದಿದ ಬಳಿಕ ಬಿಜ್ಜಳನು ಚಾಲುಕ್ಯ ಸಿಂಹಾಸನಕ್ಕೆ ಅಧಿಪತಿಯಾದನು. ಈ ಪ್ರದೇಶದ ಉಚ್ಚಂಗಿ ಪಾಂಡ್ಯರ ವಿಜಯ ಪಾಂಡ್ಯನನ್ನು ಮತ್ತು ಸಿಂಹನಾಡಿಯ ಬೊಮ್ಮಲೋವರಸನನ್ನು ಯುದ್ಧದಲ್ಲಿ ಸೋಲಿಸಿ ತನ್ನ ಸಾಮಂತರನ್ನಾಗಿ ಮಾಡಿಕೊಳ್ಳುತ್ತಾನೆ. ಬಿಜ್ಜಳನ ಶಾಸನವೊಂದು ಹೊಸಪೇಟೆಯಲ್ಲಿ ದೊರೆತಿದೆ.[೨೪] ಈ ವಂಶದ ಸೋಮದೇವ (೧೧೧೭ - ೧೧೭೬) ಮತ್ತು ಇತರರು ಕ್ರಿ.ಶ. ೧೧೮೩ರ ವೇಳೆಗೆ ಕಲ್ಯಾಣಿ ಚಾಲುಕ್ಯರ ನಾಲ್ಕನೆಯ ಸೋಮೇಶ್ವರ ಕಳೆದುಹೋಗಿದ್ದ ರಾಜ್ಯವನ್ನು ಮತ್ತೇ ಗಳಿಸಿಕೊಂಡು ಚಾಲುಕ್ಯ ಆಳ್ವಿಕೆಯನ್ನು ಆರಂಭಿಸಿದನು.[೨೫] ಬಳ್ಳಾರಿ ಅನಂತಪುರ ಮತ್ತು ಚಿತ್ರದುರ್ಗದ ಶಾಸನಗಳು ಈ ಪ್ರದೇಶವನ್ನು ನಾಲ್ಕನೆಯ ಸೋಮೇಶ್ವರನು ಆಳ್ವಿಕೆ ಮಾಡಿದನು ಎಂಬುದನ್ನು ತಿಳಿಸುತ್ತವೆ. ಹಂಪೆಯ ಕ್ರಿ.ಶ. ೧೧೯೯ರ ಶಾಸನವು ಕುರುಗೋಡಿನ ಇಮ್ಮಡಿ ರಾಚಮಲ್ಲನ ಮಗನಾದ ವೀರಕಲಿ ದೇವರಸನನ್ನು ಮತ್ತು ವಿರೂಪಾಕ್ಷ ತೀರ್ಥ ರಕ್ಷಣೆಗಾಗಿ ಮತಂಗ ಪರ್ವತವನ್ನು ಆಳುತ್ತಿದ್ದ ಸಾಮಂತನಾದ ಮಾಲೆಯ ನಾಯಕನನ್ನು ಉಲ್ಲೇಖಿಸುತ್ತವೆ.[೨೬] ಮುಂದೆ ಹೊಯ್ಸಳರು ಮತ್ತು ಸೇವುಣರು ಚಾಲುಕ್ಯ ರಾಜ್ಯಕ್ಕಾಗಿ ಅನೇಕ ಯುದ್ಧಗಳನ್ನು ಮಾಡಿದರು. ಆದರೆ ತುಂಗಭದ್ರಾ ಪ್ರದೇಶವನ್ನು ಹತೋಟಿಯಲ್ಲಿಟ್ಟುಕೊಳ್ಳುವಲ್ಲಿ ಹೊಯ್ಸಳರು ಯಶಸ್ವಿಯಾದರು.

ಹೊಯ್ಸಳರು

ಕಲ್ಯಾಣದ ಚಾಲುಕ್ಯರ ಸಾಮಂತರಾಗಿದ್ದ ಹೊಯ್ಸಳರು ಕ್ರಿ.ಶ. ೧೦೪೭ರಲ್ಲಿ ಈ ಪ್ರದೇಶದ ಕುಮ್ಮಟವನ್ನು ತಮ್ಮ ಭದ್ರ ನೆಲೆಯನ್ನಾಗಿ ಮಾಡಿಕೊಂಡಿದ್ದರು. ಕಲ್ಯಾಣಿ ಚಾಲುಕ್ಯರಿಗೂ ಮತ್ತು ಹೊಯ್ಸಳರಿಗೂ ವೈವಾಹಿಕ ಸಂಬಂಧವಿತ್ತು. ಬಲ್ಲಾಳನ ಕ್ರಿ.ಶ. ೧೨೧೭ರ ಶಾಸನವು ಈ ಪ್ರದೇಶದ ಕಂಪ್ಲಿ ಮತ್ತು ನೆರೆಯ ಕುರುಗೋಡು ಸ್ಥಳಗಳನ್ನು ಉಲ್ಲೇಖಿಸುತ್ತದೆ. ಕ್ರಿ.ಶ. ೧೨೧೯ರಲ್ಲಿ ಸಂಡೂರಿನ ಕಾರ್ತಿಕೇಯ ತಪೋವನಕ್ಕೆ ದತ್ತಿ ನೀಡಿದ ಉಲ್ಲೇಖವಿದೆ.[೨೭] ಕ್ರಿ.ಶ ೧೨೩೫ ರಿಂದ ೧೨೫೩ರ ವರೆಗೆ ಆಳಿದ ಸೋಮೇಶ್ವರನು

ಹೊಯ್ಸಳ ರಾಜ್ಯದ ಉತ್ತರದ ಭಾಗಗಳಿಗೆ ಅಷ್ಟಾಗಿ ಗಮನ ಕೊಡಲಿಲ್ಲ. ಕ್ರಿ.ಶ. ೧೨೩೭ ಹಂಪಿ ಶಾಸವು ಸೋಮೇಶ್ವರನು ವಿರೂಪಾಕ್ಷ ದೇವರಿಗೆ ದತ್ತಿ ಕೊಟ್ಟ ಬಗ್ಗೆ ತಿಳಿಸುತ್ತದೆ.[೨೮] ಸೇವುಣರ ಶಾಸನಗಳು ಬಳ್ಳಾರಿ ಮತ್ತು ಚಿತ್ರದುರ್ಗ ಜಿಲ್ಲೆಯಲ್ಲಿ ಕಂಡುಬರುವುದರಿಂದ ಈ ಪ್ರದೇಶಗಳು ಕೆಲಕಾಲ ಅವರ ವಶದಲ್ಲಿದ್ದವೆಂದು ಹೇಳಬಹುದು.

ಕ್ರಿ.ಶ. ೧೨೯೧ರಲ್ಲಿ ಪಟ್ಟಕ್ಕೆ ಬಂದ ಮೂರನೆಯ ಬಲ್ಲಾಳನು ಈ ಪ್ರದೇಶಕ್ಕೆ ಸಂಬಂಧಿಸಿದಂತೆ ಕುಮ್ಮಟದ ಕಂಪ್ಲಿ ದೇವನೊಡನೆ ಸೆಣಸಬೇಕಾಯಿತು. ಕ್ರಿ.ಶ. ೧೩೨೦ರ ಸುಮಾರಿಗೆ ಬಲ್ಲಾಳನು ಕಂಪಿಲದೇವನನ್ನು ಸೋಲಿಸಿ ದೂರಮಾಡಿ ಮತ್ತು ಕಂಪಿಲವನ್ನು ಕೈವಶ ಮಾಡಿಕೊಂಡನೆಂದು ಅಭಿಪ್ರಾಯ ಪಡಲಾಗಿದೆ. ಕ್ರಿ.ಶ. ೧೩೨೭ರಲ್ಲಿ ಕುಮ್ಮಟವು ತನ್ನ ಅಸ್ತಿತ್ವ ಕಳೆದುಕೊಂಡ ಮೇಲೆ ಬಲ್ಲಾಳನು ಈ ಪ್ರದೇಶದಲ್ಲಿ ಹೆಚ್ಚಿನ ಆಸಕ್ತಿ ವಹಿಸಿದನು. ಬಲ್ಲಾಳನು ರಾಜ್ಯದ ರಕ್ಷಣೆಗಾಗಿ ರಾಜ್ಯದ ಉತ್ತರ ಭಾಗಗಳಿಗೆ ಹೊಸಪಟ್ಟಣವನ್ನು ನಿರ್ಮಿಸಿ ಇಲ್ಲಿ ಆಗಾಗ್ಗೆ ತಂಗುತ್ತಿದ್ದನು. ಹೊಸಪಟ್ಟಣವೆಂಬುದು ವಿಜಯನಗರದ ಮೊದಲಿನ ಹೆಸರಾಗಿತ್ತು. ಕ್ರಿ.ಶ ೧೩೨೦ರ ಶಾಸನವೊಂದು ಬಲ್ಲಾಳ 'ಪುದುಪಡೈವೀಡು' ಎಂದರೆ ಹೊಸಪಟ್ಟಣದಲ್ಲಿದ್ದಾನೆಂದು ತಿಳಿಸುವುದು.[೨೯]

ಅನಂತರ ಅರಸೀಕೆರೆ ಶಾಸನವೂ ಸಹ ಬಲ್ಲಾಳನು ಹೊಸಪಟ್ಟಣದಲ್ಲಿದ್ದನೆಂದು ತಿಳಿಸುವುದು. ಗುಬ್ಬಿಯ ಶಾಸನ ವಿರೂಪಾಕ್ಷ ಹೊಸಪಟ್ಟಣವೆಂದು, ಹೊಸಕೋಟೆಯ ಶಾಸನ ಬಲ್ಲಾಳ ವಿಜಯ ವಿರುಪಾಕ್ಷಪುರವೆಂದು ಹಾಗೂ ದೇವನಹಳ್ಳಿ ಶಾಸನ ವಿರೂಪಾಕ್ಷಪಾದ ಎಂದು ಉಲ್ಲೇಖಿಸಿದೆ. ಮುಮ್ಮಡಿ ಬಲ್ಲಾಳನ ಮಗನ ಹೆಸರು ನಾಲ್ವಡಿ ಬಲ್ಲಾಳ, (ವೀರ ವಿಜಯ ಬಲ್ಲಾಳ, ವೀರ ವಿರೂಪಾಕ್ಷ ಬಲ್ಲಾಳ ಹಾಗೂ ಹಂಪೆವೊಡೆಯ ಎಂದಿದೆ) ಹಂಪೆಯ ಮುಖ್ಯದೇವರ ಹೆಸರೂ ವಿರೂಪಾಕ್ಷ, ನಾಲ್ಕನೆಯ ಬಲ್ಲಾಳನ ಹೆಸರು ವಿರೂಪಾಕ್ಷ ಎಂದಿರುವುದರಿಂದ ಸಹಜವಾಗಿಯೇ ವಿರೂಪಾಕ್ಷ ಪಟ್ಟಣ ಎಂಬುದು ಹಂಪೆಯ ಇನ್ನೊಂದು ಹೆಸರಾಗಿದೆ. ಹನ್ನೆರಡನೆಯ ಶತಮಾನದ ಶಾಸನವೊಂದು ಹಂಪೆಯ ವಿರೂಪಾಕ್ಷ ತೀರ್ಥ ಎಂದು ಕರೆದಿದೆ. ವಿರೂಪಾಕ್ಷ ತೀರ್ಥ ಅಥವಾ ವಿರೂಪಕ್ಷ ಪಾದ, ವಿರೂಪಾಕ್ಷ ಪಟ್ಟಣ ಎಂಬುದು ಹಂಪೆಯ ಬೇರೆ ಬೇರೆ ಹೆಸರುಗಳಾಗಿವೆ. ಮೂರನೆಯ ಬಲ್ಲಾಳನು ಮೂರು ರಾಜಧಾನಿಗಳನ್ನು ಹೊಂದಿದ್ದನು. ಒಂದನೆಯದು ದ್ವಾರಸಮುದ್ರ (ಹಳೆಬೀಡು, ಹಾಸನ ಜಿಲ್ಲೆ) ಎರಡನೆಯದು ವಿಜಯ ವಿರೂಪಾಕ್ಷ ಹೊಸಪಟ್ಟಣ, ಕ್ರಿ.ಶ. ೧೩೩೬ರಿಂದ ಮಹಾಮಂಡಲೇಶ್ವರನಾಗಿ ಹರಿಹರನು ಹಂಪೆಯ ಹೊಸಪಟ್ಟಣದಿಂದ ಹೊಯ್ಸಳ ರಾಜ್ಯದ ಉತ್ತರ ಭಾಗಗಳನ್ನು ಆಳಿದನು. ಕ್ರಿ.ಶ. ೧೩೩೯ರಲ್ಲಿ ಮೂರನೆಯ ಬಲ್ಲಾಳನು ಹಂಪೆಯಲ್ಲಿ ತಂಗಿದ್ದನೆಂದು ಶಾಸನವೊಂದು ತಿಳಿಸುತ್ತದೆ. ಕ್ರಿ.ಶ. ೧೩೪೨ರಲ್ಲಿ ಮೂರನೆಯ ಬಲ್ಲಾಳ ತೀರಿಕೊಂಡನು. ೧೩೮೩ರಲ್ಲಿ ಈತನ ಮಗನಾದ ನಾಲ್ಕನೆಯ ಬಲ್ಲಾಳನು ಹಂಪೆಯ ಹೊಸ ಪಟ್ಟಣದಲ್ಲಿ ಪಟ್ಟಾಭಿಷಿಕ್ತನಾದನು ಆದರೆ ಕ್ರಿ.ಶ. ೧೩೪೬ರಲ್ಲಿ ಮರಣ ಹೊಂದಿದನು. ಇಲ್ಲಿಗೆ ಹೊಯ್ಸಳರ ಆಳ್ವಿಕೆಯು ಈ ಪ್ರದೇಶ ಸೇರಿದಂತೆ

ಕೊನೆಯಾಗುತ್ತದೆ. ಮುಂದೆ ಸಂಗಮ ಸಹೋದರರು ಈ ಪ್ರದೇಶದಲ್ಲಿ ವಿಜಯನಗರ ಸಾಮ್ರಾಜ್ಯವನ್ನು ಕಟ್ಟಿ ಬೆಳೆಸಿದರು.[೩೦]

ಕುಮ್ಮಟ ದುರ್ಗದ ನಾಯಕರು

ಕ್ರಿ.ಶ. ೧೨೮೦ರ ವೇಳೆಗೆ ಮುಮ್ಮಡಿ ಸಿಂಗೇಯನಾಯಕ ಎಂಬುವವನು ಕರ್ನಾಟಕದ ರಾಜಕೀಯ ಚರಿತ್ರೆಯಲ್ಲಿ ಕಾಣಿಸಿಕೊಳ್ಳುತ್ತಾನೆ. ಇವನು ಮೊದಲು ಹೊಯ್ಸಳರ ಪರವಿದ್ದು, ನಂತರ ಸೇವುಣರ ಪಕ್ಷ ವಹಿಸುತ್ತಾನೆ. ಇತನು ದೊರವದಿ (ಇಂದಿನ ದರೋಜಿ, ಬಳ್ಳಾರಿ ತಾಲೂಕ) ಮತ್ತು ಕಂಪಲಿ ಪ್ರದೇಶಗಳನ್ನು ಗೆದ್ದಿದ್ದನು. ಕುಮ್ಮಟ ದುರ್ಗವನ್ನು ಗೆದ್ದಿದ್ದನು ಹಾಗೂ ರಾಜಧಾನಿಯನ್ನಾಗಿ ಮಾಡಿಕೊಂಡಿದ್ದನು. ವಿದೇಶಿಯ ಪ್ರವಾಸಿಗಳು ತಮ್ಮ ಕಥನಗಳಲ್ಲಿ ಕುಮ್ಮಟ ದುರ್ಗದ ಬಗೆಗೆ ವಿವರಣೆ ನೀಡಿದ್ದಾರೆ. ಕಂಪಿಲನ ಮತ್ತೊಂದು ರಾಜಧಾನಿ, ಹೊಸಮಲೆದುರ್ಗ. ಇದು ಹೊಸಪೇಟೆ ತಾಲೂಕಿನ ರಾಮಘುಡ. ಹಂಪಿಯ ಹೇಮಕೂಟದಲ್ಲಿ ದೇವಾಲಯವೊಂದರ ಶಾಸನ, ಮುಮ್ಮಡಿ ಸಿಂಗೇಯ ನಾಯಕನ ಮಗನಾದ ವೀರ ಕಂಪಿಲದೇವನು ಸಂಗಮೇಶ್ವರ ದೇವರ ಆರಾಧಕನಾಗಿದ್ದನು ಎಂದು ತಿಳಿಸುತ್ತದೆ.[೩೧]

ಕುಮ್ಮಟ ರಾಜ್ಯವು ಸುಲ್ತಾನನ ವಶವಾಯಿತು. ಈ ಭಾಗಕ್ಕೆ ಮಲಿಕ್ ಮಹಮ್ಮದ್ ಎಂಬುವನು ರಾಜ್ಯಪಾಲನಾಗಿ ನೇಮಕಗೊಂಡನು. ರಕ್ಷಣೆಗಾಗಿ ಸುಲ್ತಾನನು ಹೊಸದುರ್ಗದಲ್ಲಿ (ಆನೆಗೊಂದಿ) ಸೈನ್ಯವಿಟ್ಟಿದ್ದನು. ಇಲ್ಲಿಂದ ಸೈನಿಕರನ್ನು ದೆಹಲಿಗೆ ಕೊಂಡೊಯ್ಯುತ್ತಿದ್ದವರಲ್ಲಿ ವಿಜಯನಗರದ ಸಂಸ್ಥಾಪಕರಾದ ಹರಿಹರ ಮತ್ತು ಬುಕ್ಕರೆಂಬ ಸಹೋದರರು ಇದ್ದರೆಂದು ಅಭಿಪ್ರಾಯಪಡಲಾಗಿದೆ.[೩೨] ದೆಹಲಿಯ ರಾಜಕೀಯ ಅಸ್ಥಿರತೆಯಿಂದ ಈ ಪ್ರದೇಶದಿಂದ ಸುಲ್ತಾನನು ನಿರ್ಗಮಿಸುತ್ತಾನೆ. ಈ ಮುನ್ನ ಕ್ರಿ.ಶ. ೧೩೨೦ರಲ್ಲೇ ಮೂರನೆಯ ಬಲ್ಲಾಳನು ಕುಮ್ಮಟದ ಮೇಲೆ ಯುದ್ಧಮಾಡಿ ದೊರೆವಾಡಿ (ದರೋಜಿ) ಮತ್ತು ಹಂಪೆ ಪ್ರದೇಶಗಳನ್ನು ತನ್ನ ವಶಕ್ಕೆ ತಗೆದುಕೊಂಡನೆಂದು ಹೇಳಲಾಗಿದೆ.[೩೩]

ಕ್ರಿ.ಶ. ೧೩೩೯ರಲ್ಲಿ ಮೂರನೆಯ ಬಲ್ಲಾಳನು ಹೊಸಪಟ್ಟಣದ (ಹಂಪೆ)ಲ್ಲಿ ಸುಖ ಸಂಕಾಥ ವಿನೋದಗಳಿಂದ ಕೂಡಿದ ಜೀವನ ನಡೆಸುತ್ತಿದ್ದನೆಂದು ಶಾಸನವೊಂದು ತಿಳಿಸುತ್ತದೆ. ಅಧಿಕಾರಕ್ಕೆ ಬಂದ ಮೂರು ವರ್ಷಗಳ ನಂತರವೂ ಹರಿಹರ ಬುಕ್ಕರು ಹೊಯ್ಸಳರ ಮೇಲಾಧಿಕಾರವನ್ನು ಕಿತ್ತುಹಾಕುವ ಆಲೋಚನೆ ಮಾಡಿರಲಿಲ್ಲ. ಬಲ್ಲಾಳನು ಮಧುರೆ ಸುಲ್ತಾನನ ಮೇಲೆ ಯುದ್ಧಕ್ಕೆ ಹೋಗಿ ಮೃತನಾದನು. ಇವನ ನಂತರ ನಾಲ್ಕನೆಯ ಬಲ್ಲಾಳನು ಅಧಿಕಾರಕ್ಕೆ ಬಂದನು. ಇತನ ಆಳ್ವಿಕೆ ಅಷ್ಟೇನೂ ಮಹತ್ವದ್ದಾಗಿರಲಿಲ್ಲ. ಇವನ ಮರಣದ ಬಳಿಕ. ೩ ಶತಮಾನಗಳ ಹೊಯ್ಸಳರ ಆಳ್ವಿಕೆ ಕೊನೆಗೊಳ್ಳುತ್ತದೆ. ತುಂಗಭದ್ರೆಯಿಂದ ಕಾವೇರಿಯವರೆಗಿನ ವಿಶಾಲವಾದ ಹೊಯ್ಸಳ ರಾಜ್ಯದಲ್ಲಿ ಸಂಗಮರು ವಿಜಯನಗರ ಸಾಮ್ರಾಜ್ಯವನ್ನು ಸ್ಥಾಪಿಸಿಸುತ್ತಾರೆ.[೩೪]

ತಿರುಮಲಾದೇವಿ ಪಟ್ಟಣ (ಹೊಸಪೇಟೆ)ದಲ್ಲಿ ವಿಜಯನಗರದ ನಾಲ್ಕು ವಂಶಗಳು ಆಳ್ವಿಕೆ ನಡೆಸಿದವು. ಇವರ ರಾಜಧಾನಿ ನಗರವು ವಿವಿಧ ಹೆಸರುಗಳಿಂದ ಉಲ್ಲೇಖಗೊಂಡಿವೆ. ಅವುಗಳೆಂದರೆ ಆನೆಗೊಂದಿ, ಕುಂಜರ ಕೋಣ, ವಿರೂಪಾಕ್ಷಪುರ, ಹೊಸಪಟ್ಟಣ, ಹಂಪೆ, ಹಸ್ತಿನಾವತಿ, ವಿದ್ಯಾನಗರ ಮತ್ತು ವಿಜಯನಗರ.[೩೫]

೧. ಸಂಗಮ ವಂಶ (ಕ್ರಿ.ಶ. ೧೩೩೬-೧೪೮೫)

ಈ ವಂಶದ ಅರಸನಾದ ಹರಿಹರ (೧೩೩೬-೧೩೫೬)ನು ಹಿರಿಯ ಸಂಗಮನ ಮಗ ಸಹೋದರರಾದ ಬುಕ್ಕ, ಕಂಪಣ, ಮಾರಪ್ಪ ಮತ್ತು ಮುದ್ದಪ್ಪರ ಸಹಕಾರದಿಂದ ಹೊಸ ಸಾಮ್ರಾಜ್ಯವನ್ನು ಕಟ್ಟಿದನು. ಇವನು ಬಾರ್ಕೂರಿನಲ್ಲಿ ಕ್ರಿ.ಶ. ೧೩೩೬ರಲ್ಲಿ ಕೋಟೆಯೊಂದನ್ನು ನಿರ್ಮಿಸುತ್ತಾನೆ. ಮೂರನೆಯ ಬಲ್ಲಾಳ ಕ್ರಿ.ಶ. ೧೩೩೮ರಲ್ಲಿ ಇದನ್ನು ಪರಿಶೀಲಿಸಲು ಅಲ್ಲಿಗೆ ಹೋಗಿದ್ದನು. ಮಹಾಮಂಡಲೇಶ್ವರನಾಗಿದ್ದ ಹರಿಹರನು ಮೂರನೆಯ ಬಲ್ಲಾಳನಿಗೆ ವಿಧೇಯನಾಗಿದ್ದ. ನಂತರ ಬಂದ ನಾಲ್ಕನೆಯ ಬಲ್ಲಾಳ ಅಸಮರ್ಥನಾಗಿದ್ದನು. ಇದು ಸ್ವತಂತ್ರವಾಗಿ ಹರಿಹರನು ಬೆಳೆಯಲು ಸಹಾಯವಾಯಿತು.[೩೬]

ಒಂದನೆಯ ಬುಕ್ಕನು ಕ್ರಿ.ಶ. ೧೩೫೬ರಲ್ಲಿ ಅಧಿಕಾರ ವಹಿಸಿಕೊಳ್ಳುತ್ತಾನೆ. ಇವನು ಎರಡು ದಶಕಗಳ ಆಳ್ವಿಕೆಯಲ್ಲಿ ರಾಜ್ಯವನ್ನು ವಿಸ್ತರಿಸಿದನು.[೩೭] ಕ್ರಿ.ಶ. ೧೩೫೬ರ ವೇಳೆಗೆ ಹೊಯ್ಸಳ ಮೂರನೆಯ ಬಲ್ಲಾಳನು ನಿರ್ಮಿಸಿದ್ದ ಹೊಸಪಟ್ಟಣ (ಹಂಪೆ)ದಲ್ಲಿ ಬುಕ್ಕನು ರಾಜ್ಯವಾಳುತ್ತಿದ್ದನು. ಹೊಯ್ಸಳರ ಹೊಸಪಟ್ಟಣವೆ ಬೇರೆ, ಬುಕ್ಕನ ವಿಜಯನಗರವೇ ಬೇರೆ ಎಂದು ಭಿನ್ನಾಭಿಪ್ರಾಯವಿತ್ತು. ಆದರೆ ಸಕ್ಕರೆ ಪಟ್ಟಣದ ಶಾಸನವು ಸ್ಪಷ್ಟವಾಗಿ ಬುಕ್ಕನು ಹೊಸಪಟ್ಟಣದಲ್ಲಿ ರಾಜ್ಯವಾಳುತ್ತಿದ್ದನೆಂದು ತಿಳಿಸುತ್ತದೆ. ನಂತರದ ವರ್ಷಗಳಲ್ಲಿ ಹೊಸಪಟ್ಟಣದ ಬದಲು ವಿಜಯನಗರದ ಹೆಸರು ಕಾಣಿಸಿಕೊಳ್ಳುತ್ತವೆ. ಅಂದರೆ ಹೊಸಪಟ್ಟಣವನ್ನು ವಿಜಯನಗರವೆಂದು ಕರೆದು ಅಭಿವೃದ್ಧಿ ಪಡೆಸಿದನೆಂದು ಗ್ರಹಿಸಬಹುದು.

ಬುಕ್ಕನು ಹಂಪೆಯ ಸುತ್ತಲೂ ಭದ್ರವಾದ ಕೋಟೆಯನ್ನು ಕಟ್ಟಿಸಿ ಪ್ರಜೆಗಳ ವಾಸಕ್ಕೆ ಹೆಚ್ಚು ಅನುಕೂಲಗಳನ್ನು ಕಲ್ಪಿಸಿದ. ವ್ಯವಸಾಯ ವ್ಯಾಪಾರಗಳಿಗೆ ಉತ್ತೇಜನ ನೀಡಿದ್ದನು.[೩೮]

ಇಮ್ಮಡಿ ಹರಿಹರ ಇತನು ತಂದೆಯ ಉತ್ತರಾಧಿಕಾರಿಯಾಗಿ ಆಡಳಿತ ವಹಿಸಿಕೊಂಡನು. ಈತನ ಆಳ್ವಿಕೆಯು ಬಹುಕಾಲ ಶಾಂತಿಯಿಂದ ಕೂಡಿದ್ದು, ವ್ಯಾಪಾರ ವಾಣಿಜ್ಯಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡಿದ್ದನು. ಇವನು ಕ್ರಿ.ಶ. ೧೪೦೪ರಲ್ಲಿ ಮರಣ ಹೊಂದಿದನು. ಇವನ ಮಕ್ಕಳಲ್ಲಿ ಉತ್ತರಾಧಿಕಾರಕ್ಕಾಗಿ ವಿವಾದ ಉಂಟಾಯಿತು. ಕೊನೆಗೆ ಒಂದನೆಯ ದೇವರಾಯ ಅಧಿಕಾರ ವಹಿಸಿಕೊಳ್ಳುತ್ತಾನೆ.[೩೯]

ಒಂದನೆಯ ದೇವಾರಾಯ(ಕ್ರಿ.ಶ.೧೪೦೬-೧೪೨೨)ನು ಉತ್ತಮ ಸೈನ್ಯ ಹೊಂದಿದ್ದನು. ಇವನಿಗೆ ಸಾಮ್ರಾಜ್ಯದ ಆಡಳಿತಕ್ಕೆ ಸಂಬಂಧಿಸಿದಂತೆ ಅನುಭವವಿತ್ತು ರಾಜಧಾನಿ ಬಲಪಡಿಸಲು ಹೊಸದಾಗಿ

ಕೋಟೆಯನ್ನು ನಿರ್ಮಿಸಿದನು. ನಗರವನ್ನು ಅಭಿವೃದ್ಧಿ ಪಡಿಸಿದನು. ನೀರಾವರಿ ಯೋಜನೆಗಳನ್ನು ಕೈಗೆತ್ತಿಕೊಂಡು ತುಂಗಭದ್ರಾ ನದಿಗೆ ದೊಡ್ಡದಾದ ಅಣೆಕಟ್ಟೊಂದನ್ನು ಕಟ್ಟಿಸಿ ನದಿಯಿಂದ ನಗರದವರೆಗೆ ಸುಮಾರು ೧೫ ಮೈಲುಗಳ ಉದ್ದನೆ ಕಲ್ಲಿನ ಕಾಲುವೆಯನ್ನು ನಿರ್ಮಿಸಿದನು.

ಈತನು ಮೊದಲಬಾರಿಗೆ ತನ್ನ ಸೇನೆಯಲ್ಲಿ ಟರ್ಕಿ ಬಿಲ್ಲುಗಾರರನನ್ನು ನೇಮಕ ಮಾಡಿಕೊಳ್ಳುತ್ತಾನೆ. ಮತ್ತು ಸೈನಿಕರುಗಳಿಗೆ ಕಿರು ಸೇನಾಪಡೆಗಳನ್ನು ಸ್ಥಾಪಿಸಿದನು. ಅವು ಕಾಲಾನುಕ್ರಮಗಳಲ್ಲಿ ಗ್ರಾಮಗಳಾದವು. ಈ ಗ್ರಾಮಗಳು ತಿರುಮಲಾದೇವಿ ಪಟ್ಟಣದ ಸುತ್ತಮುತ್ತ ನಿರ್ಮಾಣಗೊಂಡವು.[೪೦]

ವೀರವಿಜಯರಾಯ (ಕ್ರಿ.ಶ.೧೪೨೨-೧೪೨೪)ನನ್ನು ವಿಜಯಭೂಪತಿ ಮತ್ತು ವಿಜಯ ಬುಕ್ಕ ಎಂದು ಸಹ ಕರೆಯಲಾಗುತ್ತದೆ. ಇತನು ದುರ್ಬಲನಾಗಿದ್ದ ಕಾರಣ ಹೆಚ್ಚು ವರ್ಷ ಆಳ್ವಿಕೆ ಮಾಡಲಿಲ್ಲ. ಇವನ ಮಗ ಸಮರ್ಥನಾಗಿದ್ದು ಎಲ್ಲ ಆಡಳಿತವನ್ನು ನೋಡಿಕೊಳ್ಳುತ್ತಿದ್ದನು.[೪೧]

ಇಮ್ಮಡಿ ದೇವರಾಯ (ಕ್ರಿ.ಶ.೧೪೨೪-೧೪೪೬)ನಿಗೆ ಗಜಬೆಂಟೆಕಾರ ಎಂಬ ಬಿರುದಿತ್ತು. ಇತನ ಕಾಲಾವಧಿಯಲ್ಲಿ ಅಬ್ದುಲ್ ರಜಾಕ್ ಮತ್ತು ಇಟಲಿ ಪ್ರವಾಸಿ ನಿಕೋಲೊ ಕೊಂಟಿ ಇವರು ವಿಜಯನಗರಕ್ಕೆ ಭೇಟಿನೀಡಿದ್ದರು. ಪೋಪನ ಪ್ರವಾಸ ಕಥನದಲ್ಲಿ ಹೊಸಪೇಟೆಗೆ ಹೊಂದಿಕೊಂಡಿದ್ದ ದಾರಿಗಳ ಬಗ್ಗೆ ಹೇಳಿದ್ದಾನೆ. ಅಬ್ದುಲ್ ರಜಾಕನು ನೀಡುವ ವರ್ಣನೆ ಈ ರೀತಿ ಇದೆ, ''ವಿಜಯನಗರ ದೊಡ್ಡ ಜನಸಂಖ್ಯೆ ಊರು, ಮುನ್ನೂರು ಬಂದರುಗಳಿವೆ. ಸೈನ್ಯದಲ್ಲಿ ೧೧ ಲಕ್ಷ ಯೋಧರಿದ್ದಾರೆ. ಇವರಿಗೆ ತಿರುಮಲಾದೇವಿ ಪಟ್ಟಣದ ಸುತ್ತ ಸೈನ್ಯಪಡೆಗಳಿಗೆ ಗೃಹಗಳನ್ನು ನಿರ್ಮಾಣ ಮಾಡಿದ್ದರು. ಈ ನಗರವನ್ನು ಏಳುಕೋಟೆಗಳು ಆವರಿಸಿವೆ. ಒಂದೊಂದು ಕೋಟೆಯ ಸುತ್ತಿನಲ್ಲೂ ಪಟ್ಟಣಗಳ ಬಗ್ಗೆ ಉಲ್ಲೇಖವಿದೆ. ತಿರುಮಲಾದೇವಿ ಪಟ್ಟಣವು ಒಂದು ವ್ಯಾಪಾರಿ ಕೇಂದ್ರವಾಗಿತ್ತು. ವ್ಯಾಪಾರಿಗಳು ಪಟ್ಟಣದ ಬೀದಿಗಳಲ್ಲಿ ವಜ್ರ ವೈಡೂರ್ಯಗಳನ್ನು ಮಾರುತ್ತಾರೆ. ಪಟ್ಟಣದ ಅಂಗಡಿ ಬೀದಿಗಳು ಉದ್ದವಾಗಿಯೂ ಅಗಲವಾಗಿಯೂ ಇದ್ದವು.'' ಮಹಾನವಮಿಯಂದು ನಡೆಯುವ ರಾಜನ ದರ್ಬಾರಿನ ವರ್ಣನೆಯಿದೆ. ಇಮ್ಮಡಿ ದೇವರಾಯನು ಕ್ರಿ.ಶ. ೧೪೪೬ರಲ್ಲಿ ತೀರಿಕೊಳ್ಳುತ್ತಾನೆ.[೪೨]

ಇಮ್ಮಡಿ ದೇವರಾಯನ ಮಗ ಮಲ್ಲಿಕಾರ್ಜುನನು (ಕ್ರಿ.ಶ.೧೪೪೬-೬೫) ಅಸಮರ್ಥ ದೊರೆಯಾಗಿದ್ದನು. ಇವನನ್ನು ಪ್ರೌಢದೇವರಾಯ ಎಂದು ಸಹ ಕರೆಯುತ್ತಿದ್ದರು. ಕ್ರಿ.ಶ. ೧೪೬೩ರಲ್ಲಿ ಕಪಿಲೇಂದ್ರನ ಮಗ ಹಮ್ಮೀರನು ದಾಳಿ ಮಾಡಿ, ಉದಯಗಿರಿ ಮತ್ತು ಕೊಂಡವೀಡುಗಳನ್ನು ತನ್ನ ವಶಕ್ಕೆ ತೆಗೆದುಕೊಂಡನು. ವಿಜಯನಗರದಲ್ಲಿ ಅರಾಜಕತೆವುಂಟಾಗಿ ಮಲ್ಲಿಕಾರ್ಜುನನು ತನ್ನ ಸ್ಥಾನಮಾನ ಕಳೆದುಕೊಳ್ಳುತ್ತಾನೆ. ಮೂರನೆಯ ವಿರೂಪಾಕ್ಷ (ಕ್ರಿ.ಶ.೧೪೬೫-೮೫)ನು ಅವ್ಯವಸ್ಥಿತವಾದ ಆಡಳಿತವನ್ನು ಹತೋಟಿಗೆ ತರಲು ವಿಫಲನಾಗುತ್ತಾನೆ. ಸುಲ್ತಾನ ಮೂರನೆಯ ಮಹಮದ್ ಶಹನ ಪ್ರಧಾನಿ ಮಹಮ್ಮದ ಗವಾನನು ದಾಳಿ

ಮಾಡಿ ಪಶ್ಚಿಮ ಪ್ರಾಂತ್ಯ ಮತ್ತು ಉತ್ತರ ಕೊಂಕಣ ಮತ್ತು ಗೋವಾಗಳನ್ನು ವಶಪಡಿಸಿಕೊಂಡನು. ಗೋವಾ ವಿಜಯನಗರದ ಪ್ರಮುಖ ಬಂದರಾಗಿತ್ತು. ಇದರಿಂದ ವಿಜಯನಗರದ ವ್ಯಾಪಾರ ವ್ಯವಹಾರಗಳಿಗೆ ಹಿನ್ನಡೆಯಾಯಿತು. ಬೆಳಗಾಂ ಸೇರಿದಂತೆ ಉತ್ತರ ಕರ್ನಾಟಕದ ಬಹುಭಾಗಗಳು ಬಹಮನಿಗಳ ವಶವಾಯಿತು. ಇಲ್ಲಿಗೆ ಸಂಗಮವಂಶದ ಆಳ್ವಿಕೆ ಕೊನೆಗೊಂಡಿತು.[೪೩]

ಸಾಳುವ ವಂಶ

ಒಂದನೆಯ ನರಸಿಂಹ (ಕ್ರಿ.ಶ.೧೪೮೫-೯೧)ನಿಂದ ಸಾಳುವರ ಆಳ್ವಿಕೆ ಪ್ರಾರಂಭವಾಯಿತು. ಕ್ರಿ.ಶ. ೧೪೭೧ರ ವೇಳೆಗೆ ದಕ್ಷಿಣದ ಪ್ರಾಂತ್ಯಗಳಲ್ಲಿ ವಿಜಯನಗರದ ಪರಮಾಧಿಕಾರವನ್ನು ಪುನರ್ ಸ್ಥಾಪಿಸಿದನು. ಕೊಂಡವೀಡುಕೋಟೆ, ಮತ್ತು ಮಚಲಿಪಟ್ಟಣ ಬಂದರನ್ನು ಕ್ರಿ.ಶ. ೧೪೮೦ರಲ್ಲಿ ವಶಪಡಿಸಿಕೊಂಡನು.

ಆರು ವರ್ಷಗಳ ನರಸಿಂಹನ ಆಳ್ವಿಕೆಯು ಶಾಂತಿಯುತವಾಗಿತ್ತು. ಈತನು ೧೪೯೧ರಲ್ಲಿ ಮರಣಹೊಂದಿದನು.[೪೪]

ಆತನ ಅಪ್ರಾಪ್ತ ವಯಸ್ಸಿನ ಮಕ್ಕಳ ಪ್ರತಿನಿಧಿಯಾಗಿ ತುಳುವ ನರಸನಾಯಕ ಆಡಳಿತ ಸೂತ್ರವನ್ನು ವಹಿಸುತ್ತಾನೆ. ನರಸಿಂಹನ ಹಿರಿಯ ಮಗ ತಿಮ್ಮನನ್ನು ಸಿಂಹಾಸನದ ಮೇಲೆ ಕೂರಿಸಿದನು. ಇವನ ನಂತರ ೨ನೇ ನರಸಿಂಹ ಹಾಗೂ ವೀರನರಸಿಂಹರು ಅಧಿಕಾರಕ್ಕೆ ಬರುತ್ತಾರೆ. ಸಾಳುವ ಇಮ್ಮಡಿ ನರಸಿಂಹನು ಅಧಿಕಾರ ಹೊಂದಲು ಪ್ರಯತ್ನಿಸುತ್ತಾನೆ. ಇಲ್ಲಿಗೆ ವಿಜಯನಗರವನ್ನಾಳಿದ. ಸಾಳುವ ಮನೆತನ ಕೊನೆಗೊಂಡು ತುಳುವ ಮನೆತನದ ಆಳ್ವಿಕೆ ಆರಂಭವಾಯಿತು.[೪೫]

ತುಳುವ ವಂಶ

ತುಳುವರು ತಮ್ಮ ವಂಶ ಯಾದವ ಮೂಲದ್ದೆಂದು ಹೇಳಿಕೊಂಡಿದ್ದಾರೆ. ಈ ಕುಟುಂಬದ ಮೂಲ ಪುರುಷ ಈಶ್ವರನಾಯಕ ಎಂದು ತಿಳಿಯಲಾಗಿದೆ. ಈತನ ಮಗನೇ ನರಸನಾಯಕ. ನಂತರ ಬಂದವನು ವೀರನರಸಿಂಹ. ಈತನು ಕ್ರಿ.ಶ. ೧೫೦೩ರಿಂದ ೧೫೦೫ರವರೆಗೆ ವಿಜಯನಗರದ ರಾಜನಾಗಿ ಆಡಳಿತ ನಡೆಸಿದನು. ನಂತರ ತುಳುವ ವಂಶದ ಸ್ಥಾಪಕನಾಗಿಯೂ ಮತ್ತು ಮೊದಲ ಅರಸನಾಗಿಯೂ ೧೫೦೫ರಲ್ಲಿ ಸಿಂಹಾಸನವೇರಿದನು.

ವೀರನರಸಿಂಹ (ಕ್ರಿ.ಶ.೧೫೦೫-೧೫೦೯)ನು ಸುಮಾರು ೫ ವರ್ಷಗಳ ಕಾಲ ರಾಜ್ಯಭಾರಮಾಡಿದ್ದನು. ಅಲ್ಲಲ್ಲಿ ದಂಗೆಯೆದ್ದವರನ್ನು ಅಡಗಿಸುವುದರಲ್ಲಿ ಹೆಚ್ಚಿನ ಸಮಯ ಕಳೆದನು. ತುಳುನಾಡು, ಪಶ್ಚಿಮತೀರ ಬಂದರು, ರಾಯಚೂರು ಮತ್ತು ಮುದಗಲ್ಲುಗಳನ್ನು ವಶಪಡಿಸಿಕೊಂಡಿದ್ದನು. ಪೋರ್ಚುಗೀಸರೊಡನೆ ಉತ್ತಮ ಸ್ನೇಹ ಸಂಬಂಧವನ್ನು ಹೊಂದಿದ್ದನು.[೪೬] ಕೃಷ್ಣದೇವರಾಯ(ಕ್ರಿ.ಶ.೧೫೧೦-೨೯)ನು ವೀರನರಸಿಂಹನ ಮರಣಾನಂತರ ವಿಜಯನಗರದ ಸಿಂಹಾಸನವೇರುತ್ತಾನೆ. ಇತ್ತೀಚೆಗೆ ಬೆಳಕಿಗೆ ಬಂದ ಸಿಂಗನಾಯಕನಳ್ಳಿ ಶಾಸನವು ಕ್ರಿ.ಶ.೧೫೧೦, ಜನವರಿ ೨೪ರಲ್ಲಿ ಕೃಷ್ಣದೇವರಾಯನ ಪಟ್ಟಾಭಿಷೇಕವಾಯಿತೆಂದು ಉಲ್ಲೇಖಿಸುತ್ತದೆ.

ಕೃಷ್ಣದೇವರಾಯನು ಮೊದಲಿಗೆ ಸೈನ್ಯವನ್ನು ಬಲಗೊಳಿಸಿದನು. ಸಾಮ್ರಾಜ್ಯದಲ್ಲೆಡೆ ಕೆಲವು ತೆರಿಗೆಗಳನ್ನು ಮನ್ನಾ ಮಾಡಿಸಿದನು. ಈತನು ಸಾಮ್ರಾಜ್ಯದ ಒಳಗೆ ಮತ್ತು ಹೊರಗೆ ಶತ್ರುಗಳ ವಿರೋಧವನ್ನು ಎದುರಿಸಬೇಕಾಯಿತು. ರಾಯನು ವ್ಯವಸಾಯಕ್ಕೆ ಹೆಚ್ಚಿನ ಗಮನ ಕೊಟ್ಟು ಕೆರೆಕಟ್ಟೆಗಳನ್ನು ನಾಲೆಗಳನ್ನು ನಿರ್ಮಿಸಿದನು. ತನ್ನ ತಾಯಿಯ ಹೆಸರಿನಲ್ಲಿ ನಾಗಲಾಪುರವನ್ನು (ನಾಗೇನಹಳ್ಳಿ), ದೇವಾಲಯವನ್ನು, ಕೆರೆಯನ್ನು ಮತ್ತು ಹೆಂಡತಿಯ ನೆನಪಿಗಾಗಿ ತಿರುಮಲದೇವಿಯರ ಪಟ್ಟಣವನ್ನು (ಇಂದಿನ ಹೊಸಪೇಟೆ) ನಿರ್ಮಿಸಿದನು. ವಿರೂಪಾಕ್ಷ ದೇವಾಲಯದ ರಂಗಮಂಟಪ ಮತ್ತು ಗೋಪುರವನ್ನು ತನ್ನ ಪಟ್ಟಾಭಿಷೇಕದ ಸಮಯದಲ್ಲಿ ಕಟ್ಟಿಸಿದನು. ಕ್ರಿ.ಶ.೧೫೧೩ರಲ್ಲಿ ಕೃಷ್ಣದೇವಾಲಯ ಕಟ್ಟಿಸಿ, ಉದಯಗಿರಿಯಿಂದ ತಂದ ಕೃಷ್ಣದೇವರನ್ನು ಅಲ್ಲಿ ಪ್ರತಿಷ್ಠಾಪಿಸಿದನು. ಈತನ ಉತ್ಸಾಹದಿಂದ ಮಂಟಪಗಳು ನಿರ್ಮಾಣಗೊಂಡವು. ಕೃಷ್ಣದೇವರಾಯನು ಸಮರ್ಥದೊರೆಯಾಗಿದ್ದು ಹೊಸಪೇಟೆಯನ್ನು ನಿರ್ಮಾಣ ಮಾಡಿದನು. ಈತನು ಮೊದಲೆ ಇದ್ದ ಗ್ರಾಮಕ್ಕೆ ತನ್ನ ಹೆಂಡತಿಯ ಹೆಸರನ್ನು ಇಟ್ಟು ಒಂದು ಆಯಾಮವನ್ನು ನೀಡಿದನು. ತಿರುಮಲದೇವಿ ಪಟ್ಟಣವು ವಿಜಯನಗರದ ಉಪನಗರವಾಗಿತ್ತು. ಈತನ ಕಾಲದಲ್ಲಿ ಇದು ಒಂದು ವ್ಯಾಪಾರ ಕೇಂದ್ರವಾಗಿತ್ತು.[೪೭]

ಅಚ್ಯುತರಾಯ (ಕ್ರಿ.ಶ.೧೫೨೯-೪೨)ನು ದಾಯಾದಿಗಳ ವಿರೋಧವನ್ನು ಎದುರಿಸಬೇಕಾಯಿತು. ಇವನು ರಾಯಚೂರು, ಮುದಗಲ್ ಕೋಟೆಗಳನ್ನು ವಶಪಡಿಸಿಕೊಂಡನು. ಕ್ರಿ.ಶ. ೧೫೪೨ರಲ್ಲಿ ಅಚ್ಯುತರಾಯನು ಮರಣ ಹೊಂದಿದನು. ನಂತರ ಒಂದನೆಯ ವೆಂಕಟ ಅಧಿಕಾರವನ್ನು ವಹಿಸಿಕೊಂಡನು. ತಿರುಮಲನು ಇತನನ್ನು ಮತ್ತು ಇತನ ಕುಟುಂಬದವರನ್ನು ಕೊಂದನು. ರಾಮರಾಯನು ಸದಾಶಿವರಾಯನ ಹೆಸರಿನಲ್ಲಿ ರಾಜ್ಯವನ್ನು ಆಕ್ರಮಿಸಿ ಯುದ್ಧದಲ್ಲಿ ತಿರುಮಲನನ್ನು ಕೊಂದನು.[೪೮]

ಅರವೀಡು ವಂಶ

ರಾಮರಾಯ (ಕ್ರಿ.ಶ.೧೫೪೩-೬೫)ನು ಅರವೀಡು ವಂಶಕ್ಕೆ ಸೇರಿದವನು. ಇತನು ಕ್ರಿ.ಶ.೧೫೫೧ರಿಂದ ಎಲ್ಲ ಅಧಿಕಾರವನ್ನು ಹೊಂದಿ ೧೫ ವರ್ಷ ಆಳ್ವಿಕೆ ಮಾಡಿದನು. ಈತನು ದಕ್ಷಿಣದ ತಿರುಪತಿ ಮೇಲೆ ದಂಡಯಾತ್ರೆ ಕೈಗೊಂಡನು ಈ ದಂಡಯಾತ್ರೆಯು ಅನಂತಶಯನ (ತಿರುವನಂತಪುರ)ದಲ್ಲಿ ಪ್ರಾರಂಭಗೊಂಡು ಉತ್ತರದ ಮುದಗಲ್ಲಿನಲ್ಲಿ ಕೊನೆಗೊಂಡಿತ್ತು. ನಾಲ್ಕು ಸುಲ್ತಾನರು (ಅಹಮದನಗರ, ವಿಜಾಪುರ, ಬೀದರ್ ಮತ್ತು ಗೋಲ್ಕೊಂಡ) ತಮ್ಮ ನಿಜ ಪರಿಸ್ಥಿತಿಯನ್ನು ಅರಿತು ಎಲ್ಲರೂ ಕೂಡಿಕೊಂಡು ತಾಳಿಕೋಟೆ ಸಮೀಪದ ರಕ್ಕಸತಂಗಡಿಯಲ್ಲಿ ಕ್ರಿ.ಶ. ೧೫೬೫ರಲ್ಲಿ ಅಳಿಯರಾಮರಾಯನನ್ನು ಸೋಲಿಸಿದರು. ಯುದ್ಧದಲ್ಲಿ ರಾಮಾಯನು ಮರಣ ಹೊಂದಿದನು. ವಿಜಯನಗರ ಪ್ರವೇಶಿಸಿದ ಶತ್ರು ಸೇನೆಯು ಸುಮಾರು ೫ ತಿಂಗಳ ಕಾಲ ನಿರಂತರವಾಗಿ ಲೂಟಿಮಾಡಿದರು. ವ್ಯಾಪಾರ ಕೇಂದ್ರವಾಗಿದ್ದ ತಿರುಮಲಾದೇವಿ ಪಟ್ಟಣ ಸೇರಿದಂತೆ ಸಂಪೂರ್ಣ ಭಾಗವನ್ನು ನಾಶಮಾಡಿ ಜನರು ವಲಸೆ ಹೋಗುವಂತೆ ಮಾಡಿದರು. ಇದರಿಂದ ತಿರುಮಲದೇವಿ

ಪಟ್ಟಣದ ಊರು ಕಣ್ಮರೆಯಾಯಿತು. ಈ ಯುದ್ಧದಲ್ಲಿ ನಂತರ ವಿಜಯನಗರ ಸಾಮ್ರಾಜ್ಯವು ಕಣ್ಮರೆಯಾಯಿತು. ಇಲ್ಲಿಗೆ ಬಳ್ಳಾರಿ ಪ್ರದೇಶದ ಹೊಸಪೇಟೆ ಪರಿಸರದಲ್ಲಿ ವಿಜಯನಗರದ ಅಸರ ಆಳ್ವಿಕೆಯು ಕೊನೆಗೊಂಡಿತು. ನಂತರ ಪಾಳೆಯಗಾರರು ತಲೆ ಎತ್ತಿದರು.[೪೯]

ಆಧುನಿಕ ಚರಿತ್ರೆ

ತಿರುಮಲಾದೇವಿ ಪಟ್ಟಣ ವಿಜಯನಗರದ ಪತನದ ನಂತರ ವಿಜಾಪುರದ ಆದಿಲ್‌ಶಾಹಿಗಳ ಅಧೀನದಲ್ಲಿತ್ತು. ಆದರೆ ಸ್ಥಳೀಯ ಪಾಳೆಯಗಾರರು ಈ ಪ್ರದೇಶವನ್ನು ಆಳಿದರು. ನಂತರ ಈ ಪಟ್ಟಣವು ಹರಪನಹಳ್ಳಿ ಪಾಳೆಯಗಾರರ ಉಪರಾಜಧಾನಿಯಾಗಿತ್ತು. ನಂತರ ಮರಾಠರ ಶಿವಾಜಿಯು ಆಕ್ರಮಿಸುತ್ತಾನೆ.[೫೦] ಹರಪನಹಳ್ಳಿ ಪಾಳೆಯಗಾರನ ಕಾಲದಲ್ಲಿ ಜಿಗಳಿಕಟ್ಟೆ, ವಿರೂಪಾಕ್ಷಪುರ, ವಿಜಯಪುರ, ನಾಗಲಾಪುರ, ಹಂದಿಗನೂರು ಗ್ರಾಮಗಳನ್ನು ತಿರುಮಲಾದೇವಿ ಪಟ್ಟಣಕ್ಕೆ ಸೇರಿಸಿ ಹೊಸದಾಗಿ ಪೇಟೆಯನ್ನು ಮಾಡಲಾಗಿತ್ತು. ೧೭೬೨ರಲ್ಲಿ ಹೈದರಾಲಿ ದಂಡೆತ್ತಿ ಬಂದನು. ಈ ಸಂದರ್ಭದಲ್ಲಿ ಹರಪನಹಳ್ಳಿ ಪಾಳೆಯಗಾರನು ಹೈದರನ ಅಧಿಪತ್ಯವನ್ನು ಒಪ್ಪಿಕೊಂಡು ಕಪ್ಪುಕಾಣಿಕೆ ಸಲ್ಲಿಸುತ್ತಾನೆ. ಮತ್ತೊಮ್ಮೆ ಈ ಪ್ರದೇಶದ ಮೇಲೆ ಹೈದರ ಅಲಿ ದಂಡೆತ್ತಿ ಬರುತ್ತಾನೆ. ನಾಯಕರಿಂದ ಕಾಣಿಕೆ ಪಡೆಯುತ್ತಾನೆ.[೫೧]

ಕ್ರಿ.ಶ. ೧೭೯೨ರ ೩ನೇ ಮೈಸೂರು ಯುದ್ಧದ ನಂತರ ಟಿಪ್ಪು ರಾಜ್ಯದ ಅರ್ಧಭಾಗವನ್ನು ಬ್ರಿಟಿಷರಿಗೆ ಬಿಟ್ಟುಕೊಡುತ್ತಾನೆ. ಹೀಗಾಗಿ ಬಳ್ಳಾರಿ ಪ್ರದೇಶವು ಬ್ರಿಟಿಷರ ಆಳ್ವಿಕೆಗೆ ಬರುತ್ತದೆ. ನಂತರ ಮರಾಠ, ನಿಜಾಮ ಮತ್ತು ಬ್ರಿಟಿಷರು ಸೇರಿ ಈ ಅರ್ಧಭಾಗವನ್ನು ಸಮನಾಗಿ ಹಂಚಿಕೊಳ್ಳುತ್ತಾರೆ. ಬಳ್ಳಾರಿ ಪ್ರದೇಶದ ಕೆಲವು ಭಾಗಗಳು ನಿಜಾಮನಿಗೆ ಹೋದವು. ಹರಪನಹಳ್ಳಿ ಸೇರಿಂದತೆ ೬ ತಾಲೂಕು (ಹೊಸಪೇಟೆ ಪ್ರದೇಶವು ಸೇರಿತು.) ಪೇಶ್ವೆಗೆ ವಹಿಸಲಾಯಿತು. ಜಿಲ್ಲೆಯ ಉಳಿದ ಭಾಗವನ್ನು ನಿಜಾಮನಿಗೆ ನೀಡಲಾಯಿತು. ಆದರೆ ನಿಜಾಮನು ಇವುಗಳನ್ನು (ಬಳ್ಳಾರಿ, ಕರ್ನೂಲ್, ಕಡಪ ಮತ್ತು ಅನಂತರಪುರ) ಬ್ರಿಟಿಷರಿಗೆ ನೀಡುತ್ತಾನೆ. ಇವುಗಳನ್ನು ಜತ್ತಿ ಜಿಲ್ಲೆಗಳೆಂದು ಕರೆಯಲಾಗುತ್ತದೆ. ನಿಜಾಮ ಹಾಗೂ ಇಂಗ್ಲೀಷರ ಪ್ರದೇಶಗಳಿಗೆ ತುಂಗಭದ್ರಾ ನದಿಯು ಗಡಿಯಾಗುತ್ತದೆ. ಅಂದಿನಿಂದ ಈ ಪ್ರದೇಶ ಮದ್ರಾಸ್ ರಾಜ್ಯದ ಭಾಗವಾಗಿ ಬ್ರಿಟಿಷರ ಆಡಳಿತಕ್ಕೊಳಪಟ್ಟಿತು. ೫೩ ವರ್ಷಗಳ ನಂತರ ಹೊಸಪೇಟೆಯನ್ನು ಸೇರಿಸಿಕೊಂಡು ಬಳ್ಳಾರಿ ಪ್ರದೇಶದಲ್ಲಿ ಬ್ರಿಟಿಷ್ ಕಲೆಕ್ಟರ್‌ಗಳು ಆಡಳಿತ ನಡೆಸಿದರು.[೫೨]

ಈ ಪ್ರದೇಶದಲ್ಲಿ ಸರ್ ಥಾಮಸ್ ಮನ್ರೋ, ವಿಲಿಯು ಬಾಪ್ಲಿನ್, ಎಫ್.ಡಬ್ಲ್ಯೂ. ರಾಬರ್ಟ್ ಸನ್, ಇವರಲ್ಲದೆ ಬಳ್ಳಾರಿಯಲ್ಲಿ ೧೧೫ ಜನ ಕಲೆಕ್ಟರ್‌ಗಳು ಆಳ್ವಿಕೆ ನಡೆಸಿದರು.[೫೩] ಇವರ ಆಳ್ವಿಕೆಯ ನಂತರ ಜನರಿಗೆ ಇವರ ಒಡೆದು ಆಳುವ ನೀತಿ ತಿಳಿದ ಜನರು. ಎಲ್ಲರನ್ನು ಒಟ್ಟುಗೂಡಿಸಿ ಸ್ವಾತಂತ್ರ್ಯಕ್ಕಾಗಿ ಹೋರಾಡಲು ಪ್ರಯತ್ನಿಸಿದರು. ಸ್ವಾತಂತ್ರ ಹೋರಾಟದಲ್ಲಿ ಹೊಸಪೇಟೆಯ ಜನರು ಭಾಗವಹಿಸಿದ್ದರು.

ಮುಂಡರಗಿ ಭೀಮರಾಯನು ಬ್ರಿಟಿಷರ ವಿರುದ್ಧ ಹೋರಾಡಲು ಈ ಪ್ರದೇಶದಲ್ಲಿ ಜನ ಸಂಘಟನೆಯಲ್ಲಿ ತೊಡಗಿದನು. ಬ್ರಿಟಿಷರ ವಿರುದ್ಧ ಯುದ್ಧದಲ್ಲಿ ಇವನು ಮರಣಹೊಂದಿದನು.[೫೬]

೧೮೮೫ರಲ್ಲಿ ಭಾರತದ ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪನೆಯಾಯಿತು. ಕಾಂಗ್ರೆಸ್ ಮುಂದಾಳುತನದಲ್ಲಿ ಸ್ವಾತಂತ್ರ್ಯ ಹೋರಾಟ ಪ್ರಾರಂಭವಾಯಿತು. ಈ ಪ್ರದೇಶದ ಅನೇಕ ಪತ್ರಿಕೆಗಳು ಹಾಗೂ ಸಂಘ ಸಂಸ್ಥೆಗಳು ಜನರಲ್ಲಿ ರಾಷ್ಟ್ರೀಯ ಪ್ರಜ್ಞೆಯುಂಟುಮಾಡಿದವು.[೫೭] ಕರ್ನಾಟಕದಲ್ಲಿ ನಡೆದ ಸ್ವಾತಂತ್ರ್ಯ ಚಳವಳಿಯಲ್ಲಿ ಮತ್ತು ಇದಕ್ಕೆ ಸಂಬಂಧಸಿದಂತೆ ನಡೆದ ಕಾರ್ಯಕ್ರಮಗಳಲ್ಲಿ ಹೊಸಪೇಟೆಯ ಪಾತ್ರ ಸ್ಮರಣೀಯವಾದದ್ದು. ಅದೇ ರೀತಿಯಾಗಿ ಈ ಪ್ರದೇಶದ ಅನೇಕ ವ್ಯಕ್ತಿಗಳು ಸ್ವಾತಂತ್ರ್ಯ ಚಳವಳಿಯಲ್ಲಿ ಭಾವಹಿಸಿದರು. ಕ್ರಿ.ಶ. ೧೯೪೭ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಬಂದಿತು. ಹೈದರಾಬಾದಿನ ನಿಜಾಮನು ಭಾರತದ ಒಕ್ಕೂಟವನ್ನು ಸೇರಲು ಒಪ್ಪಲಿಲ್ಲ. ಕ್ರಿ.ಶ. ೧೯೪೮ನೆಯ ಸೆಪ್ಟೆಂಬರ್ ೧೩ರಿಂದ ೧೭ರ ವರೆಗೆ ಹೊಸಪೇಟೆಯು ರಕ್ಷಣಾಕಾರ್ಯಾಚರಣೆಯಲ್ಲಿ ಮಹತ್ವಪೂರ್ಣ ಪಾತ್ರವನ್ನು ವಹಿಸಿತು. ತುಂಗಭದ್ರಾ ಹೋರಾಟದಲ್ಲಿ ಫಜಲ್ ಆಯೋಗವು ಹೊಸಪೇಟೆ ಆಂಧ್ರಕ್ಕೆ ಸೇರಬೇಕು. ಎಂದು ವರದಿಯಲ್ಲಿ ಶಿಫಾರಸ್ಸು ಮಾಡಿತು. ಇದರಿಂದ ಹೊಸಪೇಟೆಯಲ್ಲಿಯೂ ಹೋರಾಟದ ಭಾವನೆ ಮೂಡಿತು. ಇದರ ವಿರುದ್ಧ ಅನೇಕ ಸತ್ಯಾಗ್ರಹಗಳು ನಡೆದವು. ಕೊನೆಗೆ ಭಾರತ ಸರ್ಕಾರವು ಕ್ರಿ.ಶ. ೧೯೫೩ರ ಡಿಸೆಂಬರ್‌ನಲ್ಲಿ ಕೆ.ಎನ್.ವಾಂಚೂ ಅವರನ್ನು ಈ ಕುರಿತು ವರದಿ ಸಲ್ಲಿಸಲು ನೇಮಿಸಿದರು. ಇವರು ಬಳ್ಳಾರಿಯು ಆಂಧ್ರದಿಂದ ಬೇರೆಯಾಗಬೇಕೆಂದು ಸಲಹೆ ನೀಡಿದರು. ನಂತರ ಎಲ್.ಎಸ್. ಮಿಶ್ರ ಆಯೋಗವು ಪರಿಶೀಲನೆ ಮಾಡಿ ಬಳ್ಳಾರಿ ಸಹಿತ ಹೊಸಪೇಟೆ, ಸಂಡೂರು, ಕೂಡ್ಲಿಗಿ, ಹರಪನಹಳ್ಳಿ, ಹಡಗಲಿ, ಶಿರಗುಪ್ಪ ತಾಲೂಕುಗಳನ್ನು ಹಾಗೂ ಉಪ ತಾಲೂಕು ಕಲಾಪುರವನ್ನು ಮೈಸೂರು ರಾಜ್ಯಕ್ಕೆ ವರ್ಗಾಯಿಸಲು ಸಲಹೆ ನೀಡಿದರು.[೫೮] ಈ ಎಲ್ಲ ಸಮಿತಿಗಳ ವರದಿಯನ್ನಾಧರಿಸಿ ಬಳ್ಳಾರಿಯನ್ನು ಕರ್ನಾಟಕ ರಾಜ್ಯದ ಜಿಲ್ಲೆಯನ್ನಾಗಿ ಹಾಗೂ ಹೊಸಪೇಟೆಯನ್ನು ಬಳ್ಳಾರಿ ಜಿಲ್ಲೆಯ ಒಂದು ತಾಲೂಕಗಿ ರಚನೆ ಮಾಡಲಾಯಿತು.

ಟಿಪ್ಪಣಿಗಳು

೧. ಮಹದೇವ ಸಿ., ಸುಬ್ಬಣ್ಣ ರೈ. ಎ., ಮಾಧವ ಪೆರಾಜೆ, ಹೊಸಪೇಟೆ ತಾಲ್ಲೂಕು ದರ್ಶನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨, ಪುಟ.೩

೨. ಅದೇ ಪುಟ. ೩

೩. ಸೂರ್ಯನಾಥ ಕಾಮತ್, ಕೃಷ್ಣಮೂರ್ತಿ ಪಿ.ವಿ., ಇತಿಹಾಸ ದರ್ಶನ ಸಂಪುಟ (೧೦), ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು, ೧೯೯೫, ಪುಟ.೧೩೩

೪. ರಾಮಕೃಷ್ಣ ಕೆ.ಆರ್., ಗೋಪಾಲ್ ಆರ್., ಗಂಗಾಧರ ಟಿ.ಎಸ್., ವಿಜಯನಗರ ಅಧ್ಯಯನ ಸಂಪುಟ ೮, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳಗೆ ನಿರ್ದೇಶನಾಲಯ, ಹೊಸಪೇಟೆ, ೨೦೦೩, ಪುಟ. ೫೪

೫. ಮಹದೇವ ಸಿ. ೨೦೦೨, ಪೂರ್ವೋಕ್ತ ಪುಟ ೨.೩.

೬. ಸರ್ವೇಶ್ವರ, ಹೊಸಪೇಟೆ, ಸುವರ್ಣ ಮಹೋತ್ಸವ ಸಮಾರಂಭಗಳು, ಹೊಸಪೇಟೆ ಪುರಸಭೆ, ೧೯೧೩-೧೯೬೪, ಪುಟ.೪

೭. ಅದೇ ಪುಟ. ೬

೮. ವಿರೂಪಾಕ್ಷಿ ಪೂಜಾರಹಳ್ಳಿ, (ಎಂ.ಫಿಲ್ ಪ್ರಬಂಧ) ಬಳ್ಳಾರಿ ಜಿಲ್ಲೆಯಲ್ಲಿ ಕಲೆಕ್ಟರುಗಳ ಆಳ್ವಿಕೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೧೯೯೫, ಪುಟ.೫

೯. ಮಧು ಎಂ.ಎನ್., (ಎಂ.ಫಿಲ್ ಪ್ರಬಂಧ), ಹೊಸಪೇಟೆ ಪ್ರದೇಶದ ಚಾರಿತ್ರಿಕ ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೦೭, ಪುಟ.೫

೧೦. ಕೃಷ್ಣರಾವ್ ಎಂ.ವಿ., ಕೇಶವಭಟ್ ಎಂ., ಕರ್ನಾಟಕದ ಇತಿಹಾಸ ದರ್ಶನ; ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ, ಬೆಂಗಳೂರು, ೧೯೭೦, ಪುಟ.೫-೬

೧೧. ಮಹದೇವ ಸಿ., ಮತ್ತಿತರರು, ೨೦೦೨, ಪೂರ್ವೋಕ್ತ, ಪುಟ.೧೦-೧೧

೧೨. ಮಧು ಎಂ.ಎನ್., ೨೦೦೭, ಪೂರ್ವೋಕ್ತ, ಪು.೫-೬

೧೩. ಅದೇ ಪುಟ. ೬

೧೪. ಸರ್ವೇಶ್ವರಸ್ವಾಮಿ, ೧೯೬೪, ಪೂರ್ವೋಕ್ತ, ಪುಟ. ೧೪

೧೫. ಮಹದೇವ ಸಿ. ಮತ್ತಿತರರು, ೨೦೦೨, ಪೂರ್ವೋಕ್ತ, ಪುಟ.೧೩

೧೬. ಮಧು ಎಂ.ಎನ್., ೨೦೦೭, ಪೂರ್ವೋಕ್ತ, ಪುಟ.೦೭

೧೭. ಮಹದೇವ ಸಿ., ಮತ್ತಿತರರು, ೨೦೦೨, ಪೂರ್ವೋಕ್ತ, ಪುಟ.೧೪

೧೮. ಅದೇ ಪುಟ.೧೫

೧೯. ದೀಕ್ಷಿತ್ ಜಿ.ಎಸ್., ರಾಮಸ್ವಾಮಿ ಬಿ., ಭಾರ್ಗವಿ ಶಿವಯ್ಯ, ಶ್ರೀಕೃಷ್ಣದೇವರಾಯನ ಜೀವನ ಸಾಧನೆಗಳು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, ೧೯೯೭, ಪುಟ.೨೧

೨೦. ಮಧು, ಎಂ.ಎನ್., ೨೦೦೭, ಪೂರ್ವೋಕ್ತ, ಪುಟ.೮

೨೧. ಮಹದೇವ ಸಿ., ೨೦೦೨, ಪೂರ್ವೋಕ್ತ, ಪುಟ ೧೮

೨೨. ಮಧು ಎಂ.ಎನ್., ೨೦೦೭, ಪೂರ್ವೋಕ್ತ, ಪುಟ.೧೦

೨೩. ಮಹದೇವ ಸಿ., ೨೦೦೨, ಪೂರ್ವೋಕ್ತ, ಪುಟ. ೨೦

೨೪. ದೇವರಕೊಂಡಾರೆಡ್ಡಿ, ಶಾಸನ ಸಂಪುಟ.೩ ಹಂಪೆಯ ಶಾಸನಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೦, ಪುಟ.೨೨

೨೫. ದೀಕ್ಷಿತ್ ಜಿ.ಎಸ್., ಪೂರ್ವೋಕ್ತ, ಪುಟ.೩೪

೨೬. ಬಳ್ಳಾರಿ ಜಿಲ್ಲಾ ಗ್ಯಾಸೆಟಿಯರ್, ಮೈಸೂರ್, ಮೈಸೂರು ಸರ್ಕಾರ, ಬೆಂಗಳೂರು, ೧೯೭೨ ಪುಟ.೩೫

೨೭. ಅದೇ ಪುಟ.೨೨

೨೮. ದೇವರಕೊಂಡಾರೆಡ್ಡಿ, ಶಾಸನ ಸಂಪುಟ - ೦೧, ಬಳ್ಳಾರಿ ಜಿಲ್ಲೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ, ೧೯೯೮, ಪುಟ.೩೮

೨೯. ಮಹದೇವ ಸಿ., ಮತ್ತಿತರರು, ೨೦೦೨, ಪೂರ್ವೋಕ್ತ, ಪುಟ ೨೧-೨೨

೩೦. ಮಧು ಎಂ.ಎನ್., ೨೦೦೭, ಪೂರ್ವೋಕ್ತ, ಪುಟ ೧೨-೧೩

೩೧. ಅದೇ ಪುಟ ೨೩-೨೪

೩೨. ಅದೇ ಪುಟ ೨೬

೩೩. ಅದೇ ಪುಟ ೨೯

೩೪. ಅದೇ ಪುಟ ೩೧

೩೫. ಲಿಂಗಯ್ಯ ಡಿ.ಎಲ್, ಭವ್ಯ ಹಿಂದೂ ಸಾಮ್ರಾಜ್ಯ ವಿಜಯನಗರ, ಲಿಂಗಯ್ಯ ಮಂಡ್ಯ ಚಿಕಿತ್ಸಾಲಯ, ಮಂಡ್ಯ, ೧೯೬೭, ಪು.೧೦೮

೩೬. ರವೀಂದ್ರನಾಥ ಕೆ., ಬಳ್ಳಾರಿ ಜಿಲ್ಲಾ ದರ್ಶನ, ಪ್ರಸಾರಾಂಗ, ಗುಲ್ಬರ್ಗಾ ವಿಶ್ವವಿದ್ಯಾಲಯ, ಗುಲ್ಬರ್ಗಾ, ೨೦೦೫, ಪುಟ.೮

೩೭. ರಾಮಕೃಷ್ಣ ಕೆ.ಆರ್., ಗಂಗಾಧರ ಟಿ.ಎಸ್., ಮಂಜುನಾಥಯ್ಯ ಟಿ.ಎಮ್., ವಿಜಯನಗರ ಅಧ್ಯಯನ ಸಂಪುಟ-೦೭, ಹಂಪಿ ಉತ್ಸವ-೨೦೦೧ರಲ್ಲಿ ಮಂಡಿಸಿದ ಪ್ರಬಂಧಗಳು, ಪುಟ ೧೧೫

೩೮. ಮಧು ಎಂ.ಎನ್., ೨೦೦೭, ಪೂರ್ವೋಕ್ತ, ಪುಟ.೪೩

೩೯. ಸೂರ್ಯನಾಥ ಕಾಮತ್, ವಿಜಯನಗರ ಸಾಮ್ರಾಜ್ಯ, ಅರ್ಚನಾ ಪ್ರಕಾಶನ, ಬೆಂಗಳೂರು, ೧೯೭೩, ಪುಟ.೨೦

೪೦. ಸೂರ್ಯನಾಥ ಕಾಮತ್., ಲಕ್ಷ್ಮಣ್ ತೆಲಗಾವಿ, ಇತಿಹಾಸ ದರ್ಶನ ಸಂಪುಟ-೩ ಪ್ರಥಮ ವಾರ್ಷಿಕ ಸಮ್ಮೇಳನದ ವಿಶೇಷ ಸಂಚಿಕೆ ೧೯೮೭, ಪುಟ. ೨೨

೪೧. ಮಹಾದೇವ ಸಿ., ೨೦೦೨, ಪೂರ್ವೋಕ್ತ ಪುಟ.೪೦

೪೨. ರಾಘುವೇಂದ್ರ ರಾವ್.ವಿ., ವಿಜಯನಗರ ಎಚ್., ವೆಂಕಟರಾಮಯ್ಯ ಅಂಡ್ ಸನ್ಸ್, ವಿದ್ಯಾನಿಧಿ, ಬುಕ್ ಡಿಪೋ, ಮೈಸೂರು, ೧೯೪೮ ಪುಟ.೬೪

೪೩. ಮಧು ಎಂ.ಎನ್., ಪೂರ್ವೋಕ್ತ, ಪುಟ. ೪೭

೪೪. ರಾಮಚಂದ್ರರಾವ್ ಎಸ್.ಕೆ., ಕನ್ನಡ ನಾಡಿನ ಧಾರ್ಮಿಕ ಪರಂಪರೆ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ನೃಪತುಂಗ ರಸ್ತೆ, ಬೆಂಗಳೂರು, ೧೯೮೩, ಪುಟ. ೪೮

೪೫. ರಾಮಕೃಷ್ಣ, ೨೦೦೧, ಪೂರ್ವೋಕ್ತ, ಪುಟ.೧೨೬

೪೬. ರಾಘುವೇಂದ್ರರಾವ್, ೧೯೪೮, ಪೂರ್ವೋಕ್ತ, ಪುಟ.೧೨೭

೪೭. ಮಧು ಎಂ.ಎನ್., ೨೦೦೭, ಪೂರ್ವೋಕ್ತ, ಪುಟ.೫೦-೫೧

೪೮. ಮಹಾದೇವ ಸಿ., ೨೦೦೨, ಪೂರ್ವೋಕ್ತ, ಪುಟ.೪೯-೫೦

೪೯. ಅದೇ ಪುಟ.೫೧-೫೩

೫೦.	ಸೂರ್ಯನಾಥ ಕಾಮತ್, ೧೯೭೩ ಪೂರ್ವೋಕ್ತ ಪುಟ.೪

೫೧.	ಕುಂಬಾಸ, ಬಳ್ಳಾರಿ ಜಿಲ್ಲಾ ಸಾಂಸ್ಕೃತಿಕ ದರ್ಶನ, ಸಂಶೋಧಿತ ಲೇಖನಗಳು, ಮಾಲತೇಶ ಪ್ರಕಾಶನ ಕುಂಚೂರು, ಹರಪನಹಳ್ಳಿ, ೧೯೯೦, ಪುಟ.೪೮

೫೨.	ಮಹಾದೇವ ಸಿ., ೨೦೦೨, ಪೂರ್ವೋಕ್ತ, ಪುಟ.೫೭

೫೩.	ಅದೇ ಪುಟ.೫೮

೫೪.	ಬಳ್ಳಾರಿ ಜಿಲ್ಲಾ ಗೆಜೆಟಿಯರ್, ೧೯೯೭; ಪುಟ.೧೦೪

೫೫.	ಮಧು ಎಂ.ಎನ್., ೨೦೦೭, ಪೂರ್ವೋಕ್ತ, ಪುಟ.೭೭-೭೮

೫೬.	ಮಹಾದೇವ ಸಿ., ೨೦೦೨, ಪೂರ್ವೋಕ್ತ, ಪುಟ.೫೯

೫೭.	ಮಧು ಎಂ.ಎನ್., ೨೦೦೭, ಪೂರ್ವೋಕ್ತ ಪುಟ.೯೧

೫೮.	ಮಹಾದೇವ ಸಿ., ೨೦೦೨, ಪೂರ್ವೋಕ್ತ, ಪುಟ ೬೦-೬೧

* * *

ಅಧ್ಯಾಯ ಮೂರು

ಪ್ರಮುಖ ವರ್ತಕ ಸಮುದಾಯಗಳು

ಅಧ್ಯಾಯ ಮೂರು

ಪ್ರಮುಖ ವರ್ತಕ ಸಮುದಾಯಗಳು

ಪ್ರಸ್ತಾವನೆ

ಯಾವುದೇ ನಗರ ಪ್ರದೇಶದ ಅಧ್ಯಯನ ಕೈಗೊಳ್ಳುವಾಗ ಅಲ್ಲಿನ ವರ್ತಕ ಸಮುದಾಯಗಳ, ಬಹುಮುಖಿ ಚಟುವಟಿಕೆಗಳು ಪ್ರಮುಖವಾದ ವಿಚಾರವಾಗಿ ಕಂಡುಬರುತ್ತದೆ. ವರ್ತಕ ಸಮುದಾಯಗಳು ತಮ್ಮ ಬಹುಮುಖಿ ಚಟುವಟಿಕೆಗಳಿಂದ ನಗರ ಪ್ರದೇಶಗಳ ವ್ಯಾಪ್ತಿ ವಿಸ್ತಾರವಾಗುವಂತೆ ಮಾಡಿವೆ. ಹೊಸಪೇಟೆಯಲ್ಲಿ ನೆಲೆಸಿರುವ ಪ್ರಮುಖ ವರ್ತಕ ಸಮುದಾಯಗಳೆಂದರೆ ಗುಜರಾತಿಗಳು, ರಾಜಸ್ಥಾನಿಗಳು, ಶೆಟ್ಟಿಗಳು ಹಾಗೂ ಮುಸ್ಲಿಮರು. ಈ ವರ್ತಕ ಸಮುದಾಯಗಳು ವ್ಯಾಪಾರ ಹಾಗೂ ವಾಣಿಜ್ಯದ ಜೊತೆಗೆ ಕೈಗಾರಿಕೆಗಳನ್ನು ಸ್ಥಾಪಿಸುವ, ಲೇವಾದೇವಿದಾರರಾಗಿ ಹಾಗೂ ಮಧ್ಯವರ್ತಿಗಳಾಗಿ ಕೆಲಸ ನಿರ್ವಹಿಸುವ ಹಾಗೂ ಸಾರ್ವಜನಿಕ ಕೆಲಸ ಕಾರ್ಯಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುವುದರ ಮೂಲಕ ನಗರದ ಅಭಿವೃದ್ಧಿಗೆ ಪೂರಕವಾಗಿವೆ.[೧]

ಬಳ್ಳಾರಿ ಜಿಲ್ಲೆಯ ಹೊಸಪೇಟೆ ನಗರವು ಪ್ರಮುಖ ವ್ಯಾಪಾರ ಕೇಂದ್ರವಾಗಿದೆ. ಈ ನಗರದಲ್ಲಿ ಅನೇಕ ವರ್ತಕ ಸಮುದಾಯಗಳು ನೆಲೆಸಿವೆ. ಕೆಲವು ಸಮುದಾಯಗಳು ಈ ಪ್ರದೇಶಕ್ಕೆ ಸಂಬಂಧಪಟ್ಟವಾದರೆ. ಇನ್ನು ಕೆಲವು ವರ್ತಕ ಸಮುದಾಯಗಳು ದೇಶದ ವಿವಿಧ ಭಾಗಗಳಿಂದ ಬಂದು ನೆಲೆ ನಿಂತಿರುವಂಥವು. ಈ ಸಮುದಾಯಗಳು ಈ ಪ್ರದೇಶಕ್ಕೆ ಬರಲು ಮುಖ್ಯ ಕಾರಣ ವ್ಯಾಪಾರದ ಸರಕುಗಳು. ಕರಾವಳಿ ಪ್ರದೇಶಗಳಲ್ಲಿ ನೆಲೆಸಿದ್ದ ಅನೇಕ ವರ್ತಕ ಸಮುದಾಯಗಳು[೨] ವ್ಯಾಪಾರವನ್ನು ಆರಂಭಿಸಿದ್ದಾಗ ಇವರ ವ್ಯಾಪಾರಕ್ಕೆ ಬೇಕಾದ ಸರಕುಗಳ ಅವಶ್ಯಕತೆ ಎದುರಾಯಿತು. ಆಗ ಈ ವರ್ತಕರು ಕರ್ನಾಟಕ ರಾಜ್ಯದ ಒಳನಾಡು ಪ್ರದೇಶಗಳೊಂದಿಗೆ ಸಂಪರ್ಕ ಹೊಂದಲಾರಂಭಿಸಿದರು. ಈ ಸಂಪರ್ಕದಿಂದ ಕೆಲವು ವರ್ತಕರು ಒಳನಾಡುಗಳೊಂದಿಗೆ ವ್ಯಾಪಾರ-ವಾಣಿಜ್ಯವನ್ನು ಆರಂಭಿಸಿದ್ದರು. ಇವರ ವ್ಯಾಪಾರ-ವಾಣಿಜ್ಯವು ಪ್ರಗತಿಯಲ್ಲಿ ಸಾಗಿ ಲಾಭ ಗಳಿಕೆಯಾಗುತ್ತಿತ್ತು. ಆದ್ದರಿಂದ ವರ್ತಕರು ಈ ಪ್ರದೇಶಗಳಲ್ಲಿಯೇ ನೆಲೆ ನಿಂತು ತಮ್ಮ ಸ್ವಂತ ವ್ಯಾಪಾರವನ್ನು ಆರಂಭಿಸಿದ್ದರು.

೩.೧. ಗುಜರಾತಿಗಳು

ಗುಜರಾತಿಗಳು ರಾಜಪ್ರಭುತ್ವದ ಕಾಲಾವಧಿಯಲ್ಲಿಯೇ ಕರ್ನಾಟಕಕ್ಕೆ ಬಂದಿದ್ದರು. ಟಿಪ್ಪು ತನ್ನ ಕಾಲಾವಧಿಯಲ್ಲಿಯೇ ವಿದೇಶಿ ವರ್ತಕರಿಗೆ ಮುಖ್ಯವಾಗಿ ಬ್ರಿಟಿಷರಿಗೆ ವ್ಯಾಪಾರದಲ್ಲಿ ಹಾನಿ ಉಂಟುಮಾಡಲು ಗುಜರಾತಿಗಳನ್ನು ಕರ್ನಾಟಕಕ್ಕೆ ಆಹ್ವಾನಿಸಿ ವ್ಯಾಪಾರವನ್ನು ಕೈಗೊಳ್ಳುವಂತೆ ಮಾಡಿ ಇವರಿಗೆ ಅನೇಕ ರೀತಿಯ ಸೌಲಭ್ಯಗಳನ್ನು ಮತ್ತು ರಿಯಾಯಿತಿಗಳನ್ನು ಒದಗಿಸಿದನು. ಬ್ರಿಟಿಷರ ಅವಧಿಯಲ್ಲಿಯೂ ಈ ವರ್ತಕ ಸಮುದಾಯವು ಕರ್ನಾಟಕದ ವಿವಿಧ ಪ್ರದೇಶಗಳಲ್ಲಿ ನೆಲೆಸಿತ್ತು. ಇವರು ಬ್ರಿಟಿಷರ ಅವಧಿಯಲ್ಲಿ ಶ್ರೀಮಂತ ವರ್ತಕರಾಗಿ, ಮಧ್ಯವರ್ತಿಗಳಾಗಿ, ಹಾಗೂ ಲೇವಾದೇವಿದಾರರಾಗಿದ್ದರು. ಇವರು ಬ್ರಿಟಿಷರ ಮತ್ತು ಸ್ಥಳೀಯ ವರ್ತಕರ ಮಧ್ಯೆ ಏಜೆಂಟರುಗಳಾಗಿಯೂ ಕಾರ್ಯನಿರ್ವಹಿಸುತ್ತಿದ್ದರು. ಬ್ರಿಟಿಷರ ಅವಧಿಯಲ್ಲಿ ಇವರು ವ್ಯಾಪಾರದಲ್ಲಿ ಇನ್ನೂ ಹೆಚ್ಚಿನ ತರಬೇತಿಯನ್ನು ಪಡೆದರು. ಗುಜರಾತಿಗಳು ಕಷ್ಟ ಜೀವಿಗಳಾಗಿದ್ದು, ವ್ಯಾಪಾರದಲ್ಲಿ ಪರಿಣತಿ ಹೊಂದಿದವರಾಗಿದ್ದರಿಂದ ಇಂದು ದೇಶದ ಎಲ್ಲ ಭಾಗಗಳಲ್ಲಿ ತಮ್ಮ ವ್ಯಾಪಾರವನ್ನು ನಡೆಸುತ್ತಿದ್ದಾರೆ.[೩]

ಈ ಸಮುದಾಯದವರು ಗುಜರಾತ್ ರಾಜ್ಯದ ವಿವಿಧ ಪ್ರದೇಶಗಳಿಂದ ಬಂದವರಾಗಿದ್ದಾರೆ. ಹೊಸಪೇಟೆಗೆ ಬರಲು ಕಾರಣ ಗುಜರಾತಿನಲ್ಲಿ ಹೆಚ್ಚಾಗಿ ನಡೆಯುತ್ತಿದ್ದ ಯುದ್ಧಗಳು, ಬರಗಾಲದ ಪರಿಸ್ಥಿತಿ, ಉದ್ಯೋಗವನ್ನು ಸೃಷ್ಟಿಸುವ ಕಾರ್ಖಾನೆಗಳು ಇಲ್ಲದಿರುವುದು. ವ್ಯಾಪಾರದಲ್ಲಿ ಪೈಪೋಟಿ ಇದ್ದದ್ದು ಈ ಎಲ್ಲ ಕಾರಣಗಳಿಗಾಗಿ ಇವರು ದೇಶದ ನಾನಾ ಭಾಗಗಳಿಗೆ ವಲಸೆ ಬಂದರು. ಅದೇ ರೀತಿಯಾಗಿ ಕರ್ನಾಟಕಕ್ಕೂ ಬಂದರು. ಕರ್ನಾಟಕದ ಪ್ರಮುಖ ವ್ಯಾಪಾರ ಕೇಂದ್ರಗಳಿಗೆ ಮೊದಲು ವಲಸೆ ಹೋದರು. ಅಲ್ಲಿ ವ್ಯಾಪಾರ ನಡೆಸುವಾಗ ಒಳನಾಡಿನೊಂದಿಗೆ ವ್ಯಾಪಾರ ಸಂಪರ್ಕವನ್ನು ಹೊಂದಿದರು. ಸಂಬಂಧಿಕರ ಜೊತೆಗೆ ಮೊದಲು ಹುಬ್ಬಳ್ಳಿಗೆ ಬಂದು ಅಲ್ಲಿಂದ ಬಳ್ಳಾರಿಗೆ ಬಂದು ನಂತರ ಹೊಸಪೇಟೆಗೆ ಬಂದರು. ಉದ್ಯೋಗವನ್ನು ಅರಸುತ್ತಾ ಬಂದಿದ್ದ ಇವರು ಇಲ್ಲಿ ಮೊದಲು ರೈತರ ಕಟ್ಟಿಗೆಯನ್ನು ತೆಗೆದುಕೊಂಡು, ತಯಾರಿಸಿಕೊಟ್ಟು, ಸಣ್ಣಪುಟ್ಟ ವ್ಯಾಪಾರವನ್ನು ಮಾಡುತ್ತಿದ್ದರು. ನಂತರ ವಿದೇಶಗಳಿಂದ ಸರಕುಗಳನ್ನು ತರಿಸಿಕೊಂಡು ಸ್ವಂತ ವ್ಯಾಪಾರ ಮಾಡುತ್ತಾ ಹೊಸಪೇಟೆಯಲ್ಲಿಯೇ ಕುಟುಂಬ ಸಮೇತ ನೆಲೆನಿಂತರು. ಇವರು ೧೯೭೦ರ ನಂತರ ಸ್ವಂತ ವ್ಯಾಪಾರವನ್ನು ಪ್ರಾರಂಭಿಸಿದರು.[೪] ಗುಜರಾತಿಗಳಲ್ಲಿ ಮುಖ್ಯವಾಗಿ ಪಟೇಲ್, ವಾಣಿಯಾ, ಬ್ರಾಹ್ಮಣ, ಬನಿಯಾ, ಶಾಗಳು, ಅಂಬಾನಿ, ಗಾಮಿಗಳು, ಗಡವಿಗಳು ಪ್ರಮುಖರು.[೫]

ಹೊಸಪೇಟೆಯಲ್ಲಿ ಅಧಿಕ ಸಂಖ್ಯೆಯಲ್ಲಿ ಇರುವವರೆಂದರೆ ಪಟೇಲ್‌ರು. ಗುಜರಾತ ಪಾಟೇಲ್‌ರ ಜಾತಿ ವಾಲ್ಮೀಕಿ. ಇಲ್ಲಿಯ ವಾಲ್ಮೀಕಿ (ನಾಯಕ)ಗಳನ್ನು ಗುಜರಾತದಲ್ಲಿ ಪಟೇಲ ಎನ್ನುವರು. ಈ ಪಾಟೇಲರಲ್ಲಿ ಎರಡು ಉಪಪಂಗಡಗಳಿವೆ ಕಡವ ಪಾಟೇಲ ಹಾಗೂ ಲೇವಾಪಟೇಲ. ಕಡವ ಪಾಟೇಲರು ಭಾರತದ ಎಲ್ಲ

ಕಡೆ ತಮ್ಮ ವ್ಯಾಪಾರ ಜಾಲವನ್ನು ಹೊಂದಿದ್ದಾರೆ. ಲೇವಾಪಾಟೇಲರು ಲಂಡನ್, ಅಮೆರಿಕ ಹಾಗೂ ಜರ್ಮನ್ ಮುಂತಾದ ದೇಶಗಳಲ್ಲೂ ನೆಲೆಸಿದ್ದಾರೆ.

ಗುಜರಾತಿಗಳು ಹೊಸಪೇಟೆಯಲ್ಲಿ ಮುಖ್ಯವಾಗಿ ಟಿಂಬರ್ (ಕಟ್ಟಿಗೆ) ವ್ಯಾಪಾರದ ಮೂಲಕ ಗುರುತಿಸಿಕೊಂಡಿದ್ದಾರೆ. ಇದರ ಜೊತೆಗೆ ಬಟ್ಟೆ ವ್ಯಾಪಾರ, ಸಾರಿಗೆ ಉದ್ಯಮ, ಗಣಿಗಾರಿಕೆ, ಹಾರ್ಡ್‌ವೇರ್ ವ್ಯಾಪಾರ ಮುಂತಾದವುಗಳಲ್ಲೂ ತೊಡಗಿಸಿಕೊಂಡಿದ್ದಾರೆ. ಗುಜರಾತ್ ಪ್ರದೇಶಗಳ ಕಾರ್ಖಾನೆಗಳಿಗೆ ಇಲ್ಲಿಂದ ಕಚ್ಚಾ ಸರಕುಗಳನ್ನು ಕಳುಹಿಸುತ್ತಾರೆ. ಗುಜರಾತಿಗಳು ಗುಜರಾತನ ಕಛ್, ಅಹಮದಾಬಾದ್, ಸೂರತ್, ಬರೋಡ, ರಾಜಕೋಟ್‌ಗಳಿಂದ ಹೊಸಪೇಟೆಗೆ ಬಂದಿದ್ದಾರೆ.[೬] ಗುಜರಾತಿಗಳು ಕೇವಲ ವ್ಯಾಪಾರದ ದೃಷ್ಟಿಯಿಂದಷ್ಟೆ ಅಲ್ಲದೆ ಇಲ್ಲಿಯ ಕಾರ್ಖಾನೆಗಳಲ್ಲಿ ಉದ್ಯೋಗವನ್ನು ಮಾಡುವ ಉದ್ದೇಶದಿಂದಲೂ ಬಂದಿದ್ದಾರೆ. ಇವರು ಹತ್ತಿರದ ಜಿಂದಾಲ್ (J.S.W) ಕಾರ್ಖಾನೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಉದ್ಯೋಗವನ್ನು ಮಾಡುತ್ತಿದ್ದಾರೆ. ಗಡವಿ ಸಮುದಾಯವು ಗುಜರಾತ್‌ನಲ್ಲಿ ಇರುವ ತಮ್ಮ ಕಾರ್ಖಾನೆಗಳಿಗೆ ಈ ಪ್ರದೇಶದಿಂದ ಸರಕುಗಳನ್ನು ಕಳುಹಿಸುತ್ತದೆ. ಅಂದರೆ ಗುಜರಾತಿಗಳಲ್ಲಿ ಈ ಸಮುದಾಯವು ಗಣಿಗಾರಿಕೆಯನ್ನು ಮಾಡುತ್ತದೆ. ಇನ್ನೊಂದು ಸಮುದಾಯವಾದ ಗಾಮಿಗಳು ಸಾರಿಗೆ ಉದ್ಯಮವನ್ನು ತಮ್ಮ ವೃತ್ತಿಯನ್ನಾಗಿ ಮಾಡಿಕೊಂಡಿದ್ದಾರೆ. ಇವರ ಜನಸಂಖ್ಯೆ ಹೊಸಪೇಟೆಯಲ್ಲಿ ಕಡಿಮೆ ಪ್ರಮಾಣದಲ್ಲಿದೆ.[೭] ಹೊಸಪೇಟೆಯಲ್ಲಿ ಪಾಟೇಲ ಸಮುದಾಯದವರ ಜನಸಂಖ್ಯೆ ೧೫೦ ಇದೆ. ೧೦ ರಿಂದ ೧೨ ಮನೆಗಳಿವೆ. ೬ ಸಾಮಿಲ್‌ಗಳಿವೆ. ಈ ಸಮುದಾಯದವರು ತಮ್ಮ ವ್ಯಾಪಾರ-ವಾಣಿಜ್ಯಕ್ಕೆ ಸಂಬಂಧಿಸಿದಂತೆ ವಿದೇಶಗಳೊಂದಿಗೆ ಮತ್ತು ಅನೇಕ ಬಂದರು ಪಟ್ಟಣಗಳ ಜೊತೆಗೆ ಸಂಬಂಧವನ್ನು ಹೊಂದಿದ್ದಾರೆ.[೮]

೩.೨. ರಾಜಸ್ಥಾನಿಗಳು

ರಾಜಸ್ಥಾನಿಗಳು ಭಾರತದ ವಿವಿಧ ಪ್ರದೇಶಗಳಲ್ಲಿ ನೆಲೆ ನಿಂತಿದ್ದಾರೆ ಹಾಗೂ ವ್ಯಾಪಾರ ಜಾಲವನ್ನು ಹೊಂದಿದ್ದಾರೆ. ಅದೇ ರೀತಿಯಾಗಿ ಹೊಸಪೇಟೆ ಪ್ರದೇಶದಲ್ಲಿ ಈ ವರ್ತಕ ಸಮುದಾಯವಿದೆ. ಈ ವರ್ತಕ ಸಮುದಾಯವು ರಾಜಸ್ಥಾನದಿಂದ ಈ ಪ್ರದೇಶಕ್ಕೆ ವಲಸೆ ಬಂದಿದೆ. ಇವರು ಈ ಪ್ರದೇಶಕ್ಕೆ ವಲಸೆ ಬರಲು ಕಾರಣ ರಾಜಸ್ಥಾನದಲ್ಲಿ ಹೆಚ್ಚಾಗಿ ಮರುಭೂಮಿ ಪ್ರದೇಶವಿರುವುದು, ನೀರಿನ ಅಭಾವ, ಒಳ್ಳೆಯ ಸಾರಿಗೆ ವ್ಯವಸ್ಥೆ ಇರದಿರುವುದು. ರಾಜಸ್ಥಾನಕ್ಕೆ ಹತ್ತಿರವಿರುವ ಗುಜರಾತನಿಂದ ಬಟ್ಟೆಯನ್ನು ಖರೀದಿಸಿ ರಾಜಸ್ಥಾನದಲ್ಲಿ ಮಾರಾಟ ಮಾಡುವ ಅನೇಕ ವ್ಯಾಪಾರ ಮಳಿಗೆಗಳು ಇದ್ದು, ಅದರಿಂದುಂಟಾದ, ವ್ಯಾಪಾರದ ಪೈಪೋಟಿ, ವ್ಯವಸಾಯ ಮಾಡಲು ಯೋಗ್ಯವಾದ ವಾತಾವರಣವಿಲ್ಲದಿರುವುದು ಮುಂತಾದ ಕಾರಣಗಳಿಂದ ರಾಜಸ್ಥಾನಿಗಳು ಈ ಪ್ರದೇಶಕ್ಕೆ ಬಂದು ನೆಲೆಸಿದರು.[೯]

ಈ ವರ್ತಕ ಸಮುದಾಯವು ಸುಮಾರು ೧೫೦ ವರ್ಷಗಳ ಹಿಂದೆ ಹೊಸಪೇಟೆ ನಗರಕ್ಕೆ ವ್ಯಾಪಾರಕ್ಕಾಗಿ ಬಂತು. ಆದರೆ ಇಲ್ಲಿಯೇ ನೆಲೆಯೂರಲಿಲ್ಲ. ಇಲ್ಲಿಯೇ ಹಲವು ತಿಂಗಳುಗಳ ಕಾಲ ಇದ್ದು, ವ್ಯಾಪಾರವನ್ನು

ಮಾಡಿಕೊಂಡು ಮತ್ತೆ ತಮ್ಮ ಮೂಲಸ್ಥಾನಕ್ಕೆ ಹಿಂತಿರುಗುತ್ತಿದ್ದರು. ಇವರು ಈ ನಗರಕ್ಕೆ ವ್ಯಾಪಾರಕ್ಕಾಗಿ ಬಂದಾಗ ಒಂದೇ ಕಡೆ ನೆಲೆ ನಿಲ್ಲದೇ ಮನೆ-ಮನೆಗಳಿಗೆ, ಸುತ್ತ-ಮುತ್ತಲ ಹಳ್ಳಿಗಳಿಗೆ, ಹಳ್ಳಿ ಪ್ರದೇಶದಲ್ಲಿ ನಡೆಯುತ್ತಿದ್ದ ಸಂತೆಗಳಿಗೆ ಹೋಗಿ ವ್ಯಾಪಾರವನ್ನು ಮಾಡುತ್ತಿದ್ದರು. ಇವರು ತಮ್ಮ ವ್ಯಾಪಾರ ಸಾಮಗ್ರಿಗಳನ್ನು ಸಂರಕ್ಷಿಸಲು ಸ್ಥಳೀಯವಾಗಿ ಗುಂಪಾಗಿ ಮನೆಗಳನ್ನು ಬಾಡಿಗೆಗಾಗಿ ಪಡೆಯುತ್ತಿದ್ದರು. ಈ ಪ್ರದೇಶದಲ್ಲಿ ವ್ಯಾಪಾರ ವಹಿವಾಟು ಪ್ರಗತಿ ಕಂಡು ಲಾಭಗಳಿಸುವಂತಾಯಿತು. ಆದ್ದರಿಂದ ಈ ಸಮುದಾಯಗಳು ಈ ಪ್ರದೇಶಗಳಿಗೆ ಕುಟುಂಬ ಸಮೇತ ವಲಸೆ ಬಂದು ನೆಲೆಸಿದರು. ಇಲ್ಲಿಯೇ ಸ್ವಂತ ವ್ಯಾಪಾರವನ್ನು ಆರಂಭಿಸಿ, ತಮ್ಮದೇ ಆದ ವ್ಯಾಪಾರದ ಬೀದಿಗಳಲ್ಲಿ ಪ್ರತ್ಯೇಕವಾಗಿ ವಾಸಮಾಡತೊಡಗಿದರು.

ರಾಜಸ್ಥಾನಿ ವರ್ತಕರಲ್ಲಿ ಜೈನರು, ಸೋನಿ, ಪುರೋಹಿತ, ರಜಪೂತ, ಚೌದ್ರಿ, ಬನಿಯಾಗಳು ಪ್ರಮುಖರು. ಈ ವರ್ತಕ ಸಮುದಾಯವು ದೇಶದ ಇತರ ಭಾಗಗಳಂತೆ ಕರ್ನಾಟಕ ಎಲ್ಲ ನಗರಗಳಲ್ಲಿ ನೆಲೆಸಿದೆ. ರಾಜಸ್ಥಾನಿಗಳಲ್ಲಿ ಜೈನ ಸಮುದಾಯದವರು ಅಧಿಕ ಸಂಖ್ಯೆಯಲ್ಲಿದ್ದಾರೆ.[೯] ಈ ವರ್ತಕ ಸಮುದಾಯವು ಮುಖ್ಯವಾಗಿ ಹೊಸಪೇಟೆಯಲ್ಲಿ ಮಾಡುವ ವ್ಯಾಪಾರವೆಂದರೆ ಬಟ್ಟೆ ವ್ಯಾಪಾರ, ಪಾತ್ರೆ ಸಾಮಾನಿನ ವ್ಯಾಪಾರ, ಕಿರಾಣಿ ಅಂಗಡಿ, ಎಲೆಕ್ಟ್ರಾನಿಕ್ ಸಾಮಾನಿನ ವ್ಯಾಪಾರ, ಆಟೋಮೊಬೈಲ್, ಬಂಗಾರ-ಬೆಳ್ಳಿ ವ್ಯಾಪಾರ, ಲೇವಾದೇವಿ ವ್ಯವಹಾರ (ಹಣವನ್ನು ಬಡ್ಡಿಗೆ ಕೊಡುವ), ಗಣಿಗಾರಿಕೆ, ಹೋಟಲ್ ಉದ್ಯಮ ಹಾಗೂ ಸಾರಿಗೆ ಉದ್ಯಮ.

ಹೊಸಪೇಟೆಯಲ್ಲಿರುವ ರಾಜಸ್ಥಾನಿಗಳ ಇಲ್ಲಿನ ಕೆಲವೊಂದು ಬೀದಿಗಳಲ್ಲಿ ನೆಲೆಸಿದ್ದಾರೆ. ಮೇನ್ ಬಜಾರ್, ಮೇದಾರ್ ಓಣಿ, ಜಾಲಿ ಲೈನ್, ಗಾಂಧಿ ಚೌಕ್, ಹಳೇ ಬಸ್‌ಸ್ಟಾಂಡ್, ರಾಣಿಪೇಟೆ ಇನ್ನು ಮುಂತಾದ ಕಡೆಗಳಲ್ಲಿ ಈ ಸಮುದಾಯದವರ ಮನೆಗಳು ಮತ್ತು ವ್ಯಾಪಾರದ ಮಳಿಗೆಗಳಿವೆ. ಇವರು ಹೆಚ್ಚಾಗಿ ವ್ಯಾಪಾರದ ಮಳಿಗೆಗಳು ಇರುವ ಕಡೆ ವಾಸವಾಗಿದ್ದಾರೆ. ಈ ಸಮುದಾಯದವರಲ್ಲಿ ಜೈನ ಸಮುದಾಯದವರ ೭೦ ವ್ಯಾಪಾರದ ಮಳಿಗೆಗಳು ಹಾಗೂ ೩೫೦ ಮನೆಗಳಿವೆ, ೨೫೦೦-೩೦೦೦ ಜನಸಂಖ್ಯೆ ಇದೆ. ಸೋನಿ ಸಮುದಾಯದವರ ೪೦ ವ್ಯಾಪಾರದ ಮಳಿಗೆಗಳಿವೆ, ಹಾಗೂ ೪೫ ಮನೆಗಳಿವೆ, ೨೦೦ ಜನಸಂಖ್ಯೆಯಿದೆ. ರಜಪೂತರು ೫ ಸಾವಿರ ಜನಸಂಖ್ಯೆ ಇದ್ದು, ೨೦೦ ಮನೆಗಳಿವೆ. ಪುರೋಹಿತರ ೧೫೦ (ಕುಟುಂಬಗಳು) ಮನೆಗಳು ಇದ್ದು, ೩೫೦ ಅಂಗಡಿಗಳಿವೆ.

ರಾಜಸ್ಥಾನಿಗಳಲ್ಲಿ ಮುಖ್ಯವಾಗಿ ಜೈನ ಮತ್ತು ಪುರೋಹಿತ ಸಮುದಾಯದವರು ಹೊಸಪೇಟೆಗೆ ಬಂದು, ಸ್ವಂತ ವ್ಯಾಪಾರ ಆರಂಭಿಸಿ ೫೦ ವರ್ಷಗಳಾಗಿವೆ. ಈ ಸಮುದಾಯದವರು ಹೊಸಪೇಟೆಯಲ್ಲಿ ಹೆಚ್ಚಾಗಿ ಆಭರಣ ಮತ್ತು ಬಟ್ಟೆಗಳ ವ್ಯಾಪಾರವನ್ನು ಮಾಡುತ್ತಾರೆ. ಈ ಸಮುದಾಯದವರು ಹೆಚ್ಚಾಗಿ ಸ್ಥಳೀಯ ಜನರ ಅಭಿರುಚಿಗೆ ತಕ್ಕಂತೆ ಸರಕುಗಳನ್ನು ತರಿಸಿಕೊಂಡು ಮಾರಾಟ ಮಾಡುತ್ತಾರೆ. ಹೊಸಪೇಟೆಯ ವ್ಯಾಪಾರದಲ್ಲಿ ರಾಜಸ್ಥಾನಿ ಸಮುದಾಯದ ವ್ಯಾಪಾರವು ಶೇಕಡಾ ೬೦% ರಷ್ಟು ಇದೆ. ಇನ್ನೊಂದು

ಸಮುದಾಯವಾದ ಸೋನಿ ಸಮುದಾಯವು ಹೊಸಪೇಟೆಗೆ ಬಂದು ಸುಮಾರು ನೂರು ವರ್ಷವಾಗಿದೆ. ಇವರು ಮೊದಲು ಇಲ್ಲಿಗೆ ಬಂದು ವ್ಯಾಪಾರವನ್ನು ಮಾಡಿಕೊಂಡು ತಮ್ಮ ಸ್ವತಃ ನೆಲೆಗಳಿಗೆ ಹೋಗುತ್ತಿದ್ದರು. ದುಡಿಮೆ ಹೆಚ್ಚಿದ ನಂತರ ಕುಟುಂಬ ಸಮೇತ ಹೊಸಪೇಟೆಯಲ್ಲಿ ನೆಲೆಸಿ ಸ್ವಂತದರು ವ್ಯಾಪಾರವನ್ನು ಪ್ರಾರಂಭಿಸಿದರು. ಇವರು ಚಿನ್ನ ಬೆಳ್ಳಿ ಆಭರಣಗಳ ತಯಾರಿಕೆ ಮತ್ತು ಮಾರಾಟವನ್ನು ಮಾಡುತ್ತಾರೆ. ಹೊಸಪೇಟೆಯ ಆಭರಣಗಳ ವ್ಯಾಪಾರದಲ್ಲಿ ಈ ಸಮುದಾಯದ ಕೊಡುಗೆ ಶೇಕಡಾ ೭೦%ರಷ್ಟು ಇದೆ. ಇವರು ಆಭರಣಗಳ ವ್ಯಾಪಾರದ ಜೊತೆಗೆ ಷೇರಿನ ವ್ಯವಹಾರ, ರಿಯಲ್ ಎಸ್ಟೇಟ್ ವ್ಯವಹಾರ, ಲೇವಾದೇವಿ ವ್ಯವಹಾರವನ್ನು ಮಾಡುತ್ತಾರೆ. ಇವರು ಬಂಗಾರ ಮತ್ತು ಬೆಳ್ಳಿಯ ಸಾಮಾನುಗಳ ತಯಾರಿಕೆಯಲ್ಲಿ ಪರಿಣಿತರಾಗಿರುವುದರಿಂದ ಇವರು ನೆಲೆಸಿರುವ ಬೇರೆ ಪ್ರದೇಶಗಳಲ್ಲಿಯೂ ಈ ವ್ಯಾಪಾರವನ್ನು ಮಾಡುತ್ತಿದ್ದಾರೆ. ಸೋನಿ ಸಮುದಾಯವು ರಾಜಸ್ಥಾನದಲ್ಲಿ ಹಿಂದುಳಿದ ಜಾತಿಗಳಲ್ಲಿ ಬರುತ್ತದೆ. ಅದೇ ರೀತಿಯಾಗಿ ರಾಜಸ್ಥಾನಿಗಳಲ್ಲಿಯೇ ಇನ್ನೊಂದು ಸಮುದಾಯವಾದ ರಜಪೂತರು, ಇವರಲ್ಲಿ ಮುಖ್ಯವಾಗಿ ಸಿಂಗರು ಮೂಲತಃ ರಾಜಸ್ಥಾನಿಗಳಾಗಿದ್ದು, ಹೊಸಪೇಟೆಗೆ ಬರುವುದಕ್ಕಿಂತ ಮುಂಚೆ ತಮಿಳುನಾಡಿಗೆ ವಲಸೆ ಬಂದಿದ್ದರು. ನಂತರ ಹೊಸಪೇಟೆಗೆ ಬಂದರು. ಇವರು ಹೊಸಪೇಟೆಗೆ ಬಂದು ಎರಡು ಶತಮಾನಗಳಾಗಿವೆ. ಇವರ ಮಾತೃ ಭಾಷೆ ಹಿಂದಿ. ಇವರು ಮೂಲತಃ ಸಾರಿಗೆ ಉದ್ಯಮವನ್ನು ಬಸ್ಸುಗಳನ್ನು ಇಟ್ಟುಕೊಂಡು ಆರಂಭಿಸಿದರು. ವ್ಯವಸಾಯವನ್ನು ಉಪಕಸುಬನ್ನಾಗಿ ಮಾಡಿಕೊಂಡಿದ್ದರು. ಇತ್ತೀಚೆಗೆ ಗಣಿ ಉದ್ಯಮದಲ್ಲಿ ಪ್ರಬಲರಾಗಿದ್ದು, ಹೋಟಲ್ ಉದ್ಯಮವನ್ನು ಹಾಗೂ ಇನ್ನಿತರ ವ್ಯಾಪಾರಗಳನ್ನು ಮಾಡುತ್ತಿದ್ದಾರೆ. ಇವರು ಆರ್ಥಿಕವಾಗಿ ತುಂಬ ಶ್ರೀಮಂತರಾಗಿದ್ದು, ರಾಜಕೀಯವಾಗಿಯೂ ಪ್ರಬಲರಾಗಿದ್ದಾರೆ.

ಈ ರೀತಿಯಾಗಿ ಹೊಸಪೇಟೆಯಲ್ಲಿ ರಾಜಸ್ಥಾನಿಗಳು ಅಧಿಕ ಸಂಖ್ಯೆಯಲ್ಲಿದ್ದು, ಇದೊಂದು ಪ್ರಭಾವಿ ಸಮುದಾಯವಾಗಿದೆ. ಎಲ್ಲಾ ರಂಗಗಳಲ್ಲೂ ತನ್ನ ಛಾಪನ್ನು ಮೂಡಿಸಿದೆ.[೨೦]

೩.೧. ಸ್ಥಳೀಯರು

ಶೆಟ್ಟಿಗಳು

ಹೊಸಪೇಟೆ ನಗರದಲ್ಲಿ ನೆಲೆಸಿರುವ ಪ್ರಮುಖ ವರ್ತಕ ಸಮುದಾಯದಲ್ಲಿ ಸ್ಥಳೀಯ ವರ್ತಕರಾಗಿದ್ದು, ಇಲ್ಲಿಯೇ ಬಹಳ ವರ್ಷಗಳ ಕಾಲ ವ್ಯಾಪಾರವನ್ನು ಮಾಡುತ್ತಾ ಬಂದವರು ಶೆಟ್ಟಿಗಳು. ಇವರು ಬಹಳ ವರ್ಷಗಳ ಹಿಂದೆಯೇ ಆಂಧ್ರದಿಂದ ಈ ನಗರಕ್ಕೆ ಬಂದವರು. ಶೆಟ್ಟಿ ಸಮುದಾಯದವರು ಯಾವುದೇ ಪ್ರದೇಶಕ್ಕೆ ವ್ಯಾಪಾರಕ್ಕೆ ವಲಸೆ ಹೋದರೆ, ಅವರು ಮೊದಲು ನಗರೇಶ್ವರ ದೇವಾಲಯವನ್ನು ನಿರ್ಮಿಸುತ್ತಾರೆ. ಇವರು ನಿರ್ಮಿಸಿದ ನಗರೇಶ್ವರ ದೇವಾಲಯವು ಚಿತ್ತವಾಡ್ಗಿಯಲ್ಲಿ ಇಂದಿಗೂ ಇದೆ.[೨೧] ಇವರನ್ನು ಆರ್ಯವೈಶ್ಯರೆಂದು ಕೂಡ ಕರೆಯುತ್ತಾರೆ. ಇವರ ಮೂಲ ವೃತ್ತಿಯೇ ವ್ಯಾಪಾರ. ಮೊದಲು ವ್ಯವಸಾಯವನ್ನು ಮಾಡುತ್ತಿದ್ದರು.

ಈ ಸಮುದಾಯದವರ ಕಿರಾಣಿ ವ್ಯಾಪಾರದ ಮಳಿಗೆಗಳು ಹೊಸಪೇಟೆಯಲ್ಲಿ ಅಧಿಕ ಸಂಖ್ಯೆಯಲ್ಲಿವೆ. ಇದರ ಜೊತೆಗೆ ಬಟ್ಟೆ ವ್ಯಾಪಾರ, ಆಭರಣಗಳ ವ್ಯಾಪಾರ, ಸಿಮೆಂಟಿನ ವ್ಯಾಪಾರ, ಗಣಿಗಾರಿಕೆ, ಸಣ್ಣ ಮತ್ತು ದೊಡ್ಡ ಪ್ರಮಾಣದ ಹೋಟಲ್ ವ್ಯಾಪಾರ, ಎಣ್ಣೆ ವ್ಯಾಪಾರ, ದಲ್ಲಾಳಿ (ಸಗಟು ವ್ಯಾಪಾರ), ಔಷಧಿಗಳ ವ್ಯಾಪಾರ, ಕಬ್ಬಿಣದ ವ್ಯಾಪಾರ ಮತ್ತು ಲೇವಾದೇವಿ ವ್ಯವಹಾರ, ಇನ್ನಿತರ ವ್ಯಾಪಾರಗಳನ್ನು ನಡೆಸುತ್ತಾರೆ. ರಾಜಸ್ಥಾನಿಗಳು ಮತ್ತು ಗುಜರಾತಿಗಳು ಈ ಪ್ರದೇಶಕ್ಕೆ ಬರುವುದಕ್ಕಿಂತ ಮುಂಚೆ ಈ ಪ್ರದೇಶದಲ್ಲಿ ಇವರು ಅಧಿಕ ಸಂಖ್ಯೆಯಲ್ಲಿದ್ದು, ವ್ಯಾಪಾರ-ವಾಣಿಜ್ಯದ ಮೇಲೆ ತಮ್ಮ ಹಿಡಿತ ಸಾಧಿಸಿದ್ದರು. ಈಗ ಇವರ ಜನಸಂಖ್ಯೆಯು ೬ ರಿಂದ ೭ ಸಾವಿರವಿದೆ. ಹಾಗೂ ಇವರ ೮೦೦ ಮನೆಗಳಿವೆ. ಈ ಸಮುದಾಯದವರು ಮುಖ್ಯವಾಗಿ ಹೊಸಪೇಟೆಯಲ್ಲಿ ಮೇನ್ ಬಜಾರ್, ನೆಹರೂ ಕಾಲೋನಿ, ಎಂ.ಜಿ.ನಗರ, ಪಟೇಲ್ ನಗರ, ಅಮರಾವತಿ ನಗರ ಮತ್ತು ಬಸವೇಶ್ವರ ಬಡಾವಣೆಯಲ್ಲಿ ಅಧಿಕ ಸಂಖ್ಯೆಯಲ್ಲಿ ವಾಸವಾಗಿದ್ದಾರೆ. ಇವರು ಸೌಮ್ಯ ಸ್ವಭಾವದವರಾಗಿದ್ದು, ಧಾರ್ಮಿಕ ಪ್ರವೃತ್ತಿವುಳ್ಳವರಾಗಿದ್ದಾರೆ. ಹೊಸಪೇಟೆಯಲ್ಲಿ ಈ ಸಮುದಾಯದವರು ಅನೇಕ ಸಿನಿಮಾ ಮಂದಿರಗಳನ್ನು ಹೊಂದಿದ್ದಾರೆ. ಶೆಟ್ಟಿ ಸಮುದಾಯದವರೆ ಅನೇಕ ಸಂಖ್ಯೆಯಲ್ಲಿ ಈ ಉದ್ಯಮವನ್ನು ನಡೆಸುತ್ತಿದ್ದಾರೆ. ಉದಾಹರಣೆಗೆ ಲಕ್ಷ್ಮಿ ಟಾಕೀಸ್, ವಿಜಯ ಟಾಕೀಸ್, ಬಾಲಾ ಟಾಕೀಸ್, ಸಚ್ಚಿದಾನಂದ ಟಾಕೀಸ್, ಹಾಗೂ ಸರಸ್ವತಿ ಟಾಕೀಸ್.

ಹೊಸಪೇಟೆಯ ವ್ಯಾಪಾರದಲ್ಲಿ ಶೇಕಡಾ ೩೦%ರಷ್ಟು ವ್ಯಾಪಾರವನ್ನು ಈ ಸಮುದಾಯವರು ಮಾಡುತ್ತಾರೆ.

ಇತ್ತೀಚಿನ ದಿನಗಳಲ್ಲಿ ಈ ಸಮುದಾಯದವರು ಬೇರೆ ಬೇರೆ ವೃತ್ತಿಗಳಲ್ಲಿ ಹಾಗೂ ರಾಜಕೀಯವಾಗಿ ತಮ್ಮ ನೆಲೆಯನ್ನು ಕಂಡುಕೊಳ್ಳುತ್ತಿದ್ದಾರೆ. ಇವರು ತಮ್ಮ ಮೂಲ ವೃತ್ತಿಯಾದ ವ್ಯಾಪಾರವನ್ನು ಬಿಟ್ಟಿಲ್ಲ.[೧೨]

ಮುಸ್ಲಿಮರು

ಹೊಸಪೇಟೆಯ ವರ್ತಕ ಸಮುದಾಯಗಳಲ್ಲಿ ಮುಸ್ಲಿಮರು ಒಬ್ಬರಾಗಿದ್ದು, ಅಧಿಕ ಸಂಖ್ಯೆಯ ವ್ಯಾಪಾರಿಗಳಿದ್ದಾರೆ. ಇವರು ಮೂಲತಃ ಇಲ್ಲಿಯೇ ಬಹಳ ವರ್ಷಗಳಿಂದ ನೆಲೆನಿಂತವರು. ಮುಸ್ಲಿಮರಲ್ಲಿ ಪ್ರಮುಖವಾಗಿ ಶಿಯಾ, ಸುನ್ನಿ, ಶೇಕ್, ತೊಂಡೆ ಎಂಬ ಪಂಗಡಗಳಿವೆ. ಶೇಕ್‌ರಲ್ಲಿ ಪಿಂಜಾರ ಎನ್ನುವ ಉಪ ಪಂಗಡವಿದೆ. ಮುಸ್ಲಿಮ ವರ್ತಕ ಸಮುದಾಯದವರು ಎಲ್ಲ ತರಹದ ವ್ಯಾಪಾರವನ್ನು ಮಾಡುತ್ತಾರೆ. ಅದರಲ್ಲಿ ಮುಖ್ಯವಾಗಿ ಬಟ್ಟೆ ವ್ಯಾಪಾರ, ಕಿರಾಣಿ, ತರಕಾರಿ, ಹಣ್ಣು, ಮಾಂಸಗಳ ವ್ಯಾಪಾರ, ಮುಖ್ಯವಾದದ್ದು. ಇದಲ್ಲದೆ ಮೆಕಾನಿಕ್‌ಗಳಾಗಿ, ಚಾಲಕರಾಗಿ, ಬಟ್ಟೆಯನ್ನು ಹೊಲಿಯುವರಾಗಿ ಇದ್ದಾರೆ, ಗಣಿಗಾರಿಕೆಯಲ್ಲಿ ಕಾರ್ಖಾನೆಯ, ಮಾಲಿಕರಾಗಿಯೂ ಗುರುತಿಸಿಕೊಂಡಿದ್ದಾರೆ. ಈ ಮೇಲಿನ ವ್ಯಾಪಾರ ಮತ್ತು ವೃತ್ತಿಗಳನ್ನೇ ಅಲ್ಲದೆ ಇನ್ನಿತರ ವ್ಯಾಪಾರಗಳನ್ನು ಮಾಡುತ್ತಾರೆ.[೧೩] ಇವರಲ್ಲಿ ತರಕಾರಿ ವ್ಯಾಪಾರಿಗಳು ತಮಗೆ ಬೇಕಾದ ತರಕಾರಿಗಳನ್ನು ಸ್ಥಳೀಯ ಗ್ರಾಮಗಳಿಂದ ತರಿಸಿಕೊಳ್ಳುತ್ತಾರೆ.

ಹೊಸಪೇಟೆ ನಗರದಲ್ಲಿ ಇವರು ಹೆಚ್ಚಾಗಿ ಶ್ರೀರಾಮುಲು ನಗರ, ಮೆಹಬೂಬ ನಗರ, ಚಪ್ಪರದ್ಹಳ್ಳಿ, ಆಜಾದ್ ನಗರ, ಮೂರುಗೋರಿ ಪ್ರದೇಶಗಳಲ್ಲಿ ಅಧಿಕ ಸಂಖ್ಯೆಯಲ್ಲಿದ್ದಾರೆ. ಹೊಸಪೇಟೆ ನಗರದಲ್ಲಿ ಇವರ ಹಣ್ಣಿನ ವ್ಯಾಪಾರದ ಮಳಿಗೆಗಳು ೩೦೦, ತರಕಾರಿಯ ಅಂಗಡಿಗಳು ೨೦೦, ವರ್ಕ್‌ಶಾಪ್‌ಗಳು ೩೦೦, ಮಾಂಸದಂಗಡಿಗಳು ೨೦೦, ಬಟ್ಟೆ ಅಂಗಡಿಗಳು, ೫೦ ಹಾಗೂ ಇತರೆ ೨೦೦ ಮಳಿಗೆಗಳು ಇವೆ. ೫೦೦೦ ಮೇಲ್ಪಟ್ಟು ಮನೆಗಳಿವೆ. ಇವರು ಶೇಕಡಾ ೩೦% ರಷ್ಟು ಜನಸಂಖ್ಯೆ ಹೊಂದಿದ್ದಾರೆ. ಹೊಸಪೇಟೆಯ ವ್ಯಾಪಾರ-ವಾಣಿಜ್ಯದಲ್ಲಿ ಈ ಸಮುದಾಯದವರು ಪ್ರಮುಖಪಾತ್ರವಹಿಸಿದ್ದಾರೆ.[೨೪]

೩.೪. ಇತರ ವರ್ತಕ ಸಮುದಾಯಗಳು

ಈ ಮೇಲೆ ತಿಳಿಸಿದ ಪ್ರಮುಖ ವರ್ತಕ ಸಮುದಾಯಗಳಲ್ಲದೆ ಹೊಸಪೇಟೆ ನಗರದಲ್ಲಿ ಇನ್ನಿತರ ವರ್ತಕ ಸಮುದಾಯಗಳೂ ಇವೆ. ಈ ಸಮುದಾಯಗಳು ಅನೇಕ ರೀತಿಯ ವ್ಯಾಪಾರ ವಹಿವಾಟನ್ನು ನಡೆಸುತ್ತಿವೆ.

ಲಿಂಗಾಯತ: ಈ ಸಮುದಾಯದಲ್ಲಿ ಬರುವ ಬಣಜಿಗರು ವ್ಯಾಪಾರವನ್ನು ಮಾಡುತ್ತಾರೆ. ಇವರು ಲೇವಾದೇವಿ ವ್ಯವಹಾರ, ಬಟ್ಟೆ ವ್ಯಾಪಾರ, ಕಿರಾಣಿ ವ್ಯಾಪಾರ, ಇನ್ನಿತರ ವ್ಯಾಪಾರಗಳನ್ನು ಮಾಡುತ್ತಾರೆ.[೨೫]

ಬ್ರಾಹ್ಮಣರು: ಇವರಲ್ಲಿ ಸ್ಮಾರ್ತ ಮತ್ತು ವೈಷ್ಣವರು ಎಂಬ ಪಂಗಡಗಳಿವೆ. ಹೊಸಪೇಟೆಯಲ್ಲಿ ಇವರ ಸಮುದಾಯದ ಹೋಟೆಲ್‌ಗಳಿವೆ. ಇವರು ಹೆಚ್ಚಾಗಿ ಈ ಉದ್ಯಮವನ್ನೆ ಮಾಡುತ್ತಾರೆ. ಈ ಸಮುದಾಯದವರು ಧಾರ್ಮಿಕ ಪ್ರವೃತ್ತಿಯವರಾಗಿದ್ದು, ಪೂಜಾ ಕಾರ್ಯಗಳಿಗೆ ಹೆಚ್ಚಿನ ಮಹತ್ವವನ್ನು ನೀಡುತ್ತಾರೆ. ಈ ಸಮುದಾಯದವರು ಹೆಚ್ಚಾಗಿ ವಡಕರಾಯನ ಗುಡಿ, ವೇಣುಗೋಪಾಲ ಗುಡಿ, ಎಂ.ಜಿ. ನಗರ, ಎನ್.ಸಿ. ಕಾಲೋನಿ, ಜೆ.ಪಿ.ನಗರ, ಕೋಟೆಯ ಏರಿಯಾ, ರಾಣಿಪೇಟೆಯಲ್ಲಿ ಅಧಿಕವಾಗಿದ್ದು, ೨೦೦೦ ಮನೆಗಳಿವೆ. ಶೇಕಡಾ ೧೦% ಜನಸಂಖ್ಯೆಯಿದೆ.

ನಾಯಕರು: ಇವರು ಮೂಲತಃ ಇಲ್ಲಿಯವರೆ ಆಗಿದ್ದು, ವ್ಯವಸಾಯವನ್ನೆ ವೃತ್ತಿಯನ್ನಾಗಿಸಿಕೊಂಡಿದ್ದಾರೆ. ಈ ಸಮುದಾಯದಲ್ಲಿ ಕೆಲವರು ವ್ಯಾಪಾರಿಗಳಾಗಿದ್ದಾರೆ. ಇವರಲ್ಲಿ ಹೆಚ್ಚಿನವರು ತರಕಾರಿ ವ್ಯಾಪಾರವನ್ನು ಮತ್ತು ಹಣವನ್ನು ಬಡ್ಡಿಗೆ ನೀಡುವ ವ್ಯವಹಾರವನ್ನು ಮಾಡುತ್ತಾರೆ.

ದೇವಾಂಗ: ಈ ಸಮುದಾಯದವರು ಬಟ್ಟೆಗಳನ್ನು ನೇದು, ಮಾರಾಟವನ್ನು ಮಾಡುತ್ತಿದ್ದರು. ಆದರೆ ಇವರು ಹಲವಾರು ಆರ್ಥಿಕ ತೊಂದರೆಗಳಿಗೆ ಸಿಲುಕಿ, ಇನ್ನಿತರ ಉದ್ಯಮಗಳಲ್ಲಿ ತೊಡಗಿಕೊಳ್ಳಬೇಕಾಯಿತು.

ಕುಂಬಾರರು: ಈ ಸಮುದಾಯದವರು ಬೇರೆ ಕಡೆಯಿಂದ ಸರಕುಗಳನ್ನು ತಂದು ಹೊಸಪೇಟೆ ನಗರದಲ್ಲಿ ಮಣ್ಣಿನ ಪಾತ್ರೆಗಳ ವ್ಯಾಪಾರವನ್ನು ಮಾಡುತ್ತಾರೆ. ಇವರು ಉತ್ಪಾದನೆ ಮಾಡುವುದಿಲ್ಲ.

ಮೇದಾರರು: ಇವರು ಉತ್ಪಾದನಾ ವಿನಿಮಯ ವರ್ತಕ ಸಮುದಾಯವಾಗಿದೆ. ಇವರು ಬಿದಿರಿನ ಉತ್ಪನ್ನಗಳನ್ನು ತಯಾರಿಸಿ ಮಾರಾಟ ಮಾಡುತ್ತಾರೆ. ಇದರ ಜೊತೆಗೆ ಕರಿಬಂಡೆ ಮತ್ತು ಹೆಂಚಗಳ

ವ್ಯಾಪಾರವನ್ನು ಸಹ ಮಾಡುತ್ತಾರೆ. ಇವರು ಬಿದಿರಿನ ಉತ್ಪನ್ನಗಳಿಗೆ ಬೇಕಾದ ಕಚ್ಚಾ ಸಾಮಗ್ರಿಗಳನ್ನು ಮಲೆನಾಡು ಪ್ರದೇಶಗಳಿಂದ ತರಿಸಿಕೊಂಡು, ಬಿದಿರಿನ ಉತ್ಪನ್ನಗಳನ್ನು ತಯಾರಿಸಿ, ಸ್ಥಳೀಯವಾಗಿ ಸುತ್ತ ಮುತ್ತಲಿನ ಪ್ರದೇಶಗಳಿಗೆ ಕಳುಹಿಸುತ್ತಾರೆ. ಹೊಸಪೇಟೆಯಲ್ಲಿ ಇವರ ಜನಸಂಖ್ಯೆಯು ೨-೩ ಸಾವಿರವಿದೆ. ೧೦೦೦ ಮನೆಗಳಿವೆ. ಇವರು ಶೈಕ್ಷಣಿಕವಾಗಿ ಹಾಗೂ ರಾಜಕೀಯವಾಗಿ ಹಿಂದುಳಿದಿದ್ದಾರೆ.

ಗೌಳಿಗರು: ಈ ಸಮುದಾಯದವರು ಮೂಲನಿವಾಸಿಗಳಾಗಿದ್ದು, ಇವರು ಹಾಲು ಉತ್ಪಾದಕರಾಗಿದ್ದಾರೆ. ಹಾಲು ಉತ್ಪನ್ನಗಳನ್ನು ತಯಾರಿಸಿ, ಸ್ಥಳೀಯವಾಗಿ ವಿಲೇವಾರಿ ಮಾಡುತ್ತಾರೆ. ಇವರು ೩ ಸಾವಿರ ಜನಸಂಖ್ಯೆ ಹೊಂದಿದ್ದು, ೧೦೦೦ ಮನೆಗಳಿವೆ. ಇವರು ಗೌಳಿಯರ ಹಟ್ಟಿಯಲ್ಲಿ ಸಾಮೂಹಿಕವಾಗಿ ವಾಸವಾಗಿದ್ದಾರೆ. ಇವರು ಶೈಕ್ಷಣಿಕವಾಗಿ ಹಾಗೂ ರಾಜಕೀಯವಾಗಿ ಹಿಂದುಳಿದಿದ್ದಾರೆ.

ಈ ಮೇಲೆ ವಿವರಿಸಿದ ವರ್ತಕ ಸಮುದಾಯದವಲ್ಲದೆ. ಪಂಜಾಬಿನಿಂದ ವಲಸೆ ಬಂದಿರುವ ಸಿಖ್‌ರು ಹೊಸಪೇಟೆ ನಗರದಲ್ಲಿ ಆಟೋಮೊಬೈಲ್ ವ್ಯಾಪಾರವನ್ನು ಮಾಡುತ್ತಿದ್ದಾರೆ. ಇವರ ಹತ್ತು ವ್ಯಾಪಾರದ ಮಳಿಗೆಗಳು ಹೊಸಪೇಟೆಯಲ್ಲಿವೆ.

ಮಹಾರಾಷ್ಟ್ರದಿಂದ ಮಾರಾಠರು ಈ ಪ್ರದೇಶಕ್ಕೆ ವಲಸೆ ಬಂದು, ಇಲ್ಲಿಯೇ ವ್ಯಾಪಾರವನ್ನು ಮಾಡುತ್ತಿದ್ದಾರೆ. ಕಾರವಾರ, ಮಂಗಳೂರು ಮತ್ತು ಉಡುಪಿ ಜಿಲ್ಲೆಗಳಿಂದ ಅನೇಕ ಕೊಂಕಣಿ ಬ್ರಾಹ್ಮಣರು ಇಲ್ಲಿಗೆ ವಲಸೆ ಬಂದು ಇಲ್ಲಿ ಹೋಟೆಲ್ ಉದ್ಯಮವನ್ನು ನಡೆಸುತ್ತಿದ್ದಾರೆ. ಇವರು ಹೊಸಪೇಟೆಗೆ ಬಂದು ಸುಮಾರು ಐವತ್ತು ವರ್ಷಗಳಾಗಿವೆ. ಇವರು ತಮ್ಮ ಮನೆತನದ ಹೆಸರುಗಳಾದ ಶಾನಭಾಗ, ಪೈ ಇತ್ಯಾದಿ ಹೆಸರುಗಳಿಂದಲೇ ಹೊಸಪೇಟೆಯಲ್ಲಿ ಪ್ರಸಿದ್ಧರಾಗಿದ್ದಾರೆ. ಇವರು ತಮ್ಮ ಉದ್ಯಮಕ್ಕೆ ಬೇಕಾದ ಸರಕುಗಳನ್ನು ಸ್ಥಳೀಯವಾಗಿಯೇ ತರಿಸಿಕೊಳ್ಳುತ್ತಾರೆ. ಇವರು ತಮ್ಮ ಉದ್ಯಮಕ್ಕೆ ಬೇಕಾದ ಕೆಲಸಗಾರರನ್ನು ತಮ್ಮ ಊರುಗಳಿಂದಲೇ ಕರೆತರುತ್ತಾರೆ.[೧೬]

ಈ ಮೇಲೆ ವಿವರಿಸಿದ ಪ್ರಮುಖ ವರ್ತಕ ಸಮುದಾಯಗಳಲ್ಲದೆ ಇನ್ನೂ ಹಲವಾರು ಸಣ್ಣ-ಪುಟ್ಟ ವ್ಯಾಪಾರಿಗಳು ಹೊಸಪೇಟೆಯಲ್ಲಿ ಇದ್ದಾರೆ. ಈ ವರ್ತಕ ಸಮುದಾಯಗಳ ನಡುವೆ ಅಂತರಸಂಬಂಧವು ಉತ್ತಮವಾಗಿದ್ದು, ಹೊಸಪೇಟೆಯ ವ್ಯಾಪಾರ-ವಾಣಿಜ್ಯಕ್ಕೆ ಈ ಸಮುದಾಯಗಳ ಪಾತ್ರವು ಅಷ್ಟೇ ಮುಖ್ಯವಾಗಿದೆ.

ಟಿಪ್ಪಣಿಗಳು

೧. ಮೋಹನ್‌ಕೃಷ್ಣ ರೈ. ಕೆ., ವಸಾಹತುಶಾಹಿ ಮತ್ತು ನಗರೀಕರಣ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭, ಪುಟ ೩೯; ಹಾಸಿಮ್ ಎಸ್.ಆರ್., ಎ ಸಿಟಿ ಇನ್ ಎ ಸಿಸ್ಟಮ್ ಆಫ್ ಸಿಟೀಸ್ ಇನ್ ಪ್ರೊಫೈಲ್ಸ್ ಆಫ್ ಗ್ರೋವಿಂಗ್ ಸಿಟಿ, ದ ಮಹಾರಾಜ ಸಯಾಜಿರಾವ್ ಯೂನಿವರ್ಸಿಟಿ, ಎಕೋನೋಮಿಕ್ ಸೀರಿಸ್, ನಂ.೧೧, ಬರೋಡಾ, ೧೯೭೧

೨. ಜಿನ್ ಡಿಲೋಚ್, ಟ್ರಾನ್ಸ್ ಪೋರ್ಟ್ ಅಂಡ್ ಕಮ್ಯುನಿಕೇಶನ್ ಇನ್ ಇಂಡಿಯಾ, ಸಂಪುಟ II, ಆಕ್ಸಫರ್ಡ್ ಯೂನಿವರ್ಸಿಟಿ ಪ್ರೆಸ್, ನ್ಯೂಯಾರ್ಕ್ ೧೯೯೪, ಪುಟ ೪೪

೩. ಮೋಹನ್‌ಕೃಷ್ಣ ರೈ.ಕೆ. ವಸಾಹತುಪೂರ್ವ ಕರ್ನಾಟಕದ ನಗರ ಚರಿತ್ರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬, ಪುಟ. ೪೮-೪೯ ಮೋಹನ್‌ಕೃಷ್ಣ ರೈ. ಕೆ. ೨೦೦೭, ಪೂವೋಕ್ತ, ೩೯.

೪. ರಣಬೀರ್ ಚಕ್ರವರ್ತಿ, ಟ್ರೇಡ್ ಅ್ಯಂಡ್ ಟ್ರೇಡರ್ಸ್ ಇನ್ ಅರ್ಲಿ ಇಂಡಿಯನ್ ಸೊಸೈಟಿ, ಮನೋಹರ್ ಪಬ್ಲಿಕೇಷನ್, ನವದೆಹಲಿ, ೨೦೦೨-೦೭, ಪುಟ ೭೫-೮೦

೫. ಅದೇ ಪುಟ.೩೯

೬. ಶರ್ಮ, ಜಿ.ಡಿ., ಅರ್ಬನ್ ಎಕಾನಮಿ ಇನ್ ವೆಸ್ಟರ್ನ್ ಇಂಡಿಯಾ ಇನ್ ಲೇಟ್ ಎೖಟೀಂತ್ ಸಂಚುರಿ; ಇನ್ ದ ಸಿಟಿ ಇನ್ ಇಂಡಿಯನ್ ಹಿಸ್ಟರಿ (ಸಂ. ಇಂದು ಬಂಗಾ), ದೆಹಲಿ, ೧೯೯೧,

೭. ಮೌಖಿಕ ಸಂದರ್ಶನ, ಭೂಪಾಲರಾಘುವೇಂದ್ರ ಶೆಟ್ಟಿ, ಶೆಟ್ಟಿ ಸಮುದಾಯದವರು, ೧೮.೦೭.೨೦೦೯ ಹೊಸಪೇಟೆ

೮. ಸಿರಿನ್ ಮೆಹತಾ, ದ ಮಹಾಜನಸ್ ಅಂಡ ಬಿಸಿನೇಸ್ ಕಮ್ಯುನಿಟಿಸ್ ಆಫ್ ಅಹಮದಾಬಾದ್, ಇನ್ ಬಿಸಿನೇಸ್ ಕಮ್ಯುನಿಟೀಸ್ ಆಫ್ ಇಂಡಿಯಾ (ಸಂ. ತ್ರೀಪಾಡಿ), ನ್ಯೂಡೆಲ್ಲಿ, ೧೯೮೪, ೧೮೦-೮೩

೯. ಮಹಾದೇವ ಸಿ., ಮತ್ತಿತರರು, ಹೊಸಪೇಟೆ ತಾಲೂಕು ದರ್ಶನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨, ಪುಟ ೨೪೦

೧೦. ಮೌಖಿಕ ಸಂದರ್ಶನ, ರಾಜೇಶ, ರಾಜಸ್ಥಾನಿ ಸಮುದಾಯದವರು, ೨೪.೦೮.೨೦೦೯ ಹೊಸಪೇಟೆ

೧೧. ಹಿರೇಮಠ ಬಿ.ಆರ್, ಶಾಸನಗಳಲ್ಲಿ ಕರ್ನಾಟಕದ ವರ್ತಕರು, ಧಾರವಾಡ, ೧೯೮೬, ಪುಟ22; ಮಧು ಎಂ.ಎನ್. ಹೊಸಪೇಟೆ ಪ್ರದೇಶದ ಚಾರಿತ್ರಿಕ ಅಧ್ಯಯನ, (ಎಂ.ಫಿಲ್. ನಿಬಂಧ) ಹಂಪಿ ೨೦೦೭, ಪುಟ ೭೦

೧೨. ಮೌಖಿಕ ಸಂದರ್ಶನ, ಭೂಪಾಲರಾಘುವೇಂದ್ರ ಶೆಟ್ಟಿ, ಶೆಟ್ಟಿಸಮುದಾಯದವರು, ೨೦೦೯

೧೩. ಮಹದೇವ ಸಿ., ೨೦೦೨, ಪೂರ್ವೋಕ್ತ ಪು.೨೩೬

೧೪. ಮೌಖಿಕ ಸಂದರ್ಶನ, ಆರೀಫ್, ಮುಸ್ಲಿಮ ಸಮುದಾಯದವರು, ೩.೮.೨೦೦೯ ಹೊಸಪೇಟೆ

೧೫. ಹಿರೇಮಠ ಬಿ.ಆರ್., ೧೯೮೬, ಪೂರ್ವೋಕ್ತ, ೭೦

೧೬. ಮೌಖಿಕ ಸಂದರ್ಶನ, ವಿ. ಸತ್ಯನಾರಾಯಣ, ಸಮಾಜ ಸೇವಕರು, ೪.೮.೨೦೦೯ ಹೊಸಪೇಟೆ

• • •

ಅಧ್ಯಾಯ ನಾಲ್ಕು

ವರ್ತಕ ಸಮುದಾಯಗಳು ಹಾಗೂ ಪ್ರಭುತ್ವ: ಅಂತರ್ ಸಂಬಂಧಗಳು

೪.೧. ರಾಜಪ್ರಭುತ್ವ

೪.೨. ವಸಾಹತು ಪ್ರಭುತ್ವ

೪.೩. ಪ್ರಜಾಪ್ರಭುತ್ವ

ಅಧ್ಯಾಯ ನಾಲ್ಕು

ವರ್ತಕ ಸಮುದಾಯಗಳು ಹಾಗೂ ಪ್ರಭುತ್ವ: ಅಂತರ್ ಸಂಬಂಧಗಳು

೪.೧. ರಾಜಪ್ರಭುತ್ವ

ಆರ್ಥಿಕ ಚಟುವಟಿಕೆಗಳ ಒಂದು ಭಾಗವಾಗಿ ವ್ಯಾಪಾರ ವಾಣಿಜ್ಯ ವಿಷಯಗಳು ಪ್ರಮುಖವೆನಿಸುತ್ತವೆ. ರಾಜಪ್ರಭುತ್ವದ ಆಳ್ವಿಕೆಯ ಕಾಲವನ್ನು ರಾಜಕೀಯ ಇತಿಹಾಸವೆಂದು ಪರಿಗಣಿಸಿದರೂ, ಆರ್ಥಿಕ ಇತಿಹಾಸವನ್ನು ಕಡೆಗಣಿಸುವಂತಿಲ್ಲ. ಏಕೆಂದರೆ ಒಂದು ರಾಜ್ಯದ ಅಭಿವೃದ್ಧಿಯಲ್ಲಿ ಆರ್ಥಿಕ ಇತಿಹಾಸದ ಭಾಗವಾದ ವ್ಯಾಪಾರ-ವಾಣಿಜ್ಯ, ವರ್ತಕರು, ವರ್ತಕ ಸಂಘಗಳು, ಸಾರಿಗೆ-ಸಂಪರ್ಕ ಈ ವಿಷಯಗಳು ಮುಖ್ಯವೆನಿಸುತ್ತವೆ. ಆಯಾ ರಾಜರ ಆಳ್ವಿಕೆಯ ಕಾಲದಲ್ಲಿ ಈ ಮೇಲಿನ ವಿಷಯಗಳು ತಮ್ಮದೇ ಆದ ಪ್ರಭಾವವನ್ನು ಬೀರಿವೆ. ರಾಜಕೀಯವಾಗಿ ಸರ್ವಾಧಿಕಾರವು ರಾಜನ ಕೈಯಲ್ಲಿದ್ದರೂ, ವ್ಯಾಪಾರಿಗಳು ಆರ್ಥಿಕವಾಗಿ ಸದೃಢರಾಗಿದ್ದರು.[೧]

ರಾಜಪ್ರಭುತ್ವದ ಆಳ್ವಿಕೆ ಕಾಲದಲ್ಲಿ ರಾಜ್ಯಗಳು ವಿಸ್ತಾರವಾದಂತೆ ರಾಜ್ಯಗಳ ಸ್ವರೂಪದಲ್ಲಿ ಅನೇಕ ಬದಲಾವಣೆಗಳು ಆದವು. ಅನೇಕ ನಗರಗಳು ಬೆಳವಣಿಗೆ ಹೊಂದಿದವು. ಕೃಷಿ, ಕೈಗಾರಿಕೆ ಹಾಗೂ ಇವುಗಳ ಉಪ ಉತ್ಪನ್ನ ಘಟಕಗಳು ಉತ್ಪಾದಿಸುವ ವಸ್ತುಗಳ ಮಾರಾಟ ಮಾಡುವ ಪ್ರಕ್ರಿಯೆಗಳಲ್ಲಿ ವ್ಯಾಪಾರ-ವಾಣಿಜ್ಯ ಚಟುವಟಿಕೆಗಳು ಬೆಳವಣಿಗೆ ಹೊಂದಿದವು. ಇಂತಹ ವಸ್ತುಗಳನ್ನು ದೂರದ ಪ್ರದೇಶಗಳಿಗೆ ಸಾಗಿಸಲು ಅನೇಕ ಮಾರ್ಗಗಳು ನಿರ್ಮಾಣವಾದವು. ಇಂತಹ ವಸ್ತುಗಳ ಮಾರಾಟ ಮಾಡಲೆಂದು ವರ್ತಕ ಸಮುದಾಯಗಳು ಹುಟ್ಟಿಕೊಂಡವು, ವರ್ತಕರ ಹಿತರಕ್ಷಣೆಗಾಗಿ ವರ್ತಕ ಸಂಘಗಳು ಹುಟ್ಟಿಕೊಂಡವು. ಈ ವರ್ತಕ ಸಂಘಗಳು ವ್ಯಾಪಾರದಲ್ಲಿ ಮಾತ್ರವಲ್ಲದೆ ಆಡಳಿತದಲ್ಲಿ ಭಾಗವಹಿಸುವದರ ಮುಖಾಂತರ ರಾಜಕೀಯ ವ್ಯವಸ್ಥೆಯೊಂದರ ಹುಟ್ಟಿಗೂ ಕಾರಣರಾದರು. ರಾಜಪ್ರಭುತ್ವದ ಆಳ್ವಿಕೆಯ ಕಾಲದಲ್ಲಿ ಈ ಬಗೆಯ ಆರ್ಥಿಕತೆಯು ತನ್ನ ನೆಲೆಯನ್ನು ಕಂಡುಕೊಂಡಿತು.[೨]

ರಾಜಪ್ರಭುತ್ವದ ಆಳ್ವಿಕೆಯಲ್ಲಿ ಅನೇಕ ಸಮುದಾಯದ ವರ್ತಕರು ಇದ್ದರು. ಇವರು ರಾಜರ ಅಧಿಕಾರದಡಿಯಲ್ಲಿ ವ್ಯಾಪಾರವನ್ನು ನಡೆಸಬೇಕಾಗಿತ್ತು. ಸ್ವತಂತ್ರ್ಯವಾಗಿ ವ್ಯಾಪಾರವನ್ನು ಮಾಡುವಂತಿರಲಿಲ್ಲ.

ಆದರೆ ವ್ಯಾಪಾರಿಗಳು ರಾಜರ ಜೊತೆಗೆ ಒಳ್ಳೆಯ ಸಂಬಂಧವನ್ನು ಇಟ್ಟುಕೊಳ್ಳುವುದರ ಮೂಲಕ ತಮ್ಮ ವ್ಯಾಪಾರ-ವಾಣಿಜ್ಯವನ್ನು ವಿಸ್ತರಿಸಿದರು. ಯಾವುದೇ ವ್ಯಾಪಾರ ನೀತಿಯನ್ನು ರೂಪಿಸಲು ರಾಜನ ಅಪ್ಪಣೆಯನ್ನು ಪಡೆಯಬೇಕಾಗಿತ್ತು. ಪ್ರಾಚೀನ ಕಾಲದಿಂದಲೂ ಕರ್ನಾಟಕದಲ್ಲಿ ವ್ಯಾಪಾರ ಮತ್ತು ವಾಣಿಜ್ಯೋದ್ಯಮಗಳು ಆಂತರಿಕ ಮತ್ತು ಅಂತರ ರಾಷ್ಟ್ರೀಯ ಮಟ್ಟದಲ್ಲಿ ಸಾಕಷ್ಟು ಮುಂದುವರಿದ್ದಿವು.[೩]

ಕರ್ನಾಟಕದ ಅನೇಕ ರಾಜಮನೆತನಗಳಲ್ಲಿ ವಿಜಯನಗರ ಸಾಮ್ರಾಜ್ಯವು ಒಂದು. ಈ ಸಾಮ್ರಾಜ್ಯದ ವ್ಯಾಪ್ತಿಯಲ್ಲಿ ಅನೇಕ ಉಪನಗರಗಳು ಬರುತ್ತವೆ. ಅಂತವುಗಳಲ್ಲಿ ಹೊಸಪೇಟೆಯೂ ಒಂದಾಗಿದೆ. ಈ ನಗರಗಳಲ್ಲಿ ವ್ಯಾಪಾರ ಚಟುವಟಿಕೆಗಳು ಮತ್ತು ಧಾರ್ಮಿಕ ಕೆಲಸ ಕಾರ್ಯಗಳು ನಡೆಯುತ್ತಿದ್ದವು. ಈ ನಗರದಲ್ಲಿ ವರ್ತಕರಿಗೆ ವಾಸವಾಗುವುದಕ್ಕೆ ಕೃಷ್ಣದೇವರಾಯ ಅನುಮತಿ ನೀಡಿದ್ದನು. ಈ ಸಮುದಾಯದವರಿಗೆ ಮನೆಗಳನ್ನು ನಿರ್ಮಿಸಿದ್ದನು ಎಂಬುದು ವಿದೇಶಿ ಬರಹಗಳಿಂದ ತಿಳಿಯುತ್ತದೆ. ವಿಜಯನಗರ ಪಟ್ಟಣದಲ್ಲಿ ತಿರುಮಲಾದೇವಿ ಪಟ್ಟಣವು (ಹೊಸಪೇಟೆ) ಉಪನಗರವಾಗಿತ್ತು.[೪]

ವಿಜಯನಗರ ಸಾಮ್ರಾಜ್ಯದ ಆಳ್ವಿಕೆಯ ಕಾಲದಲ್ಲಿ ಕರ್ನಾಟಕದಲ್ಲಿ ಒಳನಾಡಿನ ಮತ್ತು ಹೊರನಾಡಿನ ವ್ಯಾಪಾರವು ಉಚ್ಛ್ರಾಯ ಸ್ಥಿತಿಯಲ್ಲಿತ್ತು.[೫] ಉಪನಗರಗಳಲ್ಲಿ ಒಂದಾದ ಹೊಸಪೇಟೆ ಪ್ರದೇಶವು ವಿಜಯನಗರ ಸಾಮ್ರಾಜ್ಯ ಸ್ಥಾಪನೆಗೆ ಪೂರ್ವವೇ ಹೊಸಪೇಟೆ ಪ್ರದೇಶವಿತ್ತೆಂದು ಅನೇಕ ಶಾಸನಗಳಿಂದ ತಿಳಿಯಬಹುದು. ವಿಜಯನಗರ ಕಾಲದಲ್ಲಿ ಕೃಷ್ಣದೇವರಾಯನು ಈ ಪ್ರದೇಶಕ್ಕೆ ತನ್ನ ಹೆಂಡತಿಯಾದ ತಿರುಮಲಾದೇವಿಯ ನೆನಪಿಗೆ ಹೊಸಪೇಟೆಯನ್ನು ಆಧುನಿಕ ಗ್ರಾಮವಾಗಿ ನಿರ್ಮಾಣ ಮಾಡಿದ್ದನು. ಆದ್ದರಿಂದ ಈ ಪ್ರದೇಶವನ್ನು ತಿರುಮಲಾದೇವಿ ಪಟ್ಟಣವೆಂದು ಕರೆಯುತ್ತಿದ್ದರು. ಈ ಪ್ರದೇಶಕ್ಕೆ ಹಲವು ಸಣ್ಣ ಪುಟ್ಟ ಗ್ರಾಮಗಳು ಮತ್ತು ಪ್ರದೇಶಗಳು ಸೇರಿಕೊಂಡು ಹೊಸಪೇಟೆ ಪ್ರದೇಶವಾಯಿತು. ವಿಜಯನಗರ ಸಾಮ್ರಾಜ್ಯದ ಅವಧಿಯಲ್ಲಿ ಈ ಪ್ರದೇಶದಲ್ಲಿ ವ್ಯಾಪಾರದಲ್ಲಿ ಹಲವು ಬದಲಾವಣೆಗಳಾಗಿ ಅನೇಕ ಕೈಗಾರಿಕೆಗಳು ಸ್ಥಾಪನೆಯಾಗಿದ್ದವು. ಅಷ್ಟೇ ಅಲ್ಲದೆ ವಿದೇಶಿ ವ್ಯಾಪಾರವೂ ಪ್ರಾಮುಖ್ಯತೆ ಪಡೆದುಕೊಂಡಿತ್ತು.[೬]

ವಿಜಯನಗರ ಸಾಮ್ರಾಜ್ಯವು ಕರಾವಳಿ ಪ್ರದೇಶಗಳನ್ನು ಒಳಗೊಂಡಿತ್ತು. ಈ ಸಾಮ್ರಾಜ್ಯದ ಮೂರು ದಿಕ್ಕುಗಳಿಗೆ ಸಮುದ್ರ ತೀರಗಳಿದ್ದವು. ಈ ರಾಜ್ಯದಲ್ಲಿ ೩೦೦ಕ್ಕೂ ಹೆಚ್ಚಿನ ರೇವು ಪಟ್ಟಣಗಳಿದ್ದವು. ಇವುಗಳ ಮೂಲಕ ಸಾಗರೋತ್ತರ ವ್ಯಾಪಾರ ನಡೆಯುತ್ತಿತ್ತು. ಈ ಸಾಮ್ರಾಜ್ಯವು ಹಿಂದೂ ಸಾಗರದ ದ್ವೀಪಗಳೊಂದಿಗೆ, ಮಲಯ, ಬರ್ಮಾ, ಚೀನಾ, ಅರೇಬಿಯಾ, ಪರ್ಷಿಯಾ, ದಕ್ಷಿಣ ಆಫ್ರಿಕಾ, ಶ್ರೀಲಂಕಾ, ಅಬಿಸೀನಿಯಾ ಮತ್ತು ಪೋರ್ಚುಗಲ್‌ಗಳೊಂದಿಗೆ ವ್ಯಾಪಾರ-ವಾಣಿಜ್ಯ ಸಂಪರ್ಕವನ್ನು ಹೊಂದಿತ್ತು. ಈ ವ್ಯಾಪಾರವು ಸಮುದ್ರದ ಮೂಲಕ ನಡೆಯುತ್ತಿತ್ತು. ಈ ವ್ಯಾಪಾರದಲ್ಲಿ ಹಿಂದೂ ಮತ್ತು ಮುಸ್ಲಿಂ ವರ್ತಕರು ಭಾಗವಹಿಸುತ್ತಿದ್ದರು.

ವಿದೇಶಿ ವ್ಯಾಪಾರದಲ್ಲಿ ಬಂದರು ಪಟ್ಟಣಗಳು ಪ್ರಮುಖ ಪಾತ್ರವಹಿಸಿದವು. ಅವುಗಳೆಂದರೆ ಗೋವಾ, ಕಾರವಾರ, ಅಂಕೋಲಾ, ಮಿರ್ಜಾನ್, ಹೊನ್ನಾವರ, ಭಟ್ಕಳ, ಬಸ್ರೂರು, ಗೋಕರ್ಣ, ಬಾರಕೂರು, ಮಂಗಳೂರು, ಮಂಜೇಶ್ವರ, ಕುಂಬ್ಳೆ, ನೀಲೇಶ್ವರ ಈ ಬಂದರು ಪಟ್ಟಣಗಳ ಮೂಲಕ ಬಿರುಸಿನ ವ್ಯಾಪಾರವು ನಡೆಯುತ್ತಿತ್ತು.[೭] ಈ ವ್ಯಾಪಾರದಿಂದಾಗಿ ಸುತ್ತ-ಮುತ್ತಲಿನ ಪ್ರದೇಶಗಳ ವ್ಯಾಪಾರದ ಮೇಲೆಯೂ ಪ್ರಭಾವ ಬೀರಿತ್ತು.

ವಿಜಯನಗರ ಕಾಲದಲ್ಲಿ ಈ ಬಂದರು ಪಟ್ಟಣಗಳ ಮೂಲಕ ರಫ್ತಾಗುತ್ತಿದ್ದ ವಸ್ತುಗಳೆಂದರೆ ಅಕ್ಕಿ, ಬಟ್ಟೆ, ಕಬ್ಬಿಣ, ಸಾಂಬಾರ ಪದಾರ್ಥಗಳು, ಸಕ್ಕರೆ, ಗೋಧಿ, ಕಾಳುಗಳು, ಶ್ರೀಗಂಧ, ತೇಗದ ಮರಗಳು, ಶುಂಠಿ, ಪೆಟ್ಲುಪ್ಪು, ಕಾಯಿ ಇತ್ಯಾದಿಗಳು. ಅದೇ ರೀತಿಯಾಗಿ ಆಮದಾಗುತ್ತಿದ್ದ ವಸ್ತುಗಳೆಂದರೆ ಸಾಮ್ರಾಜ್ಯದಲ್ಲಿ ಕುದುರೆ ವ್ಯಾಪಾರವನ್ನು ಅರಬರು ಮಾಡುತ್ತಿದ್ದರು. ಆನೆಗಳನ್ನು ಶ್ರೀಲಂಕಾದಿಂದ ಬಂದ ವರ್ತಕರು ಸರಬರಾಜು ಮಾಡುತ್ತಿದ್ದರು. ಮುತ್ತು, ಹವಳ, ಪಾದರಸ, ಶಿಂಧೂರ, ಚೀನಾರೇಷ್ಮೆ, ಮುಖಮಲ್, ಸೀಸ, ತವರ, ಕಬ್ಬಿಣ, ವರ್ಣದ್ರವ್ಯ, ಕರ್ಪೂರ, ಚಿನ್ನ, ತಾಮ್ರ, ಪಾದರಸ, ರೇಷ್ಮೆ, ವೆಲ್ವೇಟ್ ಬಟ್ಟೆಗಳನ್ನು ಆಮದು ಮಾಡಿಕೊಳ್ಳಲಾಗುತ್ತಿತ್ತು.[೮]

ವಿಜಯನಗರ ಸಾಮ್ರಾಜ್ಯದಲ್ಲಿ ವ್ಯಾಪಾರ-ವಾಣಿಜ್ಯದಲ್ಲಿ ತೊಡಗಿದ್ದ ವರ್ತಕರೆಂದರೆ ಶೆಟ್ಟಿಗಳು, ಬಣಜಿಗರು, ಪರ್ಷಿಯನ್ನರು, ಅರೇಬಿಯನ್ನರು, ಮಾಪಿಳ್ಳೆಗಳು, ದಕ್ಕನಿಗಳು, ನವಾಯತರು, ಪೋರ್ಚುಗೀಸರು, ಡಚ್ಚರು ಇನ್ನು ಮುಂತಾದವರು ಈ ಕಾಲಾವಧಿಯಲ್ಲಿ ಅನೇಕ ವರ್ತಕ ಸಂಘಗಳಿದ್ದವು. ನಾನಾದೇಶಿ, ಉಭಯನಾನಾದೇಶಿ, ನಕರ, ಸೆಟ್ಟಿಗಳು, ಬಣಜಿಗರು, ವೀರ ಬಣಜಿಗರು, ಸಾಲುಮೂಲೆ ಬಣಜಿಗರು, ಸೆಟ್ಟಿಗುತ್ತರು, ನಗರ ಹಂಜಮಾನರು ಮುಂತಾದವರ ವರ್ತಕ ಸಂಘಗಳಿದ್ದವು.[೯]

ವಿಜಯನಗರ ಕಾಲದಲ್ಲಿ ಬಾಹ್ಯ ವ್ಯಾಪಾರದಂತೆ ಆಂತರಿಕ ವ್ಯಾಪಾರವು ಉನ್ನತ ಮಟ್ಟದಲ್ಲಿತ್ತು. ಹಂಪೆಯು ವಿಜಯನಗರದ ಕಾಲದಲ್ಲಿ ವ್ಯಾಪಾರ ಮತ್ತು ಧಾರ್ಮಿಕ ಕೇಂದ್ರವಾಗಿ ಬೆಳವಣಿಗೆ ಹೊಂದಿತ್ತು. ಅದರ ಜೊತೆಗೆ ಹೊಸಪೇಟೆ ಪ್ರದೇಶವು ಪ್ರಮುಖ ಕೃಷಿ ಮತ್ತು ವ್ಯಾಪಾರ ಕೇಂದ್ರವಾಗಿ ಅಭಿವೃದ್ಧಿ ಹೊಂದಿತ್ತು. ಹೊಸಪೇಟೆಯು ಆಧುನಿಕ ನಗರವಾಗುವುದಕ್ಕೆ ಪೂರ್ವದಲ್ಲಿ ಚಿತ್ತವಾಡ್ಗಿಯೇ ಪ್ರಮುಖ ಗ್ರಾಮವಾಗಿತ್ತು. ಇದು ಜಿಲ್ಲೆಗೆ ದೊಡ್ಡ ವ್ಯಾಪಾರ ಕೇಂದ್ರವಾಗಿತ್ತು.[೧೦]

ಮಧ್ಯಕಾಲೀನ ಯುಗದ ಹೊಸಪೇಟೆಯಲ್ಲಿ ವಿಜಯನಗರದ ನಾಲ್ಕು ರಾಜವಂಶಗಳು ಹೊಸಪೇಟೆ ಪ್ರದೇಶವನ್ನು ಆಳ್ವಿಕೆ ಮಾಡಿದರು. ಕ್ರಿ.ಶ.೧೩೫೬ರ ವೇಳೆಗೆ ಹೊಯ್ಸಳ ಮೂರನೆಯ ಬಲ್ಲಾಳನು ನಿರ್ಮಿಸಿದ್ದ ಹೊಸ ಪಟ್ಟಣ ಹಂಪೆಯಲ್ಲಿ ಬುಕ್ಕನು ಆಳ್ವಿಕೆ ಮಾಡಿದನು. ಈತನು ವ್ಯಾಪಾರಿಗಳಿಗೆ ಉತ್ತೇಜನ ನೀಡಿದನು. ಚೀನಾ ದೇಶದ ಮಿಂಗ್ ರಾಜನ ಆಸ್ಥಾನಕ್ಕೆ ಬುಕ್ಕನು ಕ್ರಿ.ಶ.೧೩೭೪ರಲ್ಲಿ ನಿಯೋಗವನ್ನು

ಕಳುಹಿಸಿದ್ದನು. ಇದರಿಂದ ನಮಗೆ ತಿಳಿದು ಬರುವ ವಿಷಯವೆಂದರೆ ಚೀನಾ ಮತ್ತು ವಿಜಯನಗರ ಸಾಮ್ರಾಜ್ಯ ನಡುವಿನ ವ್ಯಾಪಾರ-ವಾಣಿಜ್ಯ ಸಂಬಂಧದವು ಹೇಗಿತ್ತು ಎನ್ನುವುದು. ಇಮ್ಮಡಿ ಹರಿಹರನು ತಂದೆಯ ನಂತರ ಆಡಳಿತ ವಹಿಸಿಕೊಂಡನು. ವ್ಯಾಪಾರ-ವಾಣಿಜ್ಯಗಳಿಗೆ ಹೆಚ್ಚಿನ ಪ್ರೋತ್ಸಾಹವಿತ್ತನು. ಇಮ್ಮಡಿ ದೇವರಾಯನ ಅವಧಿಯಲ್ಲಿ ಈ ಪಟ್ಟಣವು ಒಂದು ವ್ಯಾಪಾರ ಕೇಂದ್ರವಾಗಿ ಬೆಳವಣಿಗೆ ಹೊಂದಿತ್ತು. ಇಲ್ಲಿ ಅಂಗಡಿ ಬೀದಿಗಳೂ ಉದ್ದವಾಗಿಯೂ ಅಗಲವಾಗಿಯೂ ಇದ್ದವು.[೧೧]

ಈತನ ಕಾಲಾವಧಿಯಲ್ಲಿ ವಿಜಯನಗರವು ವಾಣಿಜ್ಯ ಕೇಂದ್ರವಾಗಿತ್ತು. ವಿದೇಶಿ ವರ್ತಕರು ಉತ್ತಮ ರೀತಿಯ ವ್ಯಾಪಾರವನ್ನು ನಡೆಸುತ್ತಿದ್ದರು. ವಿದೇಶಿ ವ್ಯಾಪಾರದ ವಿಶಿಷ್ಟ ಲಕ್ಷಣವೆಂದರೆ ಪಶ್ಚಿಮ ಕರಾವಳಿಯಲ್ಲಿ ಅದರಲ್ಲಿಯೂ ವಿಶೇಷವಾಗಿ ಮಲಬಾರಿನ ಕರಾವಳಿಯಲ್ಲಿ ವ್ಯಾಪಾರ ವ್ಯವಹಾರವು ಕೇಂದ್ರಿಕೃತವಾಗಿತ್ತು. ವಿಜಯನಗರವು ಆರ್ಥಿಕವಾಗಿ ಉನ್ನತ ಮಟ್ಟಕ್ಕೇರಿತ್ತು. ವಾಸ್ತವವಾಗಿ ಸಾಮ್ರಾಜ್ಯದ ಸಾಮಾಜಿಕ, ಆರ್ಥಿಕ ಅಭಿವೃದ್ಧಿಯೇ ಸಾರ್ವಭೌಮರ ರಾಜ್ಯ ನೀತಿಯಾಗಿತ್ತು. ಅರಸನು ವಿದೇಶಿ ವ್ಯಾಪಾರಕ್ಕೆ ಉತ್ತೇಜನವಿತ್ತಿದ್ದನು ಹಾಗೂ ವ್ಯಾಪಾರಿ ವರ್ಗಗಳಿಗೆ ಭದ್ರತೆಯನ್ನು ಒದಗಿಸಿದನು.[೧೨]

ಮೂರನೇ ವಿರೂಪಾಕ್ಷನ ಕಾಲಾವಧಿಯಲ್ಲಿ ಮಹಮ್ಮದ್ ಗವಾನನು ದಾಳಿಮಾಡಿ ಪಶ್ಚಿಮ ಪ್ರಾಂತ್ಯ, ಉತ್ತರ ಕೊಂಕಣ ಮತ್ತು ಪ್ರಮುಖ ಬಂದರು ಪಟ್ಟಣವಾಗಿದ್ದ ಗೋವಾವನ್ನು ವಶಪಡಿಸಿಕೊಂಡನು.[೧೩] ಇದರಿಂದ ವಿಜಯನಗರ ಸಾಮ್ರಾಜ್ಯದ ಮೇಲೆ ಪರಿಣಾಮಗಳಾಗಿದ್ದವು. ಕೃಷ್ಣದೇವರಾಯನ ಆಳ್ವಿಕೆಯಲ್ಲಿ ಈ ನಗರವು ಇನ್ನಷ್ಟು ಅಭಿವೃದ್ಧಿಯಾಯಿತು. ವಿದೇಶಿ ವರ್ತಕರಿಗೆ ಮತ್ತು ಸ್ಥಳೀಯ ವರ್ತಕರಿಗೆ ರಾಜನು ಅನೇಕ ರೀತಿಯ ಸೌಲಭ್ಯಗಳನ್ನು ನೀಡಿದನು. ಈ ವರ್ತಕರು ನಗರದ ಬೆಳವಣಿಗೆಯಲ್ಲಿ ಪ್ರಮುಖವಾದ ಪಾತ್ರವನ್ನು ವಹಿಸಿದರು.[೧೪] ಅಳಿಯ ರಾಮರಾಯನ ಕಾಲಾವಧಿಯಲ್ಲಿ ಕ್ರಿ.ಶ.೧೫೬೫ರ ಯುದ್ಧ ನಂತರ ವ್ಯಾಪಾರ-ವಾಣಿಜ್ಯದ ಕೇಂದ್ರವಾಗಿದ್ದು, ಉತ್ತಮ ರೀತಿಯ ವ್ಯಾಪಾರವನ್ನು ನಡೆಸುತ್ತಿದ್ದ ಈ ಉಪನಗರವು ಸಂಪೂರ್ಣ ಹಂಪೆ ಸೇರಿದಂತೆ ನಾಶವಾಯಿತು. ಇದರಿಂದ ಜನರು ವಲಸೆ ಹೋಗುವಂತೆಯೂ ಆಯಿತು.

ಆಡಳಿತ: ತಿರುಮಲಾದೇವಿ ಪಟ್ಟಣವು (ಹೊಸಪೇಟೆ) ವ್ಯಾಪಾರ ಕೇಂದ್ರವಾಗಿತ್ತು. ಈ ಉಪನಗರಗಳನ್ನು ನೋಡಿಕೊಳ್ಳಲು ಪಟ್ಟಣ ಸ್ವಾಮಿಯನ್ನು ನೇಮಿಸಲಾಗಿತ್ತು. ಈತನು ಮುಖ್ಯವಾಗಿ ವ್ಯಾಪಾರದ ತೆರಿಗೆಯನ್ನು ವಸೂಲಿ ಮಾಡುತ್ತಿದ್ದನು.[೧೫] ವಿಜಯನಗರ ಕಾಲದಲ್ಲಿ ಚರ್ತುವರ್ಣ ಪದ್ಧತಿಯು ರೂಢಿಯಲ್ಲಿತ್ತು. ವೈಶ್ಯರು ವ್ಯಾಪಾರಿಗಳಾಗಿದ್ದರು. ಇವರು ರತ್ನ ರಾಶಿಗಳ ಅಂಗಡಿಗಳನ್ನು ಊರುಗಳಲ್ಲಿ ಹಾಕುತ್ತಿದ್ದರು.[೧೬] ಉಪನಗರಗಳ ಆಡಳಿತವು ಶೆಟ್ಟಿ, ಪಟ್ಟಣಸ್ವಾಮಿಗಳ ಕೈಯಲ್ಲಿತ್ತೆಂದು ಹೇಳಬಹುದು.

ಹೊಸಪೇಟೆಯ ವರ್ತಕರು ದೇಶ ವಿದೇಶಗಳೊಂದಿಗೆ ವ್ಯಾಪಾರ-ವಾಣಿಜ್ಯವನ್ನು ನಡೆಸುತ್ತಿದ್ದರು. ಈ ನಗರದಲ್ಲಿ ವರ್ತಕರು ಶ್ರೀಮಂತರಾಗಿದ್ದರು. ಹೆಚ್ಚಿನ ಹಣವನ್ನು ಸಾಲ ಕೊಡುತ್ತಿದ್ದರು. ಇಂತಹ ವರ್ತಕರು

ಅಂಗಡಿ ಬೀದಿಗಳಲ್ಲಿ ಕನಕ ರಾಶಿಯ ಮಧ್ಯೆಯೇ ವ್ಯಾಪಾರ ಮಾಡುತ್ತಿದ್ದರು. ಈ ಎಲ್ಲ ಮಾಹಿತಿಗಳು ವಿದೇಶಿ ಪ್ರವಾಸಿಗರ ವರದಿಗಳಿಂದ ತಿಳಿಯಬಹುದಾಗಿದೆ. ವಿದೇಶಿ ವರ್ತಕರು ಮತ್ತು ಪ್ರವಾಸಿಗರು ವಿಜಯನಗರದಲ್ಲಿ ಸುರಕ್ಷಿತವಾಗಿದ್ದರು. ಯಾವುದೇ ಅಡೆತಡೆಗಳು ಇರಲಿಲ್ಲ. ಯಾರಿಂದಲೂ ತೊಂದರೆಯಾಗದಂತೆ ಅರಸರು ನೋಡಿಕೊಂಡಿದ್ದರು. ನಗರಗಳಲ್ಲಿ ಎಲ್ಲ ಸೌಕರ್ಯಗಳಿರುವ ನಗರವೆಂದರೆ ಇದಾಗಿತ್ತು. ಈ ನಗರಗಳಲ್ಲಿ ಧಾನ್ಯಗಳು ಹೇರಳವಾಗಿದ್ದು ಹಗ್ಗದ ರೀತಿಯಲ್ಲಿ ಜನರಿಗೆ ಸಿಗುತ್ತಿದ್ದವು. ದವಸಧಾನ್ಯಗಳನ್ನು ತರುವ ಎತ್ತಿನ ಗಾಡಿಗಳು ಬೀದಿಗಳಲ್ಲಿ ಅಧಿಕ ಸಂಖ್ಯೆಯಲ್ಲಿರುತ್ತಿದ್ದವು. ಮಾಂಸದಂಗಡಿಗಳು ಮತ್ತು ತರಕಾರಿ ಮಾರಾಟದ ಮಳಿಗೆಗಳಿದ್ದವು. ತರಕಾರಿಗಳನ್ನು ಹಳ್ಳಿಯ ಜನರಿಂದ ಖರೀದಿಸಿ ವರ್ತಕರು ಮಾರಾಟ ಮಾಡುತ್ತಿದ್ದರು.

ವಿದೇಶಿ ಪ್ರವಾಸಿಗನಾದ ನ್ಯೂನಿಜ್ ಹೇಳುವಂತೆ ಅಕ್ಕಿ ಮತ್ತು ಇತರ ದವಸಧಾನ್ಯಗಳು ವಿಪುಲವಾಗಿ ಸಿಗುತ್ತಿದ್ದವು. ಚಿನ್ನದ ಒಡವೆಗಳು, ವಜ್ರವೈಡೂರ್ಯ ಮತ್ತು ಮಾಣಿಕ್ಯಗಳನ್ನು ಮಾರುವ ಅಂಗಡಿಗಳ ಪ್ರತ್ಯೇಕ ಬೀದಿಗಳಿದ್ದವು. ಹತ್ತಿಯ ಬಟ್ಟೆಗಳನ್ನು ಮಾರುವ ವರ್ತಕರು ಅಧಿಕ ಸಂಖ್ಯೆಯಲ್ಲಿದ್ದರು. ಕುದುರೆ, ಕತ್ತೆ ಮತ್ತು ಎತ್ತುಗಳಿಂದ ಸರಕುಗಳನ್ನು ಮಾರಾಟ ಮಾಡುವುದಕ್ಕೆ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಕೊಂಡೊಯ್ಯುತ್ತಿದ್ದರು. ವೈಶ್ಯರು ಕೂಡ ವ್ಯಾಪಾರದಲ್ಲಿ ತೊಡಗಿದ ವರ್ತಕ ಸಮುದಾಯದವರಾಗಿದ್ದರು. ಸ್ಥಳೀಯ ಮತ್ತು ವಿದೇಶಿ ವರ್ತಕರಿಗೆ ಹಾಗೂ ಬೇರೆ ರಾಜ್ಯಗಳಿಂದ ಬರುವ ವರ್ತಕರಿಗೂ ದಾರಿಯಲ್ಲಿ ಕುಡಿಯುವ ನೀರಿನ ವ್ಯವಸ್ಥೆಯನ್ನು ಕಲ್ಪಿಸಲಾಗಿತ್ತು. ವರ್ತಕರ ಬಗ್ಗೆ ತಿಳಿದುಕೊಳ್ಳಲು ನಮಗೆ ಶಾಸನಗಳು, ಸಾಹಿತ್ಯ ಕೃತಿಗಳು ಮತ್ತು ಜಾನಪದ ಕಾವ್ಯಗಳು ಮುಖ್ಯ ಆಧಾರಗಳು. ವಿದೇಶಿಯರ ದಾಖಲೆಗಳು ಸಮರ್ಥನೀಯ ಆಕರಗಳಾಗಿವೆ.[೧೭]

ಹೊಸಪೇಟೆಯೂ ತಿರುಮಲಾದೇವಿ ಪಟ್ಟಣ ಎಂಬುವುದಕ್ಕೆ ವ್ಯಾಪಾರದ ಮಾರ್ಗವೇ ಸಾಕ್ಷಿಯಾಗಿತ್ತು. ವರ್ತಕರು ಬರುವ ಹಾದಿಯನ್ನು ದಾಖಲೆ ಮಾಡಿರುವುದು ಕಂಡುಬಂದಿದೆ ಎಂದು ಪಾಯೇಸನು ಕೃಷ್ಣದೇವರಾಯನಿಗೆ ಈ ಪಟ್ಟಣವು ತುಂಬ ಇಷ್ಟವಾಗಿತ್ತೆಂದು ತಿಳಿಸುತ್ತಾನೆ. ತನ್ನ ವರ್ತಕ ಸರದಾರ ಮನೆಗಳನ್ನು ನಿರ್ಮಿಸಿಕೊಡಬೇಕೆಂದು ವಿನಂತಿಸಿದನು.[೧೮] ಮಧ್ಯಕಾಲೀನ ವರ್ತಕರ ಸಾಮಾಜಿಕ, ಧಾರ್ಮಿಕ ಜನಜೀವನ ಮತ್ತು ಬೇರೆ ದೇಶ, ರಾಜ್ಯ ಪ್ರದೇಶಗಳೊಂದಿಗೆ ಇರುವ ಸಂಬಂಧವನ್ನು ಈ ದಾಖಲೆಗಳಿಂದ ತಿಳಿಯಬಹುದಾಗಿದೆ. ಹೆಚ್ಚಾಗಿ ಶೆಟ್ಟಿ, ಬಣಜಿಗ, ಲಿಂಗಾಯತರು ಅಲ್ಲದೆ ವಿದೇಶಿ ಪ್ರವಾಸಿಗರು ವಿಜಯನಗರ ಕಾಲದಲ್ಲಿ ಈ ಪ್ರದೇಶಕ್ಕೆ ಬಂದವರಾಗಿ ಕಂಡುಬಂದಿದೆ. ಅಂದಿನ ಆರ್ಥಿಕ ವ್ಯವಸ್ಥೆಯಲ್ಲಿ ಸಂತೆ, ಅಂಗಡಿ, ಪೇಟೆ-ಪಟ್ಟಣಗಳಿಗೆ ಹೆಚ್ಚಿನ ಪ್ರಾಮುಖ್ಯತೆಯಿತ್ತು. ವ್ಯಾಪಾರಿ ಮಾರ್ಗಗಳು ಸಂತೆ, ಸುಂಕ, ಮಾರಾಟ ತೆರಿಗೆ, ಸರಕು ವ್ಯಾಪಾರ ವಿಧಾನ, ವ್ಯಾಪಾರದ ಕೇಂದ್ರ, ಒಳನಾಡು ಹಾಗೂ ಹೊರನಾಡಿನ ವ್ಯಾಪಾರದ ಕುರಿತು ಸ್ಪಷ್ಟವಾದ ನಿಯಮಗಳಿದ್ದವು.[೧೯]

ಕೃಷ್ಣದೇವರಾಯ ತಿರುಮಲದೇವಿ ಪಟ್ಟಣದಲ್ಲಿ ತಿರುವೆಂಗಳನಾಥ ಮತ್ತು ಗೌರೀಶ್ವರ ದೇವಾಲಯಗಳನ್ನು ಕಟ್ಟಿಸಿ ದತ್ತಿ ಬಿಟ್ಟಿದ್ದನು. ಈ ಪಟ್ಟಣದಲ್ಲಿ ಶೆಟ್ಟಿ, ಪಟ್ಟಣ ಸ್ವಾಮಿಗಳು ಗಣ್ಯ ವರ್ತಕರಾಗಿದ್ದರು. ಈ ಹೇಳಿಕೆಯನ್ನು ಪಾಯಸನ ವರದಿಯಲ್ಲಿ ಕಾಣಬಹುದು. ಕಣಿವೆ ಹಾದಿ ಮೇಲಿನ ದಾರಿಯನ್ನು ಮಹಾಪಥವೆಂದು ಕರೆಯಲಾಗಿದೆ. ಈ ದಾರಿಯ ಮೂಲಕವೇ ತಿರುಮಲಾದೇವಿ ಪಟ್ಟಣದ ಪಶ್ಚಿಮ ಕರಾವಳಿಯ ವ್ಯಾಪಾರ ವ್ಯವಹಾರಗಳು ಮೂಲಕವೇ ನಡೆಯುತ್ತಿತ್ತು.[೨೦] ವಿಜಯನಗರ ಕಾಲದಲ್ಲಿ ಸಣ್ಣಕ್ಕಿ ವೀರಭದ್ರದೇಶ್ವರ ಗುಡಿಯ ಪರಿಸರಕ್ಕೆ ಸಣ್ಣಕ್ಕಿ ಪೇಟೆ ಎಂಬ ಹೆಸರಿತ್ತೆಂದು ಇದು. ತಿರುಮಲಾದೇವಿ ಪಟ್ಟಣವಾಗಿದ್ದು ವ್ಯಾಪಾರಿ ಪ್ರದೇಶವಾಗಿತ್ತೆಂದು ತಿಳಿದುಬರುತ್ತದೆ. ವ್ಯಾಪಾರಿ ಬಳಗಕ್ಕೆ ಸೇರಿದ್ದ ಶೆಟ್ಟಿ, ಪಟ್ಟಣಸ್ವಾಮಿಗಳು, ಬಣಜಿಗರು ದಾನಗಳನ್ನು ನೀಡುತ್ತಿದ್ದರು. ಅದನ್ನು ಶಾಸನಗಳಲ್ಲಿ ಬರೆಸುತ್ತಿದ್ದರು. ಗೌರೀಶ್ವರ ಎಂಬ ಹೆಸರಿನ ಈಶ್ವರ ದೇವರು ಶೆಟ್ಟಿ, ಬಣಜಿಗರ ಕುಲದೇವತೆಯಾಗಿತ್ತು. ಇವರು ಶೈವ ಪಂಥಕ್ಕೆ ಸೇರಿದವರು. ಕೃಷ್ಣದೇವರಾಯನು ವಿಜಯನಗರದಿಂದ (ಹಂಪಿ) ಬಂದ ವರ್ತಕರಿಗೆ ತಿರುಮಲಾದೇವಿ ಪಟ್ಟಣದಲ್ಲಿ ವಾಸ ಮಾಡುವುದಕ್ಕೆ ಅವಕಾಶಮಾಡಿಕೊಟ್ಟಿದ್ದನು.[೨೧]

ಚಿತ್ತವಾಡ್ಗಿಯ ಶನಿವಾರ ಸಂತೆಯನ್ನು ತಿರುಮಲದೇವಿ ಪಟ್ಟಣಕ್ಕೆ ವರ್ಗಾಯಿಸಲಾಯಿತು. ಸಂತೆ ಮಾಡಿಸುವುದರಿಂದ ಮಾತ್ರ ಗ್ರಾಮವು ಪಟ್ಟಣವೆನಿಸಿಕೊಳ್ಳುತ್ತಿತ್ತು. ಆದ್ದರಿಂದ ಮಧ್ಯಕಾಲೀನ ವಿಜಯನಗರದ ಪ್ರತಿಯೊಂದು ಪಟ್ಟಣದಲ್ಲಿಯೂ ಸಂತೆ ನಡೆಯುತ್ತಿದ್ದವು. ಕೆಲವು ಸಲ ಸಂತೆ ಕಟ್ಟಿಸಿ ಗ್ರಾಮವನ್ನು ಪಟ್ಟಣವನ್ನಾಗಿ ಪರಿವರ್ತಿಸುತ್ತಿದ್ದರು. ಹೊಸದಾಗಿ ನಿರ್ಮಾಣವಾದ ಪಟ್ಟಣ ಮೂಲ ಗ್ರಾಮದಿಂದ ಪ್ರತ್ಯೇಕವಾದುದ್ದನ್ನು 'ಬೇವೂರು' ಶಾಸನ ಹೇಳುತ್ತದೆ. ಪಟ್ಟಣಗಳ ನಿರ್ಮಾಣದ ಉದ್ದೇಶ ವರ್ತಕರು ನೆಲೆಗೊಂಡು ವಾಣಿಜ್ಯೋದ್ಯಮ ಬೆಳೆಸುವುದು. ಇದರಿಂದ ನಾನಾ ಭಾಗದ ವರ್ತಕ ಕುಟುಂಬಗಳು ಹೊಸಪಟ್ಟಣದಲ್ಲಿ ಬಂದು ನೆಲೆಸಿದವು. ಹೊಸದಾಗಿ ಕಟ್ಟಿಸಿದ ಪಟ್ಟಣದಲ್ಲಿ ಬಂದು ನೆಲೆಸಿದ ವರ್ತಕರಿಗೆ ವಿಶೇಷ ಸೌಲಭ್ಯ, ತೆರಿಗೆಯಲ್ಲಿ ವಿನಾಯಿತಿಯನ್ನು ನೀಡಲಾಯಿತು. ಗೌಡ ಪ್ರಭುಗಳು ಗ್ರಾಮಗಳ ವ್ಯಾಪಾರ ಚಟುವಟಿಕೆಯ ಪ್ರಧಾನ ಸ್ಥಳಗಳಾಗಿ ರೂಪಗೊಳಿಸಲು ಪಟ್ಟಣಗಳಾಗಿ ಮಾರ್ಪಡಿಸುತ್ತಿದ್ದರು. ಪಟ್ಟಣ ಕಟ್ಟಿಸಿ ಶೆಟ್ಟಿಗಳು ಶಿಲಾ ಶಾಸನ ಹಾಕಿಸುತ್ತಿದ್ದರು. 'ಬೇವೂರು' ಶಾಸನದಲ್ಲಿ ಪಟ್ಟಣದ ವಿಸ್ತಾರವಾದ ಬಗ್ಗೆ ಹೆಚ್ಚಿನ ಮಾಹಿತಿ ಇದೆ.[೨೨]

ಕೃಷ್ಣದೇವರಾಯನು ವರ್ತಕರ ಸುರಕ್ಷತೆಯ ದೃಷ್ಟಿಯಿಂದ ಇವರು ವಾಸಿಸುವ ಸ್ಥಳ ನಿರ್ಮಾಣ ಮಾಡುವುದಕ್ಕೆ ಈ ಪಟ್ಟಣವನ್ನು ಆಯ್ಕೆ ಮಾಡಿಕೊಂಡಿದ್ದನು. ಕೃಷ್ಣದೇವರಾಯನು ಪೇಟೆ ಪಟ್ಟಣಗಳನ್ನು ನಿರ್ಮಿಸಿ ರಾಜ್ಯದ ಆದಾಯ, ಉದ್ಯೋಗ, ಸಾರಿಗೆ ಸಂಪರ್ಕವನ್ನು ಅಭಿವೃದ್ಧಿ ಪಡಿಸುವುದರ ಮುಖಾಂತರ ಜನರ ಜೀವನ ಮಟ್ಟವನ್ನು ಉನ್ನತ ಸ್ಥಾನಕ್ಕೇರಿಸಿದನು.

ವಿಜಯನಗರ ಅರಸರು ವ್ಯಾಪಾರಕ್ಕೆ ಒದಗಿಸಿದ ಪ್ರೋತ್ಸಾಹದ ಬಗ್ಗೆ ವಿದೇಶಿ ಪ್ರವಾಸಿಗರ ಕಥನಗಳು ವಿವರಣೆಯನ್ನು ನೀಡುತ್ತವೆ. ಇವರು ವ್ಯಾಪಾರಕ್ಕೆ ಉತ್ತೇಜನವಿತ್ತಿದ್ದರು. ವ್ಯಾಪಾರಿ ವರ್ಗಗಳಿಗೆ ಭದ್ರತೆಯನ್ನು ಒದಗಿಸಿದರು. ವಿಜಯನಗರ ಸಾಮ್ರಾಜ್ಯ ಮತ್ತು ಹೊರಗಿನ ಪ್ರಪಂಚಗಳ ನಡುವೆ ವರ್ತಕ ವರ್ಗಗಳು ಒಂದು ಕೊಂಡಿಯನ್ನು ರೂಪಿಸಿದವು. ಈ ವರ್ತಕರು ಇತರ ದೇಶಗಳೊಂದಿಗೆ ವ್ಯಾಪಾರ ವ್ಯವಹಾರದ ಸಂಪರ್ಕಗಳನ್ನು ಹೊಂದಿ, ಭಾರತೀಯ ಕಲೆ ಮತ್ತು ಸಂಸ್ಕೃತಿಗಳ ಹರಿಕಾರರಾಗಿದ್ದರು. ವಿಜಯನಗರದ ಸಾಗರೋತ್ತರ ವ್ಯಾಪಾರವು ಹದಗೆಟ್ಟಿದ್ದು ೧೬ನೆಯ ಶತಮಾನದ ಆರಂಭ ಕಾಲದಲ್ಲಿ. ಇದರ ನೇತೃತ್ವವನ್ನು ವಹಿಸಿದವರು ಪೋರ್ಚ್‌ಗೀಸರು. ಇವರು ಸ್ಥಳೀಯ ವರ್ತಕರ ವ್ಯಾಪಾರವನ್ನು ಛಿದ್ರಗೊಳಿಸಿದರು. ಇವರು ವಿಜಯನಗರದ ಎಲ್ಲ ಬಂದರುಗಳ ಮೇಲೆ ದಾಳಿಮಾಡಿ ಕೊಳ್ಳೆಹೊಡೆದರು. ಇದನ್ನು ಎದುರಿಸಲು ವಿಜಯನಗರ ಅರಸರ ಸಾಗರೋತ್ತರ ಧೋರಣೆಯು ಸಮರ್ಪಕವಾಗಿರಲಿಲ್ಲ. ಆದ್ದರಿಂದ ಕರಾವಳಿ ಕರ್ನಾಟಕ ಮತ್ತು ಮಲಬಾರಿನ ಸಾಗರೋತ್ತರ ವ್ಯಾಪರವು ಪ್ರಾಮುಖ್ಯತೆಗೆ ಬಂದವು. ಇದರ ಲಾಭವನ್ನು ಮಲಬಾರಿ ಮತ್ತು ಕೊಂಕಣಿ ಪ್ರದೇಶದ ವರ್ತಕರು ಪಡೆದರು. ಇವರು ದಕ್ಷಿಣಕ್ಕಿರುವ ರೇವುಗಳಲ್ಲಿ ಮತ್ತು ಮಂಗಳೂರಿನಲ್ಲಿ ವ್ಯಾಪಾರದಲ್ಲಿ ಏಕಸಾಮ್ಯವನ್ನು ಪಡೆದರು.[೨೨]

ಈ ರೀತಿಯಾಗಿ ವಿಜಯನಗರದ ಅರಸರು ಆರಂಭ ಕಾಲದಿಂದ ವ್ಯಾಪಾರ ಮತ್ತು ವರ್ತಕರಿಗೆ ಹೆಚ್ಚಿನ ಪ್ರೋತ್ಸಾಹಗಳನ್ನು ನೀಡಿ ಆರ್ಥಿಕಾಭಿವೃದ್ಧಿಯನ್ನು ಸಾಧಿಸಿದರು. ಇವರ ಕಾಲದಲ್ಲಿ ಮುಖ್ಯವಾಗಿ ವಿದೇಶ ವ್ಯಾಪಾರವು ಬಹಳ ಪ್ರಾಮುಖ್ಯತೆಯನ್ನು ಪಡೆದಿತ್ತು. ಆದರೆ ವಿಜಯನಗರದ ಅವಧಿಯ ಕಾಲಾವಧಿಯಲ್ಲಿ ಅರಸರು ಅನುಸರಿಸಿದ ಸಾಗರೋತ್ತರ ಧೋರಣೆಗಳು ಸಮರ್ಪಕವಾಗಿರಲಿಲ್ಲ ಆದ್ದರಿಂದ ಇವರ ವ್ಯಾಪರವು ಕುಸಿಯಿತು. ಕೊನೆಗೆ ವಿಜಯನಗರ ಸಾಮ್ರಾಜ್ಯವೇ ಲೂಟಿಯಾಗಿ ಸಾಮ್ರಾಜ್ಯವು ನಾಶಹೊಂದಿತು. ಮುಂದೆ ಈ ಪ್ರದೇಶವನ್ನು ಹಲವಾರು ರಾಜವಂಶಗಳು ಆಳ್ವಿಕೆ ಮಾಡಿದ ನಂತರ ಬ್ರಿಟಿಷರ ಅಧಿಪತ್ಯಕ್ಕೆ ಕರ್ನಾಟಕದ ಹಲವು ಪ್ರದೇಶಗಳು ಒಳಗಾದವು. ಇಲ್ಲಿಂದ ಬ್ರಿಟಿಷರ ಪ್ರಭುತ್ವವು ಆರಂಭವಾಯಿತು. ಬ್ರಿಟಿಷರು ವ್ಯಾಪಾರ ವಾಣಿಜ್ಯದಲ್ಲಿ ತಮ್ಮದೇ ಆದ ನೀತಿ ನಿಯಮಗಳನ್ನು ರೂಪಿಸಿಕೊಂಡು ಕರ್ನಾಟಕದ ಹಲವು ಪ್ರದೇಶಗಳಲ್ಲಿ ಆಳ್ವಿಕೆ ಮಾಡಿದರು.

೪.೨. ವಸಾಹತು ಪ್ರಭುತ್ವ

ಈಸ್ಟ್ ಇಂಡಿಯಾ ಕಂಪನಿಗೆ ಬೇಕಾಗಿದ್ದದ್ದು ಭಾರತೀಯ ಮಾರುಕಟ್ಟೆ ಹಾಗೂ ಯುರೋಪಿನ ಕೈಗಾರಿಕೆಗಳಿಗೆ ಅಗತ್ಯವಾಗಿದ್ದಂಥ ಕಚ್ಚಾ ವಸ್ತುಗಳು. ಇದನ್ನು ಅರಿತ ಬ್ರಿಟಿಷ್ ಸರ್ಕಾರ ತನ್ನ ವ್ಯಾಪಾರ ವಾಣಿಜ್ಯ ನೀತಿಯನ್ನು ರೂಪಿಸಿತು. ಕೃಷಿಯ ವಾಣಿಜ್ಯೀಕರಣ, ಮಾರುಕಟ್ಟೆ ಕೇಂದ್ರಿತ ಅರ್ಥವ್ಯವಸ್ಥೆಯ ಹುಟ್ಟು ಹಾಗೂ ಆಡಳಿತವನ್ನು ವ್ಯವಸ್ಥಿತಗೊಳಿಸುವ ಬ್ರಿಟಿಷರ ಹೊಸ ಯೋಜನೆಗಳು ವ್ಯಾಪಾರದಲ್ಲಿ

ಹೆಚ್ಚಿನ ಲಾಭವನ್ನು ಗಳಿಸುವ ಉದ್ದೇಶವನ್ನು ಇಟ್ಟುಕೊಂಡಿದ್ದವು. ಪರ್ಷಿಯನ್ನರು, ಅರೇಬಿಯನ್ನರು ಮತ್ತು ಯುರೋಪಿಯನ್ನರು ಭಾರತಕ್ಕೆ ಬಂದದ್ದು ವ್ಯಾಪಾರಕ್ಕಾಗಿ. ಇವರಲ್ಲಿ ಬ್ರಿಟಿಷರನ್ನು ಬಿಟ್ಟು ಮಿಕ್ಕಿದವರ್ಯಾರಿಗೂ ವ್ಯಾಪಾರದ ಮೂಲಕ ಸಾಮ್ರಾಜ್ಯವನ್ನು ಕಟ್ಟಲು ಸಾಧ್ಯವಾಗಲಿಲ್ಲ. ಬ್ರಿಟಿಷರು ಎಲ್ಲ ಕ್ಷೇತ್ರಗಳಲ್ಲೂ ತಮ್ಮ ಏಕಸ್ವಾಮ್ಯವನ್ನು ಹಾಗೂ ಯಾಜಮಾನಿಕೆಯನ್ನು ಸ್ಥಾಪಿಸಿದರು. ವ್ಯಾಪಾರ ಇವರ ಅಡಿಪಾಯವಾಗಿತ್ತು. ಇದಕ್ಕೆ ಪೂರಕವಾಗಿ ಭಾರತವನ್ನು ಸಜ್ಜುಗೊಳಿಸಿದರು.

ಕೃಷಿಯ ವಾಣಿಜ್ಯೀಕರಣದಿಂದಾಗಿ ವಾಣಿಜ್ಯ ಬೆಳೆಗಳು ನೇರವಾಗಿ ಮಾರುಕಟ್ಟೆಗಳಿಗೆ ಪ್ರವೇಶಿಸುವಂತಾಯಿತು. ಅನೇಕ ಪೇಟೆ-ಪಟ್ಟಣಗಳು ಬಿರುಸಿನ ವ್ಯಾಪಾರ ಚಟುವಟಿಕೆಗಳ ಕೇಂದ್ರಗಳಾಗಿ ಮಾರ್ಪಾಡು ಹೊಂದಿದವು. ವ್ಯಾಪಾರ ಸಾಮಾನುಗಳ ಸಾಗಾಣಿಕೆಗೆ ಸಾರಿಗೆ ಸಂಪರ್ಕ ಕ್ಷೇತ್ರದಲ್ಲಿ ಅನೇಕ ಮಹತ್ವದ ಬದಲಾವಣೆಗಳುಂಟಾದವು. ಅನೇಕ ಹೊಸ ರಸ್ತೆಗಳ ನಿರ್ಮಾಣ, ರೈಲುಮಾರ್ಗಗಳ ನಿರ್ಮಾಣ, ನದಿ ಮತ್ತು ಸಮುದ್ರದ ಬಳಕೆ ಇವೆಲ್ಲವೂ ವ್ಯಾಪಕವಾಗಿ ನಡೆದವು. ರೈತರ ಮತ್ತು ವರ್ತಕರ ಮಧ್ಯ ಕೊಂಡಿಗಳಾಗಿ ವ್ಯವಹರಿಸುವ ಏಜೆಂಟರುಗಳು ಅಥವಾ ಲೇವಾದೇವಿದಾರರ ವರ್ಗವೊಂದು ಉಗಮವಾಯಿತು. ಇವರು ಮಧ್ಯವರ್ತಿಗಳಾಗಿದ್ದು ಹಣಕಾಸಿನ ನೆರವನ್ನು ಕೃಷಿಕರಿಗೆ ಮತ್ತು ವರ್ತಕರಿಗೆ ಒದಗಿಸುತ್ತಿದ್ದರು. ವ್ಯಾಪಾರಸ್ಥರಿಗೆ ಹಾಗೂ ವಾಣಿಜ್ಯ ಬೆಳೆಗಳನ್ನು ಬೆಳೆಯುವವರಿಗೆ ಹಣಕಾಸಿನ ನೆರವನ್ನು ಹೊಸದಾಗಿ ಅಸ್ತಿತ್ವಕ್ಕೆ ಬಂದ ಬ್ಯಾಂಕುಗಳು ನೀಡಲಾರಂಭಿಸಿದವು. ವ್ಯಾಪಾರಸ್ಥರ ಹಿತ ಚಿಂತನೆಗಾಗಿ ವಣಿಕ ಸಂಘಗಳು ಹುಟ್ಟಿಕೊಂಡವು. ಹೀಗೆ ಇವೆಲ್ಲವೂ ಹಂತ ಹಂತವಾಗಿ ಬೆಳೆದು ಬಂದು ವ್ಯಾಪಾರ ಮತ್ತು ವಾಣಿಜ್ಯ ವ್ಯವಸ್ಥಿತವಾಗಿ ನಡೆಯುವಂತೆ ಹಾಗೂ ಲಾಭದಾಯಕವಾಗುವಂತೆ ಆಯಿತು. ಈ ಎಲ್ಲ ಬದಲಾವಣೆಗಳ ಲಾಭ ಪಡೆದವರು ಶ್ರೀಮಂತ ವರ್ತಕರು, ಪ್ಲಾಂಟರುಗಳು, ಖಾಸಗೀ ಕಂಪನಿಗಳು ಮತ್ತು ಮಧ್ಯವರ್ತಿಗಳು.[೨]

೧. ವ್ಯಾಪಾರ-ವಾಣಿಜ್ಯ

ಬ್ರಿಟಿಷ್ ಕರ್ನಾಟಕದ ಎಲ್ಲ ಪ್ರದೇಶಗಳಲ್ಲಿಯೂ ಏಕರೂಪದ ಬೆಳವಣಿಗೆಗಳೇನೂ ಕಂಡುಬರಲಿಲ್ಲ. ಪ್ರಾಚೀನ ಕರ್ನಾಟಕದಲ್ಲಿದ ವ್ಯಾಪಾರ ಕೇಂದ್ರಗಳೇ ಇನ್ನಷ್ಟು ಅಭಿವೃದ್ಧಿ ಹೊಂದಿದವು. ಅವುಗಳಲ್ಲಿ ಮದ್ರಾಸು ಪ್ರೆಸಿಡೆನ್ಸಿಯ ಭಾಗವಾಗಿದ್ದ ಬಳ್ಳಾರಿ ಜಿಲ್ಲೆಯು ಪ್ರಮುಖ ವ್ಯಾಪಾರ ಕೇಂದ್ರವಾಗಿತ್ತು. ಈ ಜಿಲ್ಲೆಯ ಪ್ರದೇಶವಾದ ಹೊಸಪೇಟೆಯು ಬ್ರಿಟಿಷರ ಅವಧಿಯಲ್ಲಿ ಅಭಿವೃದ್ಧಿಗೊಂಡಿತು. ಆಂಗ್ಲರ ಆಳ್ವಿಕೆ ಆರಂಭಗೊಳ್ಳುವ ಮುನ್ನ ಈ ಭಾಗದಲ್ಲಿ ವ್ಯಾಪಾರ ವಾಣಿಜ್ಯಕ್ಕೆ ಕೆಲವು ಸ್ಥಳಗಳು ಪ್ರಸಿದ್ಧಗೊಂಡಿದ್ದವು. ಸ್ಥಳೀಯ ಅರಸರ ವ್ಯಾಪಾರಕ್ಕೂ ಮತ್ತು ಆಂಗ್ಲ ಪದ್ಧತಿಯ ವ್ಯಾಪಾರಕ್ಕೂ ವ್ಯತ್ಯಾಸವಿತ್ತು. ಹೊಸಪೇಟೆಯಲ್ಲಿ ಗಣಿಗಾರಿಕೆ, ಕೈಗಾರಿಕೆಗಳ ಬೆಳವಣಿಗೆಯಿಂದ ವ್ಯಾಪಾರ ಅಭಿವೃದ್ಧಿಗೊಂಡಿತು. ದೇಶೀಯ ಮತ್ತು ವಿದೇಶೀಯ ವ್ಯಾಪಾರವು ಪ್ರಚಲಿತಕ್ಕೆ ಬಂದಿದ್ದು ಇವರ ಕಾಲಕ್ಕೆ ಅಭಿವೃದ್ಧಿ ಹೊಂದಿತ್ತು. ವ್ಯಾಪಾರವನ್ನು ಆಂಗ್ಲರು

ಎರಡು ರೀತಿಗಳಲ್ಲಿ ಮಾಡುತ್ತಿದ್ದರು ಸಮುದ್ರದ ಮೂಲಕ ವ್ಯಾಪಾರ ಮತ್ತು ಭೂಮಾರ್ಗಗಳ ಮೂಲಕ ವ್ಯಾಪಾರ ಮಾಡುತ್ತಿದ್ದರು. ಹೊಸಪೇಟೆಯಲ್ಲಿ ಕ್ಷಾಮ, ಬರಗಾಲ ಬಂದಾಗ ವ್ಯಾಪಾರದ ಪ್ರಗತಿ ನಿಲ್ಲುತ್ತಿತ್ತು.[೫೫]

ವಸಾಹತು ಪ್ರಭುತ್ವದ ಆಳ್ವಿಕೆಯ ಸಂದರ್ಭದಲ್ಲಿ ಅಂತರದೇಶಿಯ ವ್ಯಾಪಾರದಲ್ಲಿ ಬ್ರಿಟಿಷ್ ಅಧಿಪತ್ಯಗಳು ರಫ್ತು ಮತ್ತು ಆಮದು ಮಾಡಿಕೊಳ್ಳುತ್ತಿದ್ದರು. ಅದನ್ನು ಈ ಪ್ರದೇಶದ ವ್ಯಾಪಾರಕ್ಕೆ ಬಳಸುತ್ತಿದ್ದರು.[೫೬] ಹೊಸಪೇಟೆಯಲ್ಲಿ ಬೆಳದಂತಹ ಭತ್ತ, ರಾಗಿ, ಜೋಳ, ಎಣ್ಣೆ ಬೀಜಗಳು, ಹತ್ತಿ, ತುಪ್ಪ, ತೆಂಗಿನಕಾಯಿ, ಸಕ್ಕರೆ, ಬೆಲ್ಲ, ಬಟ್ಟೆ ಮುಂತಾದವುಗಳನ್ನು ಬ್ರಿಟಿಷರು ಕೊಂಡೊಯ್ದು ಮಾರಾಟ ಮಾಡುತ್ತಿದ್ದರು.[೫೭] ಇದು ರೈಲ್ವೆ ಪದ್ಧತಿ ಬರುವವರೆಗೆ ಇತ್ತು. ಗೋದಾವರಿ, ಮಲಬಾರು, ಕಲ್ಲಿಕೋಟೆ, ತಿಣ್ಣೆ, ವೆಲ್ಸ್ಯ, ಟುಟಿಕೊರನ್ ಬಂದರುಗಳ ಮೂಲಕ ಸಗಟು ಸಾಮಾಗ್ರಿಗಳನ್ನು ವಿದೇಶಕ್ಕೆ ಕಳುಹಿಸುತ್ತಿದ್ದರು. ಕಲೆಕ್ಟರನೇ ವ್ಯಾಪಾರದ ವ್ಯವಸ್ಥೆಯನ್ನು ನೋಡಿಕೊಳ್ಳುತ್ತಿದ್ದನು.[೫೮] ಹೊಸಪೇಟೆಯು ಕೃಷಿ, ಕೈಗಾರಿಕೆ, ವಾಣಿಜ್ಯ-ವ್ಯಾಪಾರ ಕೇಂದ್ರವಾಗಿ ಬೆಳೆದಿತ್ತು.[೫೯]

ಬಳ್ಳಾರಿ ಭಾಗದಲ್ಲಿ ವ್ಯಾಪಾರ ಕೊಳ್ಳುವವರ ಮತ್ತು ಮಾಲಿಕರ ನಡುವೆ ಸಂಪರ್ಕ ಕಲ್ಪಿಸಲು ಹಾಗೂ ಪ್ರಗತಿಗೆ ಕಾರಣವಾಗಿತ್ತು. ಪ್ರೆಸಿಡೆನ್ಸಿಯ ಅಧೀನದಲ್ಲಿ ಎಲ್ಲಾ ವಸ್ತುಗಳ ವ್ಯಾಪಾರ ನಡೆಯುತ್ತಿತ್ತು ೧೮೮೨-೮೩ ರಲ್ಲಿ ವ್ಯಾಪಾರದ ಪ್ರಗತಿ ಹೀಗಿದೆ. ೨೧,೨೨,೭೭,೪೩೬ ರೂಪಾಯಿಗಳ ರಫ್ತು ಮತ್ತು ಆಮದಿನಿಂದ ೧,೨೨,೭೫,೪೯೧ ಮತ್ತು ೩೩,೧೬,೫೩೮ ಇದ್ದರೆ, ರಫ್ತು ೧,೨೦,೧೮೩ ಮತ್ತು ೨೭,೮೨,೮೩೨ ರಷ್ಟು ಇತ್ತು. ವಿದೇಶಗಳೊಡನೆ ಸಂಬಂಧವಿತ್ತು, ಬ್ರಿಟಿಷ್ ಪದ್ಧತಿಗಳಿಗೆ ಅನುಗುಣವಾಗಿರಬೇಕಾಗಿತ್ತು. ಬ್ರಿಟಿಷರು ಬೇರೆ ಬೇರೆ ದೇಶಗಳೊಡನೆ ರಫ್ತು ಮತ್ತು ಆಮದನ್ನು ಮಾಡಿಕೊಳ್ಳುತ್ತಿದ್ದರು. ಇವರು ಇಂಗ್ಲೆಂಡ್, ಆಸ್ಟ್ರೇಲಿಯಾ, ಫ್ರಾನ್ಸ್, ಜರ್ಮನಿ, ಇಟಲಿ, ಸ್ಪೈನ್ ಇನ್ನಿತರ ಯುರೋಪಿನ ದೇಶಗಳು ಮತ್ತು ಈಜಿಪ್ಟ್ ಮಾರಿಷಿಸ್‌ಗಳೊಂದಿಗೆ ಸಂಬಂಧವನ್ನು ಹೊಂದಿದ್ದರು.[೬೦]

ಬ್ರಿಟಿಷರು ಈ ಭಾಗಕ್ಕೆ ಬೇಕಾದ ಅಫೀಮು, ಯಂತ್ರೋಪಕರಣ, ಕಬ್ಬಿಣ, ಚಿನ್ನ, ಸಿಮೆಂಟ್, ಪೇಪರ್, ರೈಲ್ವೆಗೆ ಬೇಕಾದ ಉಪಕರಣಗಳು ಇನ್ನು ಮುಂತಾದವುಗಳನ್ನು ಆಮದು ಮಾಡಿಕೊಳ್ಳುತ್ತಿದ್ದರು.[೬೧] ಬ್ರಿಟಿಷರಿಗೆ ಆಮದಿಗಿಂತ ರಫ್ತುವಿನಲ್ಲಿ ಲಾಭವಿತ್ತು ಕ್ರಿ.ಶ.೧೮೫೫ ರಿಂದ ೧೮೭೦ರ ವರೆಗೆ ಪ್ರಗತಿ ಉತ್ತಮವಾಗಿತ್ತು. ಕ್ರಿ.ಶ.೧೮೮೨-೮೩ನೇ ಸಾಲಿನ ಆಮದಿನಲ್ಲಿ ಗೃಹೋಪಕರಣಗಳು, ಕಬ್ಬಿಣದ ಸಾಮಾನುಗಳು, ಮದ್ಯ, ಯಂತ್ರೋಪಕರಣಗಳು, ಪೇಪರ್, ಟೆಲಿಗ್ರಾಫ್ ವಸ್ತುಗಳು, ವುಲ್ಲನ್, ಸಾಂಬಾರ ಪದಾರ್ಥಗಳು, ಉಪ್ಪು, ಚರ್ಮ, ಕರಕುಶಲ ವಸ್ತುಗಳು, ರೈಲ್ವೆಗೆ ಸಂಬಂಧಿಸಿದ ವಸ್ತುಗಳು, ಬೇಸಾಯಕ್ಕೆ ಉಪಕರಣಗಳು ಮತ್ತು ಟೀಯನ್ನು ತರಿಸಿಕೊಳ್ಳುತ್ತಿದ್ದರು.

ವಿದೇಶಿ ವ್ಯಾಪಾರದಲ್ಲಿ ರಫ್ತಿನ ಬೆಲೆ ಹತ್ತಿಗೆ ೬,೨೦೭,೭೮೯ರ ಗುಣಮಟ್ಟಕ್ಕೆ ಬೆಲೆ ೧೩,೩೫,೫೦೫, ಆಮದಿನಲ್ಲಿ ಗುಣ ೬,೯೬೭,೮೦೯ ಅದರ ಬೆಲೆ ೧೫,೦೮,೩೪೩ ಇತ್ತು. ರಫ್ತು ಆಮದಿನಿಂದ ಸಕಾರಕ್ಕೆ ಅತೀ ಹೆಚ್ಚಿನ ಲಾಭ ಬರುತ್ತಿತ್ತು.

ಈಸ್ಟ್ ಇಂಡಿಯಾ ಕಂಪನಿ ವ್ಯಾಪಾರ ನೀತಿಯಲ್ಲಿ ಬದಲಾವಣೆಗೆ ತಂದಿತು. ೧೮೩೩ರಲ್ಲಿ ಕ್ರೈಸ್ತ ಧರ್ಮಿಯರು ಯಾರೇ ಆಗಲಿ ವ್ಯಾಪಾರ ಸ್ವಾತಂತ್ರ್ಯವನ್ನು ಮುರಿದು, ಭಾರತದೊಂದಿಗೆ ನೇರವಾಗಿ ವ್ಯಾಪಾರ ಮಾಡುವುದರಿಂದ ಭಾರತದ ಅಭಿವೃದ್ಧಿ ಸಾಧ್ಯವೆಂದು ನಂಬಿದ್ದರು. ವ್ಯಾಪಾರ ದೇವರ ಸೇವೆ ಎಂದು ಆಂಗ್ಲರು ಪ್ರತಿಪಾದಿಸುತ್ತಿದ್ದರು.[೩೨] ಭಾರತೀಯರು ವ್ಯಾಪಾರ ಮಾಡಬೇಕೆಂದರೆ ಈಸ್ಟ್ ಇಂಡಿಯಾ ಕಂಪನಿಯಿಂದ ಅನುಮತಿ ಪಡೆಯಬೇಕಾಗಿತ್ತು.[೩೩]

೧೮ನೇ ಶತಮಾನದಲ್ಲಿ ಸ್ಟ್ರೇಟ್ ಸೆಟ್ಲಮೆಂಟ್‌ಗೆ ಸಹಿ ಹಾಕಿದಾಗ ದಕ್ಷಿಣ ಏಷಿಯಾ ರಾಷ್ಟ್ರಗಳಲ್ಲಿ ಇವರ ವ್ಯಾಪಾರ ಪ್ರಬಲವಾಗಿತ್ತು. ಕ್ರಿ.ಶ.೧೭೮೬ ಜುಲೈ ೧೭ ರಂದು ಸ್ಟೇಟ್ ಸೆಟ್ಲಮೆಂಟ್‌ನ ಸ್ಥಾಪನೆಯಾಯಿತು. ಸ್ಟೇಟ್ ಸೆಟ್ಲ್‌ಮೆಂಟ್ ಎಂದರೆ ಮಲಯ ಪರ್ಯಾಯ ದ್ವೀಪ, ಸಿಂಗಾಪುರ, ಮಲಕ್ಕೆ ಮತ್ತು ಪೆನಾಂಗ್ ಪ್ರಾಂತಗಳು ಸೇರಿ ವ್ಯಾಪಾರ ಒಪ್ಪಂದ ಮಾಡಿಕೊಂಡಿದ್ದವು ಅದಕ್ಕೆ ಸ್ಟೇಟ್ ಸೆಟ್ಲಮೆಂಟ್ ಎನ್ನುವರು. ಬ್ರಿಟಿಷರು ವ್ಯಾಪಾರಕ್ಕಾಗಿ ಸಿಂಗಪುರದಲ್ಲಿ ಕೇಂದ್ರವನ್ನು ಸ್ಥಾಪಿಸಿಕೊಂಡಿದ್ದರು. ಆದ್ದರಿಂದ ರಾಷ್ಟ್ರೀಯ ಹೆದ್ದಾರಿ ಮೂಲಕ ವ್ಯಾಪಾರ ಮಾಡಲು ಭಾರತ, ಚೀನಾ, ಬಾಟವಿಯ ಮತ್ತು ಆಸ್ಟ್ರೇಲಿಯಾ,-ಮಲಕ್ಕಗಳಲ್ಲಿ ವಸಾಹತು ಸ್ಥಾಪಿಸಿದ್ದರು. ಗವರ್ನರ್ ಈ ಮೇಲಿನ ಪ್ರದೇಶಗಳನ್ನು ಕಂಪನಿಗೆ ಸೇರಿಸಿಕೊಂಡು ವ್ಯಾಪಾರ ಅಭಿವೃದ್ಧಿಗೊಳಿಸಿದನು. ವ್ಯಾಪಾರ ಮದ್ರಾಸ್ ಪ್ರಾಂತದಿಂದ ನಿಜಾಮನ ಪ್ರದೇಶಗಳವರೆಗೆ ನಡೆಯುತ್ತಿತ್ತು. ಭೌಗೋಳಿಕವಾಗಿ ಕರ್ನೂಲು, ಬಳ್ಳಾರಿ, ಗೋದಾವರಿ, ಕೃಷ್ಣ ಜಿಲ್ಲೆಗಳು ಪ್ರಮುಖವಾಗಿದ್ದವು. ಈ ಭಾಗದಿಂದ ಹತ್ತಿ, ಬೆಲ್ಲ, ಉಪ್ಪು, ತಂಬಾಕು, ಮೆಣಸಿನಕಾಯಿಯನ್ನು ರಫ್ತು ಮಾಡುತ್ತಿದ್ದರು. ಬಳ್ಳಾರಿ ಹೈದ್ರಾಬಾದ್ ಪ್ರದೇಶಗಳಿಂದ ತುಪ್ಪ, ಎಣ್ಣೆಕಾಳುಗಳು, ದ್ವಿದಳ ಧಾನ್ಯಗಳು, ಸಾಂಬಾರ ಪದಾರ್ಥಗಳು ಮತ್ತು ಭತ್ತವನ್ನು ಇಲ್ಲಿಂದ ರಫ್ತು ಮಾಡಲಾಗುತ್ತಿತ್ತು. ೧೮೮೩-೮೪ರಲ್ಲಿ ಅಂದಾಜು ರಫ್ತಿನಿಂದ ೨,೩೫೦೦೦ ಮತ್ತು ಆಮದಿನಿಂದ ೨,೫೫,೦೦೦೦ ಲಾಭ ಬರುತ್ತಿತ್ತು. ೮ ಪ್ರಮುಖ ವ್ಯಾಪಾರಿ ಕೇಂದ್ರಗಳಲ್ಲಿ ಬಳ್ಳಾರಿ ಜಿಲ್ಲೆ ಪ್ರಮುಖವಾಗಿತ್ತು. ಈ ಜಿಲ್ಲೆಯ ಒಂದು ಪ್ರದೇಶವಾಗಿ ಹೊಸಪೇಟೆಯು ವ್ಯಾಪಾರ-ವಾಣಿಜ್ಯದಲ್ಲಿ ಪ್ರಮುಖ ಪಾತ್ರವಹಿಸಿತ್ತು.[೩೪]

೨.ವರ್ತಕ ಸಮುದಾಯಗಳು

ಬ್ರಿಟಿಷ್ ಕರ್ನಾಟಕದಲ್ಲಿ ವಿವಿಧ ಆಡಳಿತಗಳಿಗೆ ಒಳಪಟ್ಟಿದ್ದ ಎಲ್ಲ ಪ್ರದೇಶಗಳೂ ವ್ಯಾಪಾರದ ಮೂಲಕ ಪರಸ್ಪರ ಸಂಪರ್ಕವನ್ನು ಸಾಧಿಸಿದ್ದವು. ಬಳ್ಳಾರಿ ಮತ್ತು ಮೈಸೂರು ಒಂದು ಕಡೆ, ಧಾರವಾಡ ಮತ್ತು

ಕೆನರಾ ಇನ್ನೊಂದು ಕಡೆ ಈ ಸ್ಥಳಗಳ ನಡುವೆ ವರ್ತಕರು ವ್ಯಾಪಕವಾಗಿ ವ್ಯಾಪಾರ ವಹಿವಾಟು ನಡೆಸುತ್ತಿದ್ದರು. ಪ್ರತಿಯೊಂದು ನಗರ ಕೇಂದ್ರದಲ್ಲೂ ವರ್ತಕ ಸಮುದಾಯಗಳು ಇದ್ದವು. ಅದರಂತೆ ಬಳ್ಳಾರಿಯ ವಿವಿಧ ಪ್ರದೇಶಗಳಲ್ಲಿ ಅನೇಕ ವರ್ತಕ ಸಮುದಾಯಗಳು ವ್ಯಾಪಾರ ವಹಿವಾಟು ನಡೆಸುತ್ತಿದ್ದರು. ಇವರು ತಮ್ಮ ಬಹುಮುಖಿ ಚಟುವಟಿಕೆಗಳ ಮುಖಾಂತರ ನಗರಗಳ ವ್ಯಾಪ್ತಿಯನ್ನು ವಿಸ್ತರಿಸಿದ್ದರು. ಕೇವಲ ವ್ಯಾಪಾರವನ್ನಷ್ಟೇ ವೃತ್ತಿಯನ್ನಾಗಿರಿಸದೆ, ಕೈಗಾರಿಕೆಗಳನ್ನು ಸ್ಥಾಪಿಸುವುದು, ಬ್ಯಾಂಕುಗಳನ್ನು ಆರಂಭಿಸುವುದು, ಲೇವಾದೇವಿದಾರರಾಗಿ ಕೆಲಸ ಮಾಡುವುದು, ಮಧ್ಯವರ್ತಿಗಳಾಗಿ ವ್ಯವಹರಿಸುವುದು ಮುಂತಾದ ಹತ್ತು ಹಲವು ಕೆಲಸಗಳನ್ನು ಮಾಡುತ್ತಿದ್ದರು. ವಸಾಹತು ಕರ್ನಾಟಕದಲ್ಲಿನ ಬಳ್ಳಾರಿ ಭಾಗದಲ್ಲಿ ಅನೇಕ ವರ್ತಕ ಸಮುದಾಯಗಳಿದ್ದವು. ಅವುಗಳೆಂದರೆ ಶೆಟ್ಟಿಗಳು, ಮುಸ್ಲಿಮರು, ಮಾರವಾಡಿಗಳು (ರಾಜಸ್ಥಾನಿಗಳು), ಬಣಜಿಗರು, ಇನ್ನಿತರ ಸಣ್ಣಪುಟ್ಟ ವ್ಯಾಪಾರಿಗಳಿದ್ದರು. ಈ ಸಮುದಾಯಗಳು ಬಟ್ಟೆ, ಕಿರಾಣಿ, ಕಚ್ಚಾ ಹತ್ತಿಯನ್ನು ಸಾಗಿಸುವ ವ್ಯಾಪಾರ ಇನ್ನಿತರ ವ್ಯಾಪಾರವನ್ನು ಮಾಡುತ್ತಿದ್ದರು.

ಬಣಜಿಗರು ಇವರು ಮುಖ್ಯವಾಗಿ ಬಟ್ಟೆ ವ್ಯಾಪಾರವನ್ನು ಮಾಡುತ್ತಿದ್ದರು. ಇವರು ನೇಕಾರರಿಗೆ ಬೇಕಾಗುವ ಸವಲತ್ತು ಸೌಕರ್ಯಗಳನ್ನು ಒದಗಿಸಿದ್ದರು. ಇವರು ಹತ್ತಿ ಬಟ್ಟೆಗಳನ್ನು, ಕಚ್ಚಾ ಹತ್ತಿಯನ್ನು ಸಾಗಿಸುವುದು ಮತ್ತು ಮಾರಾಟ ಮಾಡುವ ಕಾರ್ಯವನ್ನು ಮಾಡುತ್ತಿದ್ದರು. ಇವರು ಹತ್ತಿ ಬೆಳೆಗಾರರಿಗೆ ಸಾಲವನ್ನು ನೀಡುತ್ತಿದ್ದರು. ಹತ್ತಿಯನ್ನು ಖರೀದಿಸಿ ಸಿದ್ಧವಸ್ತುಗಳನ್ನು ಬೆಂಗಳೂರು, ಶ್ರೀರಂಗಪಟ್ಟಣ, ಮೈಸೂರು, ಗುಬ್ಬಿ, ನಗರ, ಚಿತ್ರದುರ್ಗ, ಚನ್ನಪಟ್ಟಣ, ಮಂಗಳೂರು, ಭಟ್ಕಳ, ಹೊನ್ನಾವರ, ಕಾರವಾರ ಮುಂತಾದ ಪ್ರದೇಶಗಳಿಗೆ ಸಾಗಿಸಿ ವ್ಯಾಪಾರ ನಡೆಸುತ್ತಿದ್ದರು.[೩೫]

ಮುಸ್ಲಿಮರು ವ್ಯಾಪಾರಿಗಳು ಹೊಸಪೇಟೆ ಪಟ್ಟಣದಲ್ಲಿ ವಿಜಯನಗರ ಕಾಲದಿಂದಲೂ ನೆಲೆಸಿದ್ದರು. ಮಾರವಾಡಿಗಳು (ರಾಜಸ್ಥಾನಿಗಳು) ಹೊಸಪೇಟೆಗೆ ರಾಜಸ್ಥಾನದಿಂದ ವಲಸೆ ಬಂದ ವರ್ತಕರಾಗಿದ್ದಾರೆ. ಇವರು ಬಟ್ಟೆ ವ್ಯಾಪಾರದ ಜೊತೆಗೆ ಲೇವಾದೇವಿವ್ಯವಹಾರವನ್ನು ಮಾಡುತ್ತಿದ್ದರು. ಇವರು ಬ್ರಿಟಿಷರ ಮತ್ತು ಸ್ಥಳೀಯ ರೈತರ ಮಧ್ಯ ಕೊಂಡಿಗಳಾಗಿ ಕೆಲಸಮಾಡಿದರು. ಇವರು ಕೆಲವು ಸಮಯದಲ್ಲಿ ಮಧ್ಯವರ್ತಿಗಳಾಗಿ, ಬ್ರಿಟಿಷರ ಏಜೆಂಟರುಗಳಾಗಿಯೂ ಕೆಲಸ ಮಾಡಿದರು. ಇವರು ಕೃಷಿಕರಿಗೆ ಮತ್ತು ಕುಶಲಕರ್ಮಿಗಳಿಗೆ ಸಾಲದ ರೂಪದಲ್ಲಿ ಬಡ್ಡಿಗೆ ಹಣವನ್ನು ಕೊಡುತ್ತಿದ್ದರು. ಭೂಮಿಯನ್ನು ಅಡವಿಟ್ಟು, ಕೆಲವೊಬ್ಬರು ಸಾಲವನ್ನು ತೆಗೆದುಕೊಳ್ಳುತ್ತಿದ್ದರು. ಸಾಲ ಮರುಪಾವತಿಸಲು ಸಾಧ್ಯವಾಗದ ಸಂದರ್ಭದಲ್ಲಿ ಅವರು ಭೂಮಿಯನ್ನೇ ಕಳೆದುಕೊಳ್ಳುತ್ತಿದ್ದರು.[೩೬]

ಶೆಟ್ಟಿಗಳು (ವೈಶ್ಯರು) ಆಂಧ್ರದಿಂದ ಬಂದವರಾಗಿದ್ದು ಬಹಳ ವರ್ಷಗಳಿಂದ ಇಲ್ಲಿಯೇ ನೆಲೆನಿಂತವರು. ಇವರು ಹೊಸಪೇಟೆಯ ಪ್ರಮುಖ ವ್ಯಾಪಾರಿಗಳಾಗಿದ್ದು, ಲೇವಾದೇವಿವ್ಯವಹಾರ, ಕಿರಾಣಿ, ದಲ್ಲಾಳಿ,

ಇನ್ನಿತರ ವ್ಯಾಪಾರವನ್ನು ಮಾಡುತ್ತಿದ್ದರು. ಇವರು ಹಳ್ಳಿಯ ಜನರಿಗೆ ಬಡ್ಡಿಗೆ ಹಣವನ್ನು ನೀಡುತ್ತಿದ್ದರು. ಯಾವುದೇ ನೀತಿ ನಿಯಮಗಳಿರಲಿಲ್ಲ. ಕೆಲವೊಂದು ಸಂದರ್ಭದಲ್ಲಿ ಅಸಲಿಗಿಂತ ಬಡ್ಡಿಯೇ ಅಧಿಕವಾಗಿರುತ್ತಿತ್ತು.

ಬ್ರಿಟಿಷ್ ಆಳ್ವಿಕೆಯಲ್ಲಿ ಈ ಪ್ರದೇಶದ ಮೇಲಿನ ವ್ಯಾಪಾರ ಮತ್ತು ವಾಣಿಜ್ಯದ ಮೇಲೆ ನೇರ ನಿಯಂತ್ರಣ ಹೊಂದಿದವರು. ಬ್ರಿಟಿಷ್ ವರ್ತಕರು. ಇವರು ಸ್ವತಂತ್ರವಾಗಿ ಕಾರ್ಯನಿರ್ವಹಿಸಬಹುದಾಗಿತ್ತು. ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯ ಉದ್ದೇಶದಿಂದಲೇ ಈ ವರ್ಗ ಹುಟ್ಟಿಕೊಂಡಿತ್ತು. ಇವರಿಗೆ ಬ್ರಿಟಿಷ್ ಸರಕಾರವು ಹೆಚ್ಚಿನ ಅಧಿಕಾರವನ್ನು ನೀಡಿತ್ತು. ಇವರು ತಮ್ಮ ವ್ಯಾಪಾರದ ಉದ್ದೇಶಗಳ ಈಡೇರಿಕೆಗಾಗಿ ಸ್ಥಳೀಯ ವರ್ತಕರನ್ನು ಬಳಸಿಕೊಂಡಿದ್ದರು. ಕ್ರಿಶ್ಚಿಯನ್ನರಲ್ಲಿ ರೋಮನ್ ಕೆಥೋಲಿಕ್‌ಗಳು ಮತ್ತು ಪ್ರೊಟೆಸ್ಟೆಂಟ್‌ಗಳು ಎಂಬ ಎರಡು ಸಮುದಾಯಗಳಿದ್ದವು. ಈ ಸಮುದಾಯಗಳ ವ್ಯಾಪಾರ ಮತ್ತು ಉದ್ದಿಮೆಗಳಿಗೆ ನೆರವಾಗಲು ಹಣಕಾಸಿನ ಸಂಸ್ಥೆಗಳನ್ನು ತೆರೆದಿದ್ದರು. ಬಾಸೆಲ್ ಮಿಶನ್ ವ್ಯಾಪಾರ-ವಾಣಿಜ್ಯದ ಉದ್ದೇಶಕ್ಕಾಗಿ ೧೮೫೨ರಲ್ಲಿ ಹೊಸ ವಿಭಾಗವೊಂದನ್ನು ಸ್ಥಾಪಿಸಿತು. ಅದು ಹಣಕಾಸಿನ ವ್ಯವಹಾರ, ಆಮದು ಮತ್ತು ರಫ್ತು ವ್ಯವಹಾರ ನಡೆಸುವುದು, ಬಾಸೆಲ್ ಮಿಶನ್ ಸ್ಥಾಪಿಸಿದ ಕೈಗಾರಿಕೆಗಳ ಉತ್ಪನ್ನಗಳ ಮಾರಾಟ ಮುಂತಾದ ಕೆಲಸಗಳನ್ನು ಮಾಡುತ್ತಿತ್ತು.

ಹೊಸಪೇಟೆ ಪ್ರದೇಶದಲ್ಲಿ ಮೇಲೆ ಉಲ್ಲೇಖಿಸಿದ ವರ್ತಕ ಸಮುದಾಯಗಳಲ್ಲದೆ ಇನ್ನೂ ಹತ್ತು ಹಲವಾರು ಸಮುದಾಯಗಳು ವಸ್ತುಗಳ ಉತ್ಪಾದನೆ ಮಾಡುವುದರ ಜೊತೆ ಜೊತೆಗೆ ಅವುಗಳ ಮಾರಾಟವನ್ನೂ ಮಾಡುತ್ತಿದ್ದರು. ಗಾಣಿಗರು ಎಣ್ಣೆಯನ್ನು ಉತ್ಪಾದಿಸುವುದರ ಜೊತೆಗೆ ಮಾರಾಟಮಾಡುತ್ತಿದ್ದರು. ಮೇದಾರರು ಬಿದುರಿನ ಉತ್ಪನ್ನಗಳನ್ನು ತಯಾರಿಸಿ ಮಾರಾಟ ಮಾಡುತ್ತಿದ್ದರು. ಆದರೆ ಇವರು ಪೂರ್ಣಪ್ರಮಾಣದ ವ್ಯಾಪಾರಸ್ಥರಾಗಿರಲಿಲ್ಲ. ಇವರಲ್ಲದೆ ಇನ್ನು ಮುಂತಾದ ಸಣ್ಣ ಪುಟ್ಟ ವ್ಯಾಪಾರಸ್ಥರಿದ್ದರು.[೬೭]

ಬೆಂಗಳೂರಿನ ವರ್ತಕರ ಏಜೆಂಟರುಗಳು ಬಳ್ಳಾರಿ ಪ್ರದೇಶಗಳೊಂದಿಗೆ ಸಂಪರ್ಕಗಳನ್ನು ಹೊಂದಿದ್ದರು. ಅದೇ ರೀತಿಯಾಗಿ ಹುಬ್ಬಳ್ಳಿ, ಧಾರವಾಡದೊಂದಿಗೆ ಕೂಡ ವ್ಯಾಪಾರ ಸಂಪರ್ಕವನ್ನು ಹೊಂದಿದ್ದರು. ಬಳ್ಳಾರಿ ಪ್ರದೇಶಗಳಿಂದ ಉತ್ತಮ ದರ್ಜೆಯ ಜೋರಿ ಎಂಬ ಬಟ್ಟೆಯನ್ನು ಬೆಳಗಾವಿಗೆ ಕಳುಹಿಸುತ್ತಿದ್ದರು.[೬೮]

ಅನಂತಪೂರ, ಕರ್ನೂಲ್, ಧಾರವಾಡ, ದಾವಣಗೆರೆ, ಧರ್ಮಾವರಂನ ವರ್ತಕರು ಹೊಸಪೇಟೆಗೆ ಬರುತ್ತಿದ್ದರು. ಇಲ್ಲಿಯ ವರ್ತಕರು ಈ ಮೇಲಿನ ಪ್ರದೇಶಗಳೊಂದಿಗೆ ಸಂಬಂಧ ಹೊಂದಿದ್ದರು. ಗುಂತಕಲ್ಲು, ಆದೋನಿ, ದಾವಣಗೆರೆಗಳಲ್ಲಿ ಕಾರ್ಖಾನೆಗಳು ಇದ್ದ ಕಾರಣ ಈ ಪ್ರದೇಶದ ವರ್ತಕರು ಹತ್ತಿಯನ್ನು ರಫ್ತುಮಾಡುತ್ತಿದ್ದರು.[೬೯]

೧೯ನೇ ಶತಮಾನದಲ್ಲಿಯೇ ಬಳ್ಳಾರಿಯಿಂದ ಹತ್ತಿಯನ್ನು ಮೈಸೂರಿಗೆ ಕಳುಹಿಸುತ್ತಿದ್ದರು. ಬಳ್ಳಾರಿ ಭಾಗದ ಪ್ರದೇಶಗಳಲ್ಲಿ ಕ್ಷಾಮ ಉಂಟಾದ ಸಂದರ್ಭದಲ್ಲಿ ಮೈಸೂರಿನಿಂದ ಆಹಾರ ಧಾನ್ಯಗಳನ್ನು ಬಳ್ಳಾರಿಗೆ

ತರಿಸಿಕೊಳ್ಳುತ್ತಿದ್ದರು. ಇಲ್ಲಿಂದ ಹತ್ತಿಯನ್ನು ಕಳುಹಿಸುತ್ತಿದ್ದರು. ಬ್ರಿಟಿಷರು ಮುಕ್ತ ವ್ಯಾಪಾರ ನೀತಿಯನ್ನು ಅನುಸರಿಸಿದರು. ಧಾನ್ಯಗಳನ್ನು ತಮಗೆ ಇಷ್ಟ ಬಂದ ಹಾಗೆ ಮಾರಲು ಅಥವಾ ಬೇರೆಡೆಯಿಂದ ಕೊಂಡುಕೊಳ್ಳಲು ಖಾಸಗಿ ವರ್ತಕರಿಗೂ, ರೈತರಿಗೂ ಮುಕ್ತ ಅವಕಾಶವನ್ನು ನೀಡಿದರು. ಇದರ ಪ್ರಯೋಜನವನ್ನು ಹೆಚ್ಚಾಗಿ ಮಧ್ಯವರ್ತಿಗಳು ಪಡೆದುಕೊಂಡಿದ್ದರು.[೪೦]

ಬಳ್ಳಾರಿ ಜಿಲ್ಲೆಯಲ್ಲಿ ಖನಿಜ ಸಂಪತ್ತು ಹೆಚ್ಚಾಗಿ ಇತ್ತು. ಈ ಜಿಲ್ಲೆಯ ಪ್ರದೇಶಗಳಲ್ಲಿ ಹೆಚ್ಚಾಗಿ ಬೆಟ್ಟಗಳಲ್ಲಿ ಖನಿಜ ಸಂಪತ್ತು ದೊರೆಯುತ್ತಿತ್ತು. ಈ ಬೆಟ್ಟಗಳಲ್ಲಿ ಕಬ್ಬಿಣ, ಮ್ಯಾಂಗನೀಸ್ ಹೆಚ್ಚಾಗಿ ದೊರೆಯುತ್ತಿತ್ತು. ಬ್ರಿಟಿಷ್ ಕಾಲಾವಧಿಯಲ್ಲಿ ಈ ಪ್ರದೇಶಗಳಲ್ಲಿ ಗಣಿಗಾರಿಕೆಯನ್ನು ನಡೆಸುತ್ತಿದ್ದರು. ಇಲ್ಲಿ ದೊರೆತ ಕಬ್ಬಿಣದ ಅದಿರನ್ನು ಗೋವಾ, ಮಂಗಳೂರಿನ ಮುಖಾಂತರ ಪಶ್ಚಿಮ ರಾಷ್ಟ್ರಗಳಿಗೆ ಕಳುಹಿಸುತ್ತಿದ್ದರು.

೧೮೩೧ರ ವೇಳೆಯಲ್ಲಿ ಬೆಂಗಳೂರು ಮಾರ್ಗವಾಗಿ ಬಳ್ಳಾರಿಗೆ ಸೇರುವ ರಸ್ತೆಗಳ ಸ್ಥಿತಿ ಶೋಚನೀಯವಾಗಿತ್ತು. ಕ್ಯಾಪ್ಟನ್ ಚಾರ್ಜ್ ವಿರ್ಗೇಟ್ ಎನ್ನುವ ಅಧಿಕಾರಿಯೊಬ್ಬನು ಈ ರೀತಿಯಾಗಿ ಹೇಳಿದ್ದಾನೆ.

''ಈ ದೇಶದ ಒಳನಾಡಿನ ಸಂಪರ್ಕ ಮಾರ್ಗಗಳನ್ನು ವ್ಯಾಪಕವಾಗಿ ದುರಸ್ತಿ ಮಾಡುವುದರ ಹೊರತು ಬೇರೆ ದಾರಿಯೇ ಇಲ್ಲ. ಅತಿ ಬೇಗನೆ ಈ ಕೆಲಸವನ್ನು ಕೈಗೊಳ್ಳಬೇಕು. ಇಲ್ಲವಾದರೆ ಈ ಪ್ರೆಸಿಡೆನ್ಸಿಯ ಕಂದಾಯವೂ ವ್ಯಾಪಾರವೂ ಎಂದೆಂದಿಗೂ ಚೇತರಿಸಿಕೊಳ್ಳಲಾಗದೆ ಆಘಾತಕ್ಕೆ ಒಳಗಾಗುತ್ತವೆ.[೪೧]

೧೮೮೯ರಲ್ಲಿ ಅನೇಕ ಪ್ರಮುಖ ವ್ಯಾಪಾರಿ ಪಟ್ಟಣಗಳಾದ ಬೆಂಗಳೂರು, ಮೈಸೂರು, ಧಾರವಾಡ, ಹುಬ್ಬಳ್ಳಿ ಇನ್ನು ಮುಂತಾದ ನಗರಗಳಿಂದ ಬಳ್ಳಾರಿಗೆ ಸಂಪರ್ಕಿಸಲು ಅನೇಕ ರೈಲು ಮಾರ್ಗಗಳ ನಿರ್ಮಾಣವಾಯಿತು. ಇದರಿಂದ ಈ ಭಾಗಗಳಲ್ಲಿ ಬೆಳೆಯುವ ಉತ್ಪನ್ನಗಳ ವ್ಯಾಪಾರಕ್ಕೆ ಅನುಕೂಲವಾಯಿತು.[೪೨] ಹೀಗೆ ಹೊಸದಾಗಿ ಅನೇಕ ರಸ್ತೆ, ರೈಲು ಮಾರ್ಗಗಳ ನಿರ್ಮಾಣದಿಂದಾಗಿ ಈ ಭಾಗದಲ್ಲಿನ ವ್ಯಾಪಾರ ವಾಣಿಜ್ಯದ ಅಭಿವೃದ್ಧಿಯು ಆಯಿತು.

ಬ್ರಿಟಿಷರ ಕಾಲದಲ್ಲಿ ವ್ಯಾಪಾರವು ಬ್ರಿಟಿಷರ ವ್ಯಾಪರದ ನೀತಿಯ ಅನುಸಾರವಾಗಿತ್ತು. ಅವರು ತಮಗೆ ಲಾಭದಾಯಕವಾಗುವ ವ್ಯಾಪಾರವನ್ನು ನಡೆಸುತ್ತಿದ್ದರು. ಅವರು ಈ ದೇಶದ ವಿವಿಧ ಪ್ರದೇಶಗಳಲ್ಲಿ ದೊರೆಯುವ ಕಚ್ಚಾ ಸಾಮಗ್ರಿಗಳನ್ನು ತಮ್ಮ ದೇಶಕ್ಕೆ ಕಳುಹಿಸಿ ತಯಾರಾದ ನಂತರ ಅದನ್ನು ಈ ದೇಶದಲ್ಲಿ ಮಾರಾಟ ಮಾಡುತ್ತಿದ್ದರು. ಬ್ರಿಟಿಷರು ಇಲ್ಲಿಯ ಸ್ಥಳೀಯ ವರ್ತಕರನ್ನು ತಮ್ಮ ವ್ಯಾಪಾರಕ್ಕೆ ಬಳಸಿಕೊಂಡರು. ಆದರೆ ಇದರಿಂದ ಸ್ಥಳೀಯ ವರ್ತಕರಿಗೆ ಯಾವುದೇ ಪ್ರಯೋಜನವಾಗಲಿಲ್ಲ. ಇಲ್ಲಿಯ ವರ್ತಕರ ಮೇಲೆ ವಿವಿಧ ರೀತಿಯ ಸುಂಕಗಳನ್ನು ವಿಧಿಸುತ್ತಿದ್ದರು. ಅವರಿಗೆ ಯಾವುದೇ ರೀತಿಯ ಸೌಕರ್ಯಗಳನ್ನು ಒದಗಿಸುತ್ತಿರಲಿಲ್ಲ. ವ್ಯಾಪಾರಿಗಳು ಸ್ವತಂತ್ರ್ಯವಾಗಿ ವ್ಯಾಪಾರವನ್ನು ಮಾಡುವಂತಿರಲಿಲ್ಲ. ಈ ಪ್ರದೇಶಗಳಲ್ಲಿ ಏನೇ ವ್ಯಾಪರ ನಡೆದರೂ ಅದರ ಲಾಭಾಂಶವು ಬ್ರಿಟಿಷರಿಗೆ ದೊರಕುತ್ತಿತ್ತು. ಇಲ್ಲಿಯ ವರ್ತಕರಿಗೆ ಬ್ರಿಟಿಷರು

ಸೂಕ್ತವಾದ ಮಾರುಕಟ್ಟೆಯನ್ನು ಒದಗಿಸಿರಲಿಲ್ಲ. ಇವರ ಕಾಲದಲ್ಲಿ ವರ್ತಕರು ಅನೇಕ ಸಮಸ್ಯೆ, ನಿರ್ಬಂಧಗಳ ನಡುವೆ ವ್ಯಾಪಾರ ನಡೆಸುವಂತಾಗಿತ್ತು. ವ್ಯಾಪಾರಸ್ಥರ ಹಿತಕ್ಕಾಗಿ ವರ್ತಕ ಸಂಘಗಳು ಹುಟ್ಟಿಕೊಂಡಿದ್ದವು. ಆದರೆ ಅವು ಸ್ವತಂತ್ರ್ಯವಾಗಿರಲಿಲ್ಲ. ಅನೇಕ ಕಟ್ಟುಪಾಡುಗಳಿಗೆ ಒಳಗಾಗಿದ್ದವು. ಬ್ರಿಟಿಷರ ಅವಧಿಯಲ್ಲಿ ಕೆಲವೊಂದು ಸಮುದಾಯದ ವರ್ತಕರು ಶ್ರೀಮಂತರಾದರು ಮತ್ತು ಬ್ರಿಟಿಷರ ವ್ಯಾಪಾರದಿಂದ ಒಳ್ಳೆಯ ತರಬೇತಿಯನ್ನು ಪಡೆದರು.[೪೩]

೪.೩. ಪ್ರಜಾಪ್ರಭುತ್ವ

ಬಳ್ಳಾರಿ ಪ್ರದೇಶವು ಕ್ರಿ.ಶ.೧೮೦೦ರಲ್ಲಿ ಬ್ರಿಟಿಷರ ನೇರ ಆಳ್ವಿಕೆಗೆ ಒಳಗಾಯಿತು. ಬ್ರಿಟಿಷರ ಸಹಾಯಕ ಸೈನ್ಯ ಪದ್ಧತಿಯನ್ನು ಒಪ್ಪಿಕೊಂಡ ಹೈದರಾಬಾದಿನ ನಿಜಾಮನು ತನ್ನ ಆಳ್ವಿಕೆಗೆ ಒಳಪಟ್ಟ ಕೆಲವೊಂದು ಪ್ರದೇಶಗಳಾದ ಬಳ್ಳಾರಿ, ಅನಂತಪುರ, ಕರ್ನೂಲು ಮತ್ತು ಕಡಪ ಜಿಲ್ಲೆಗಳನ್ನು ಸಂಭಾವನೆ ಬಾಬ್ತುಗಾಗಿ ಬ್ರಿಟಿಷರಿಗೆ ಕಾಣಿಕೆಯಾಗಿ ನೀಡಿದನು. ಬ್ರಿಟಿಷರು ಬಳ್ಳಾರಿ ಪ್ರದೇಶವನ್ನು ಮದರಾಸು ಪ್ರಾಂತ್ಯಕ್ಕೆ ಸೇರಿಸಿಕೊಂಡರು. ೧೮೦೦ರಲ್ಲಿ ಬಳ್ಳಾರಿ ಪ್ರದೇಶಕ್ಕೆ ಒಳಪಟ್ಟಿದ್ದ ತಾಲೂಕುಗಳೆಂದರೆ, ಧರ್ಮಾವರಂ, ಗೂಟಿ, ತಾಡಪತ್ರಿ, ಪೆನುಗೊಂಡ, ಹಿಂದೂಪುರ, ಬಳ್ಳಾರಿ, ಕೂಡ್ಲಿಗಿ, ಹಡಗಲಿ, ಹರಪನಹಳ್ಳಿ, ಮಡಕಶಿರ, ಅನಂತಪುರ, ಹೊಸಪೇಟೆ, ರಾಯದುರ್ಗ, ಆಲೂರು ಮತ್ತು ಆದವಾನಿ.[೪೪] ೧೮೮೨ರಲ್ಲಿ ಬಳ್ಳಾರಿ ಪ್ರದೇಶವನ್ನು ಬಳ್ಳಾರಿ ಮತ್ತು ಅನಂತಪುರಗಳೆಂಬ ಎರಡು ಜಿಲ್ಲೆಗಳನ್ನಾಗಿ ವಿಂಗಡಿಸಲಾಯಿತು. ಕರ್ನಾಟಕವು ಏಕೀಕರಣಗೊಂಡಾಗ ಬಳ್ಳಾರಿಯು ಮೈಸೂರು ರಾಜ್ಯಕ್ಕೆ ಸೇರಿತು. ಪ್ರಸ್ತುತವಾಗಿ ಕರ್ನಾಟಕ ರಾಜ್ಯದಲ್ಲಿ ಬಳ್ಳಾರಿಯು ಒಂದು ಜಿಲ್ಲೆಯಾಗಿ ಹಾಗೂ ಹೊಸಪೇಟೆ ತಾಲೂಕಾಗಿ ಗುರುತಿಸಿಕೊಂಡಿದೆ.

ರಾಜಪ್ರಭುತ್ವ ಮತ್ತು ವಸಾಹತು ಪ್ರಭುತ್ವದ ಸಂದರ್ಭದಲ್ಲಿ ವರ್ತಕ ಸಮುದಾಯಗಳ ವ್ಯಾಪಾರ ವಾಣಿಜ್ಯ, ಸಾರಿಗೆ ಸಂಪರ್ಕ, ಆಮದು, ರಫ್ತು ಹಾಗೂ ಪ್ರಭುತ್ವಗಳೊಂದಿಗೆ ಸಂಬಂಧ ಹೇಗಿತ್ತು ಎನ್ನುವ ವಿಚಾರವನ್ನು ಈಗಾಗಲೇ ಚರ್ಚಿಸಲಾಗಿದೆ. ಪ್ರಜಾಪ್ರಭುತ್ವದ ಅವಧಿಯಲ್ಲಿ ವರ್ತಕ ಸಮುದಾಯಗಳು ಯಾವ ರೀತಿ ತಮ್ಮ ವೃತ್ತಿಯನ್ನು ನಡೆಸಿದವು ಎನ್ನುವುದನ್ನು ತಿಳಿದುಕೊಳ್ಳಬೇಕಾಗಿದೆ.

ಕರ್ನಾಟಕ ರಾಜ್ಯದ ಹಲವು ವ್ಯಾಪಾರ ಕೇಂದ್ರಗಳಲ್ಲಿ ಹೊಸಪೇಟೆ ನಗರವು ಒಂದಾಗಿದೆ. ಅತಿ ವೇಗವಾಗಿ ಬೆಳೆಯುತ್ತಿರುವ ನಗರದ ವ್ಯಾಪಾರ ವಾಣಿಜ್ಯದಲ್ಲಿ ಅನೇಕ ಬದಲಾವಣೆಗಳಾಗಿವೆ. ಈ ನಗರಕ್ಕೆ ದೇಶದ, ರಾಜ್ಯದ ವಿವಿಧ ಭಾಗಗಳಿಂದ ವಲಸೆ ಬಂದ ಅನೇಕ ವರ್ತಕ ಸಮುದಾಯಗಳು ವ್ಯಾಪಾರದಲ್ಲಿ ತೊಡಗಿದ್ದು, ನಗರದ ಬೆಳವಣಿಗೆಗೆ ಪೂರಕವಾಗಿವೆ.

ರಾಜ್ಯಪ್ರಭುತ್ವದ ಮತ್ತು ವಸಾಹತು ಪ್ರಭುತ್ವದ ಸಂದರ್ಭದ ವ್ಯಾಪಾರಕ್ಕೂ ಪ್ರಜಾಪ್ರಭುತ್ವ ಸಂದರ್ಭದ ವ್ಯಾಪಾರಕ್ಕೂ ಅನೇಕ ವ್ಯತ್ಯಾಸಗಳಿವೆ. ಈ ಪ್ರದೇಶವು ಗಣಿಗಾರಿಕೆ, ಕೈಗಾರಿಕೆಗಳ ಬೆಳವಣಿಗೆ, ಕೃಷಿಯಲ್ಲಿನ ಹೆಚ್ಚಳದಿಂದ ಆರ್ಥಿಕವಾಗಿ ಅಭಿವೃದ್ಧಿಹೊಂದಿದೆ.

ಈ ನಗರದ ವರ್ತಕ ಸಮುದಾಯಗಳು ಬರ್ಮ, ನೈಜೀರಿಯಾ, ಬ್ರೆಜಿಲ್, ಇಂಡೋನೇಷ್ಯ, ಕೊರಿಯಾ, ಜಪಾನ್, ಚೀನಾ, ಮುಸ್ಲಿಂ ದೇಶಗಳು, ಇತರ ಸಣ್ಣ ಪುಟ್ಟ ವಿದೇಶಗಳೊಂದಿಗೆ ವ್ಯಾಪಾರ ಸಂಪರ್ಕವನ್ನು ಹೊಂದಿವೆ.

ಈ ನಗರದಲ್ಲಿ ಅನೇಕ ವರ್ತಕ ಸಮುದಾಯಗಳು ವಾಸವಾಗಿವೆ. ರಾಜಸ್ಥಾನಿಗಳು, ಗುಜರಾತಿಗಳು, ಶೆಟ್ಟಿಗಳು, ಮುಸ್ಲಿಂರು, ಬ್ರಾಹ್ಮಣರು, ಲಿಂಗಾಯತರು, ಕುರುಬರು, ಸಿಖ್ಖರು, ಮಾರಾಟರು, ಮೇದಾರರು, ಗೌಳಿಗರು, ದೇವಾಂಗರು, ಇನ್ನಿತರ ವರ್ತಕ ಸಮುದಾಯಗಳು ಈ ನಗರದಲ್ಲಿ ವಾಸವಾಗಿ ವ್ಯಾಪಾರ ವಾಣಿಜ್ಯವನ್ನು ನಡೆಸುತ್ತಿದ್ದಾರೆ.

ಈ ವರ್ತಕ ಸಮುದಾಯಗಳಲ್ಲಿ ಕೆಲವೊಂದು ವರ್ತಕ ಸಮುದಾಯಗಳು ದೇಶದ ವಿವಿಧ ಭಾಗಗಳಿಂದ ಬಂದಿದ್ದಾರೆ. ಮುಖ್ಯವಾಗಿ ಗುಜರಾತಿನಿಂದ ಗುಜರಾತಿಗಳು, ರಾಜಸ್ಥಾನದಿಂದ ರಾಜಸ್ಥಾನಿಗಳು, ಪಂಜಾಬದಿಂದ ಸಿಖ್ಖರು, ಮಹಾರಾಷ್ಟ್ರದಿಂದ ಮಾರಾಟರು ಇನ್ನಿತರರು ಬಂದಿದ್ದಾರೆ. ಶೆಟ್ಟಿ, ಲಿಂಗಾಯತ ಬಣಜಿಗರು ಮತ್ತು ಮುಸ್ಲಿಮರು ವಿಜಯನಗರ ಕಾಲದಿಂದಲೂ ಈ ಪ್ರದೇಶದಲ್ಲಿಯೆ ವಾಸವಾಗಿದ್ದಾರೆ. ಇನ್ನಿತರ ವರ್ತಕ ಸಮುದಾಯಗಳು ಸ್ಥಳೀಯರಾಗಿದ್ದಾರೆ.

ಈ ವರ್ತಕ ಸಮುದಾಯಗಳು ನಗರದಲ್ಲಿ ತಮ್ಮ ವ್ಯಾಪಾರವು ಹೆಚ್ಚಿನ ಪ್ರಮಾಣದಲ್ಲಿ ಎಲ್ಲಿ ನಡೆಯುತ್ತದೆಯೋ ಅಂತಹ ಬೀದಿಗಳಲ್ಲಿ ವಾಸವಾಗಿದ್ದಾರೆ. ಉದಾಹರಣೆಗೆ ಮೇನ್ ಬಜಾರ್, ಗಾಂಧಿ ಚೌಕ್, ಹಳೆ ಬಸ್‌ಸ್ಟ್ಯಾಂಡ್, ಜಾಲಿ ಲೈನ್ ಬೀದಿಗಳಲ್ಲಿ ಅಧಿಕ ಸಂಖ್ಯೆಯಲ್ಲಿದ್ದಾರೆ.[೪೫]

ಈ ವರ್ತಕ ಸಮುದಾಯಗಳು ನಗರದಲ್ಲಿ ಮುಖ್ಯವಾಗಿ ಬಟ್ಟೆ ವ್ಯಾಪಾರ, ಕಿರಾಣಿ ವ್ಯಾಪಾರ, ಆಭರಣಗಳ ವ್ಯಾಪಾರ, ಲೇವಾದೇವಿ ವ್ಯವಹಾರ, ಸಾಮಿಲ್‌ಗಳಲ್ಲಿ ಕಟ್ಟಿಗೆ ವ್ಯಾಪಾರ, ಎಲೆಕ್ಟ್ರಾನಿಕ್ ಸಾಮಾನುಗಳ ವ್ಯಾಪಾರ, ಹಾರ್ಡ್‌ವೇರ್, ಆಟೋಮೊಬೈಲ್ ವ್ಯಾಪಾರದ ಮಳಿಗೆಗಳು, ಗಣಿಗಾರಿಕೆ, ಕೈಗಾರಿಕೆಗಳ ಸ್ಥಾಪನೆ, ಪಾತ್ರೆ ಸಾಮಾನಿನ ವ್ಯಾಪಾರ, ತರಕಾರಿ ಮಾರಾಟ, ಮೆಕಾನಿಕ್ ಇನ್ನಿತರ ಸಣ್ಣ ಪುಟ್ಟ ವ್ಯಾಪಾರಗಳನ್ನು ನಡೆಸುತ್ತವೆ.

ಹೊಸಪೇಟೆಯಲ್ಲಿ ರಾಜಸ್ಥಾನಿಗಳು, ಗುಜರಾತಿಗಳು, ಶೆಟ್ಟಿಗಳು, ಮುಸ್ಲಿಂರು, ಬಣಜಿಗರರು, ಬ್ರಾಹ್ಮಣರು ಪ್ರಮುಖ ವ್ಯಾಪಾರಸ್ಥರಾಗಿ ಗುರುತಿಸಿಕೊಂಡಿದ್ದಾರೆ. ಈ ವರ್ತಕ ಸಮುದಾಯಗಳು ಎರಡು ರೀತಿಯಲ್ಲಿ ವ್ಯಾಪಾರ ಮಾಡುತ್ತಾರೆ. ಸಮುದ್ರದ ಮೂಲಕ ಹಾಗೂ ಭೂಮಾರ್ಗಗಳ ಮೂಲಕ ಈ ಸಮುದಾಯಗಳು ಮಂಗಳೂರು, ಮದ್ರಾಸ್, ಗಾಂಧಿಧಾಮ, ಮುಂಬಯಿ, ಕಛ್ ಬಂದರು ಪಟ್ಟಣಗಳೊಂದಿಗೆ ವ್ಯಾಪಾರ ಸಂಪರ್ಕವನ್ನು ಹೊಂದಿವೆ.

ಈ ನಗರವು ದೇಶದ ವಿವಿಧ ಭಾಗಗಳಿಗೆ ಮತ್ತು ವಿದೇಶಗಳಿಗೆ ಸರಕುಗಳನ್ನು ರಫ್ತು ಮಾಡುತ್ತದೆ. ಮತ್ತು ಆಮದುಮಾಡಿಕೊಳ್ಳುತ್ತದೆ. ಈ ಪ್ರದೇಶದಿಂದ ಮುಖ್ಯವಾಗಿ ಕಬ್ಬಿಣದ ಅದಿರು, ಮೀನಿನ

ಉತ್ಪಾದನೆಗಳು, ಕುರಿಯಚರ್ಮ, ಪ್ರಾಣಿಗಳ ಚರ್ಮ, ಎಲುಬುಗಳು, ಬೀಡಿಗಳು, ಸಕ್ಕರೆ, ಭತ್ತ, ಬಾಳೆಹಣ್ಣು, ಬಟ್ಟೆಗಳು ಇನ್ನಿತರ ಸರಕುಗಳನ್ನು ದೇಶ-ವಿದೇಶಗಳಿಗೆ ರಫ್ತಾಗುತ್ತದೆ. ಅದೆ ರೀತಿಯಾಗಿ ಈ ಸಮುದಾಯಗಳು ತಮ್ಮ ವ್ಯಾಪಾರಕ್ಕೆ ಸಂಬಂಧಿಸಿದ ಮತ್ತು ಇನ್ನಿತರ ಸರಕುಗಳನ್ನು ದೇಶದ ಇತರ ಭಾಗಗಳಿಂದ, ವಿದೇಶಗಳಿಂದ ತರಿಸಿಕೊಳ್ಳುತ್ತಾರೆ. ಬಟ್ಟೆ ವ್ಯಾಪಾರಕ್ಕೆ ಸಂಬಂಧಿಸಿದಂತೆ ವಿವಿಧ ಮಾದರಿಯ ಬಟ್ಟೆಗಳನ್ನು ಗುಜರಾತ್, ತಮಿಳುನಾಡು ಇನ್ನಿತರ ಪ್ರದೇಶಗಳಿಂದ ತರಿಸಿಕೊಳ್ಳುತ್ತಾರೆ. ಧವಸಧಾನ್ಯಗಳನ್ನು ಮತ್ತು ಕಿರಾಣಿ ಅಂಗಡಿಗಳಿಗೆ ಬೇಕಾದ ಸರಕುಗಳನ್ನು ಕರ್ನಾಟಕದ ವಿವಿಧ ಪ್ರದೇಶಗಳಿಂದ ಮತ್ತು ಆಂಧ್ರ, ಮಹಾರಾಷ್ಟ್ರ, ತಮಿಳುನಾಡುಗಳಿಂದ ತರಿಸಿಕೊಳ್ಳುತ್ತಾರೆ. ಆಭರಣಗಳ ವ್ಯಾಪಾರಕ್ಕೆ ಸಂಬಂಧಿಸಿದಂತೆ ಆಭರಣಗಳನ್ನು ಆಂಧ್ರ, ತಮಿಳುನಾಡು, ಗಂಗಾವತಿಗಳಿಂದ ತರಿಸಿಕೊಳ್ಳುತ್ತಾರೆ. ರಸಗೊಬ್ಬರವನ್ನು ತಮಿಳುನಾಡು, ಆಂಧ್ರದಿಂದ ತರಿಸಿಕೊಳ್ಳುತ್ತಾರೆ. ನಗರದಲ್ಲಿ ಚರ್ಮ ಮತ್ತು ಬುಟ್ಟಿ ತಯಾರಿಸುವ ಲಬೇರರು ಬುಟ್ಟಿ ತಯಾರಿಕೆಗೆ ಬೇಕಾದ ಕಚ್ಚಾ ಸರಕುಗಳನ್ನು ಮಧ್ಯಪ್ರದೇಶ ಮತ್ತು ರಾಜ್ಯದ ಇತರ ಭಾಗಗಳಿಂದ ತರಿಸಿಕೊಳ್ಳುತ್ತಾರೆ. ಮೇದಾರರು ತಮಗೆ ಬೇಕಾದ ಕಚ್ಚಾ ಸರಕುಗಳನ್ನು ಮಲೆನಾಡಿನಿಂದ ತರಿಸಿಕೊಳ್ಳುತ್ತಾರೆ. ಕಟ್ಟಿಗೆ ವ್ಯಾಪಾರಿಗಳು ಬರ್ಮಾ, ಬ್ರೆಜಿಲ್, ನೈಜೀರಿಯಾಗಳಿಂದ ಕಟ್ಟಿಗೆಗಳನ್ನು ತರಿಸಿಕೊಳ್ಳುತ್ತಾರೆ. ಕಾರು ಉದ್ಯಮಿಗಳು ದೇಶದ ವಿವಿಧ ಭಾಗಗಳಿಂದ ತರಿಸಿಕೊಳ್ಳುತ್ತಾರೆ. ಗಣಿಗಾರಿಕೆಗೆ ಸಂಬಂಧಿಸಿದ ಯಂತ್ರೋಪಕರಣಗಳನ್ನು ವಿದೇಶಗಳಿಂದ ತರಿಸಿಕೊಳ್ಳುತ್ತಾರೆ. ಈ ರೀತಿಯಾಗಿ ವಿದೇಶಿಗಳಿಂದ, ದೇಶದ, ರಾಜ್ಯದ ಇತರ ಭಾಗಗಳಿಂದ ಅನೇಕ ಸರಕುಗಳನ್ನು ತರಿಸಿಕೊಂಡು ತಯಾರಿಸಿ ಸ್ಥಳೀಯವಾಗಿ ಮಾರಾಟಮಾಡುತ್ತಾರೆ.[೪೬]

ಈ ವರ್ತಕ ಸಮುದಾಯಗಳು ಕೇವಲ ವ್ಯಾಪಾರವನ್ನೇ ಮಾಡದೆ ಈ ನಗರದಲ್ಲಿ ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡು ಬೆಳವಣಿಗೆ ಹೊಂದಲು ಅನೇಕ ಸಂಘ ಸಂಸ್ಥೆಗಳನ್ನು ಸ್ಥಾಪಿಸಿಕೊಂಡಿದ್ದಾರೆ. ಈ ನಗರದಲ್ಲಿ ವೃತ್ತಿಗೆ ಸಂಬಂಧಿಸಿದ ಅನೇಕ ಸಂಘಗಳಿವೆ. ಬಟ್ಟೆ ವ್ಯಾಪಾರಿಗಳ ವರ್ತಕರ ಸಂಘ, ಕಿರಾಣಿ ವರ್ತಕರ ಸಂಘ, ಎಲೆಕ್ಟ್ರಾನಿಕ್ ವಸ್ತುಗಳ ವ್ಯಾಪಾರಿಗಳ ಸಂಘ, ಆಭರಣ ವ್ಯಾಪಾರಿಗಳ ಸಂಘ, ತರಕಾರಿ ಮಾರಾಟಗಾರ ಸಂಘ, ಔಷಧಿ ಅಂಗಡಿಗಳ ಮಾಲಿಕರ ಸಂಘ, ಗಣಿ ಉದ್ಯಮಿಗಳ ಸಂಘ, ಮಾಂಸ ಮಾರಾಟಗಾರರ ಸಂಘ, ಇನ್ನಿತರ ಸಣ್ಣ ಪುಟ್ಟ ವರ್ತಕರ ಸಂಘಗಳಿವೆ. ಈ ವರ್ತಕ ಸಂಘಗಳು ಅನೇಕ ಉದ್ದೇಶಗಳನ್ನು ಇಟ್ಟುಕೊಂಡಿರುತ್ತವೆ. ಮುಖ್ಯವಾಗಿ ವರ್ತಕರ ಹಿತ ಚಿಂತನೆ, ಅವರ ವ್ಯಾಪಾರ ವಾಣಿಜ್ಯಗಳ ವಿಷಯಕ್ಕೆ ಸಂಬಂಧಸಿದ ವಿಷಯಗಳ ಕುರಿತು ಚರ್ಚೆ ಮಾಡುವುದು ಹಾಗೂ ನೀತಿಗಳನ್ನು ರೂಪಿಸುವುದು.

ವೃತ್ತಿಗೆ ಸಂಬಂಧಿಸಿದಂತೆ ಅಲ್ಲದೇ ಅವರು ತಮ್ಮ ಸಮುದಾಯಕ್ಕೆ ಸಂಬಂಧಿಸಿದಂತೆ ಕೂಡ ಅನೇಕ ಸಂಘಗಳನ್ನು ರಚಿಸಿಕೊಂಡಿದ್ದಾರೆ. ಆರ್ಯವೈಶ್ಯ ಸಂಘ, ವಾಸವಿ ಸಂಘ, ಬ್ರಾಹ್ಮಣರ ಸಂಘ, ಮುಸ್ಲಿಮ ಸಂಘ, ಹಂಜಮಾನ ಸಂಘ, ಕರ್ನಾಟಕ ಯೂತ್ ಮುಸ್ಲಿಮ ಸಂಘ ಇನ್ನಿತರ ಸಣ್ಣ ಪುಟ್ಟ ಸಂಘಗಳು ಈ ನಗರದಲ್ಲಿವೆ.[೪೭]

ರಾಜಪ್ರಭುತ್ವ ಮತ್ತು ವಸಾಹತು ಪ್ರಭುತ್ವದ ಕಾಲಾವದಿಗಿಂತ ಪ್ರಜಾಪ್ರಭುತ್ವ ಸಂದರ್ಭದಲ್ಲಿ ವರ್ತಕರು ಹೆಚ್ಚಿನ ಸೌಲಭ್ಯವನ್ನು ಪಡೆಯುತ್ತಿದ್ದಾರೆ. ಸರಕಾರವು ಆರ್ಥಿಕ ಸಹಾಯವನ್ನು ಮಾಡುವುದು, ಮಾರುಕಟ್ಟೆಯನ್ನು ಒದಗಿಸುವುದು, ಬೆಲೆಗಳನ್ನು ನಿಗದಿಪಡಿಸುವುದು, ಸರಕಾರಿ ಸುಂಕವನ್ನು ವಿಧಿಸುವುದು, ನಷ್ಟವನ್ನು ಭರ್ತಿಮಾಡಿಕೊಳ್ಳಲು ಸರಕುಗಳನ್ನು ವಿಮೆಗೆ ಒಳಪಡಿಸುವುದು, ಗ್ರಾಹಕರಿಗೆ ನ್ಯಾಯ ಒದಗಿಸಿಕೊಡುವುದು, ಗ್ರಾಹಕರಿಗೆ ಉತ್ತಮ ಗುಣಮಟ್ಟದ ಸರಕುಗಳನ್ನು ಒದಗಿಸುವಂತೆ ಎಚ್ಚರವಹಿಸುವುದು, ವರ್ತಕರಿಗೆ ತೆರಿಗೆಯು ಹೊರೆಯಾಗದಂತೆ. ವ್ಯಾಟ್ ತೆರಿಗೆಯನ್ನು ಜಾರಿಗೆ ತಂದಿರುವುದು ಈ ಮುಂತಾದವು ವರ್ತಕರಿಗೆ ಅನುಕೂಲಗಳಾಗಿವೆ.

ನಗರದಲ್ಲಿ ಅನೇಕ ವರ್ತಕ ಸಮುದಾಯಗಳು ವಾಸಿಸುತ್ತಿದ್ದು ನಗರದ ವ್ಯಾಪ್ತಿಯು ವಿಸ್ತಾರವಾಗಿದೆ. ಆ ಮೂಲಕ ನಗರೀಕರಣ ಪ್ರಕ್ರಿಯೆಯು ಚುರುಕುಗೊಂಡಿದೆ. ಈ ವರ್ತಕ ಸಮುದಾಯಗಳು ತಮ್ಮದೇ ಆದ ಪ್ರತ್ಯೇಕ ಬೀದಿಗಳಲ್ಲಿ ವಾಸವಾಗಿದ್ದಾರೆ. ಅಲ್ಲಿ ವಸತಿ ಕಟ್ಟಡಗಳು, ಧಾರ್ಮಿಕ ಕಟ್ಟಡಗಳು ಮತ್ತು ವ್ಯಾಪಾರದ ಮಳಿಗೆಗಳನ್ನು ಹೊಂದಿವೆ.

ನಗರದಲ್ಲಿ ಅನೇಕ ವರ್ತಕ ಸಮುದಾಯಗಳು ನೆಲೆನಿಂತಿದ್ದು ಈ ಸಮುದಾಯಗಳು ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ, ಶೈಕ್ಷಣಿಕ, ಆರೋಗ್ಯ, ಧಾರ್ಮಿಕವಾಗಿ, ಸಾರ್ವಜನಿಕ ಕಾರ್ಯಗಳು ಈ ಎಲ್ಲ ಮೇಲಿನ ಅಂಶಗಳಿಂದ ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡು, ಬೆಳವಣಿಗೆ ಹೊಂದುತ್ತಿವೆ. ನಗರದ ಬೆಳವಣಿಗೆಯಲ್ಲಿ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಭಾಗಿಯಾಗಿವೆ. ಈ ಸಮುದಾಯಗಳ ಹಲವಾರು ಆಚರಣೆ, ನಂಬಿಕೆಗಳಿಂದ ನಗರದಲ್ಲಿ ಹೊಸ ಸಂಸ್ಕೃತಿಯ ಉಗಮವಾಗುತ್ತಿದೆ.[೮೮]

ರಾಜಪ್ರಭುತ್ವದ ಅವಧಿಯಲ್ಲಿದ್ದಂತೆ ಪ್ರಜಾಪ್ರಭುತ್ವದ ಕಾಲಾವಧಿಯಲ್ಲಿಯೂ ಸಂತೆಗಳಿವೆ. ಸಂತೆಗಳು ವಾರಕ್ಕೊಮ್ಮೆ ಸೇರುತ್ತವೆ. ಅವುಗಳನ್ನು ವಾರದ ಸಂತೆ ಎನ್ನುವರು. ಈ ನಗರದಲ್ಲಿ ನಗರ ಸಭೆ ಕಛೇರಿ ಮುಂದೆ ಇರುವ ಬಯಲು ಜಾಗದ ಮುಂದೆ ಪ್ರತಿ ಭಾನುವಾರ ಸಂತೆ ನಡೆಯುತ್ತದೆ. ಇಲ್ಲಿ ಮುಖ್ಯವಾಗಿ ಧವಸ ಧಾನ್ಯಗಳು, ತರಕಾರಿಗಳು, ಹಣ್ಣು ಹಂಪಲು, ಕೃಷಿ ಉಪಕರಣಗಳು, ಗೃಹೋಪಯೋಗಿ ವಸ್ತುಗಳು, ಬಿದುರಿನ ಉತ್ಪನ್ನಗಳು, ಸಾಂಬಾರ ಪದಾರ್ಥಗಳು, ಮಾವಿನ ಉತ್ಪನ್ನಗಳು, ಚರ್ಮದ ಉತ್ಪನ್ನಗಳು, ಜವಳಿ ಉತ್ಪನ್ನಗಳು ಇನ್ನಿತರ ಸರಕು ಸಾಮಗ್ರಿಗಳು ಶೇಖರಣೆಯಾಗಿ ಮಾರಾಟಗೊಳ್ಳುತ್ತವೆ. ಈ ಸರಕುಗಳು ರಾಜ್ಯದ ಇತರೆ ಜಿಲ್ಲೆಗಳಿಂದ ಸರಬರಾಜಾಗುತ್ತವೆ. ಈ ಸಂತೆಯಲ್ಲಿ ಮುಖ್ಯವಾಗಿ ಗಣಿಕೂಲಿ ಕಾರ್ಮಿಕರು, ಸರಹದ್ದಿನ ಹಳ್ಳಿಯ ನಿವಾಸಿಗಳು, ಸ್ಥಳೀಯ ಜನರು ಕೊಳ್ಳುವವರಾಗಿದ್ದಾರೆ. ಜಾನುವಾರುಗಳ ಸಂತೆಯು ಎ.ಪಿ.ಎಂ.ಸಿ. ಆವರಣದಲ್ಲಿ ಪ್ರತಿ ಶನಿವಾರ ನಡೆಯುತ್ತದೆ. ಇಲ್ಲಿ ಎತ್ತು, ಎಮ್ಮೆ, ಆಕಳು, ಹೋರಿ ಕರು ಇತರೆ ಪ್ರಾಣಿಗಳನ್ನು ಮಾರಾಟ ಮಾಡುತ್ತಾರೆ. ಸದರಿ ಪ್ರಾಣಿಗಳನ್ನು ನಗರದಿಂದಲೂ ಮತ್ತು ಸುತ್ತ

ಮುತ್ತಲಿನ ಹಳ್ಳಿಗಳಿಂದ ಮಾರಾಟಗಾರರು, ಮಧ್ಯವರ್ತಿಗಳು ತಂದು ಗ್ರಾಹಕರಿಗೆ ಮಾರುತ್ತಾರೆ. ಇದಕ್ಕೆ ಸುಂಕವನ್ನು ವಿಧಿಸುತ್ತಾರೆ. ಈ ಸುಂಕವನ್ನು ವ್ಯವಸಾಯೋತ್ಪನ್ನ ಸಂಸ್ಥೆಯವರು ವಿಧಿಸುತ್ತಾರೆ.

ನಗರದಲ್ಲಿ ವರ್ಷದಲ್ಲಿ ವಿವಿಧ ಸ್ಥಳಗಳಲ್ಲಿ ಜಾತ್ರೆಗಳು ನಡೆಯುತ್ತವೆ. ನೆಹರೂ ಕಾಲೋನಿಯಲ್ಲಿ ಶ್ರೀ ಸಣ್ಣಕ್ಕಿ ವೀರಭದ್ರೇಶ್ವರ ದೇವರ ಜಾತ್ರೆ, ಮುಖ್ಯ ಬಜಾರನಲ್ಲಿ ಶ್ರೀ ವಡಕರಾಯ ಸ್ವಾಮಿ ಜಾತ್ರೆ, ಚಿತ್ತವಾಡ್ಗಿಯಲ್ಲಿ ಶ್ರೀ ಚಿತ್ತವಾಡ್ಗಿಯಪ್ಪ ದೇವರ ಜಾತ್ರೆ, ಅನಂತಶಯನಗುಡಿ ಶ್ರೀ ಆಂಜನೇಯ್ಯಸ್ವಾಮಿ ದೇವಸ್ಥಾನದ ಜಾತ್ರೆ ನಡೆಯುತ್ತವೆ. ಇಲ್ಲಿ ಹಣ್ಣು, ಕಾಯಿ, ಹೂ, ಬಳೆ, ಮಂಡಾಳು, ಸಿಹಿತಿನಿಸುಗಳು, ಆಟಿಕೆ ಸಾಮಾನುಗಳು, ಪೂಜಾ ಸಾಮಾನುಗಳು, ಗೃಹಬಳಕೆಯ ಸಾಮಾನುಗಳು ಇನ್ನಿತರ ವಸ್ತುಗಳನ್ನು ನಗರದ ಮತ್ತು ಸುತ್ತಮುತ್ತಲಿನ ವ್ಯಾಪಾರಸ್ಥರು ತಂದು ಅತಿ ಕಡಿಮೆ ಅವಧಿಯಲ್ಲಿ ಮಾರಾಟ ಮಾಡಿಕೊಂಡು ಹೋಗುತ್ತಾರೆ. ಇವರಲ್ಲಿ ಕೆಲವರು ತಾತ್ಕಾಲಿಕ ವ್ಯಾಪಾರಿಗಳು.[೪೯]

ಈ ರೀತಿಯಾಗಿ ರಾಜಪ್ರಭುತ್ವ, ವಸಾಹತು ಪ್ರಭುತ್ವ ಹಾಗೂ ಪ್ರಜಾಪ್ರಭುತ್ವಗಳಲ್ಲಿ ವರ್ತಕ ಸಮುದಾಯಗಳ ವ್ಯಾಪಾರದ ಸ್ವರೂಪವು ಬದಲಾವಣೆಗಳಿಂದ ಕೂಡಿತ್ತು. ವ್ಯಾಪಾರ ಮಾಡುವ ಕ್ರಮಗಳಲ್ಲಿ ಅನೇಕ ಬದಲಾವಣೆಗಳು ಆಗಿದ್ದವು. ಈ ಮೂರು ಪ್ರಭುತ್ವದ ಕಾಲದಲ್ಲಿಯೂ ವರ್ತಕರು ತಮ್ಮ ಹಿತ ಚಿಂತನೆಯ ಉದ್ದೇಶಕ್ಕಾಗಿ ಅನೇಕ ಸಂಘಗಳನ್ನು ನಿರ್ಮಿಸಿಕೊಂಡಿದ್ದರು. ಈ ವರ್ತಕ ಸಮುದಾಯಗಳ ಎಲ್ಲ ಕಾರ್ಯಚಟುವಟಿಕೆಗಳು ನಗರದ ಬೆಳವಣಿಗೆಗೆ ಪೂರಕವಾಗಿದ್ದವು. ಮೂರು ಪ್ರಭುತ್ವದ ಕಾಲಾವಧಿಯಲ್ಲಿಯೂ ವರ್ತಕರಿರ ವ್ಯಾಪಾರಕ್ಕೆ ಸಂಬಂಧಿಸಿದಂತೆ ಅನೇಕ ಸೌಲಭ್ಯ ಮತ್ತು ರಿಯಾಯತಿಗಳನ್ನು ನೀಡಲಾಗಿತ್ತು. ಆದರೆ ಬ್ರಿಟಿಷರ ಅವಧಿಯಲ್ಲಿ ಸ್ಥಳೀಯ ವರ್ತಕರಿಗಿಂತಲೂ ಬ್ರಿಟಿಷ್ ವರ್ತಕರಿಗೆ ಹೆಚ್ಚಿನ ಅನುಕೂಲಗಳಿದ್ದವು.

ಟಿಪ್ಪಣಿಗಳು

೧. ಮೋಹನ್‌ಕೃಷ್ಣ ರೈ. ಕೆ., ವಸಾಹತುಪೂರ್ವ ಕರ್ನಾಟಕದ ನಗರ ಚರಿತ್ರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬, ಪುಟ ೩೨; ಕೇಂಬ್ರಿಡ್ಜ್ ಎಕನೋಮಿಕ್ ಹಿಸ್ಟರಿ ಆಫ್ ಇಂಡಿಯಾ, ಸಂ.I, ನ್ಯೂಡೆಲ್ಲಿ, ೧೯೮೪, ಪುಟ ೧೧೭

೨. ಹಿರೇಮಠ, ಬಿ.ಆರ್., ಶಾಸನಗಳಲ್ಲಿ ಕರ್ನಾಟಕದ ವರ್ತಕರು, ಧಾರವಾಡ, ೧೯೮೬, ಪುಟ. ೭೧-೨

೩. ಸೂರ್ಯನಾಥ ಕಾಮತ್, ಕರ್ನಾಟಕ ರಾಜ್ಯ ಗೆಜೆಟಿಯರ್, (ಭಾಗ-೨) ಬೆಂಗಳೂರು, ೧೯೮೫, ಪುಟ. ೧೭೫

೪. ಮಧು ಎಂ.ಎನ್., ಹೊಸಪೇಟೆ ಪ್ರದೇಶದ ಚಾರಿತ್ರಿಕ ಅಧ್ಯಯನ, (ಎಂ.ಫಿಲ್ ನಿಬಂಧ), ೨೦೦೭, ಪುಟ. ೧೮

೫. ಮೋಹನ್‌ಕೃಷ್ಣ ರೈ.ಕೆ., ೨೦೦೬, ಪೂರ್ವೋಕ್ತ, ಪುಟ. ೪೩

೬. ಸೂರ್ಯನಾಥ ಕಾಮತ್, ೧೯೮೫, ಪೂರ್ವೋಕ್ತ, ಪುಟ.೧೭೫

೭. ರಾಮಕೃಷ್ಣ, ಕೆ.ಆರ್. (ಇತರರು), ವಿಜಯನಗರ ಅಧ್ಯಯನ (ಸಂ-೭) ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ ಹೊಸಪೇಟೆ, ೨೦೦೩, ಪುಟ ೧೦೪-೧೦೭; ನಂಜುಂಡಸ್ವಾಮಿ ಎ.ಎಸ್., ಕರ್ನಾಟಕ ಇತಿಹಾಸ, ವಿಜಯನಗರ ಇತಿಹಾಸ, ಸಮಾಜ ಪುಸ್ತಕಾಲಯ, ಶಿವಾಜಿ ಬಿ.ವಿ; ಧಾರವಾಡ ೧೯೯೯ ಪುಟ. (೧೧೦)

೮. ಷೇಕ್ ಅಲಿ. ಬಿ., ಕರ್ನಾಟಕ ಚರಿತ್ರೆ, ಸಂಪುಟ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭, ಪುಟ. ೨೧೬-೧೭

೯. ಹಿರೇಮಠ, ಬಿ.ಆರ್., ೧೯೮೬, ಪೂರ್ವೋಕ್ತ, ಪುಟ. ೭೧-೭೩; ಚಿದಾನಂದಮೂರ್ತಿ ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಬೆಂಗಳೂರು, ೧೯೬೬, ಪುಟ ೪೨೧-೨೭

೧೦. ಮಹಾದೇವ ಸಿ., ಸುಬ್ಬಣ್ಣ ರೈ., ಮಾಧವ ಪೆರಾಜೆ, ಹೊಸಪೇಟೆ ತಾಲ್ಲೂಕು ದರ್ಶನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೦೨ ಪುಟ. ೩೮೬

೧೧. ಸೂರ್ಯನಾಥ ಕಾಮತ್, ವಿಜಯನಗರ ಸಾಮ್ರಾಜ್ಯ, ಅರ್ಚನಾ ಪ್ರಕಾಶನ, ಬೆಂಗಳೂರು, ೧೯೭೩, ಪುಟ. ೨೦

೧೨. ನಾಗರಾಜು ಎಚ್.ಎಮ್. ವಿಜಯನಗರ ಇಮ್ಮಡಿದೇವರಾಯ, ಮೈಸೂರು ೧೯೯೯, ಪುಟ. ೧೬೧-೧೬೯

೧೩. ಸೂರ್ಯನಾಥ ಕಾಮತ್, ಲಕ್ಷ್ಮಣ್ ತೆಲಗಾವಿ, ಇತಿಹಾಸ ದರ್ಶನ, ಸಂಪುಟ-೨ ಪ್ರಥಮ ವಾರ್ಷಿಕ, ಸಮ್ಮೇಳನದ ವಿಶೇಷ ಸಂಚಿಕೆ ೧೯೮೭, ಪುಟ. ೨೭

೧೪. ಮೋಹನ್‌ಕೃಷ್ಣ ರೈ.ಕೆ., ೨೦೦೬ , ಪೂರ್ವೋಕ್ತ, ಪುಟ. ೮೨

೧೫. ವೆಂಕಟರತ್ನಂ, ವಿಜಯನಗರ ಸಾಮ್ರಾಜ್ಯದಲ್ಲಿ ಸ್ಥಳೀಯ ಸರ್ಕಾರ, ಕನ್ನಡ ಅಧ್ಯಯನ ಸಂಸ್ಥೆ, ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ; ಮೈಸೂರು, ೧೯೭೪; ಪುಟ ೧೨೯

೧೬. ಜಿ.ಎಸ್. ದೀಕ್ಷಿತ್, ಬಿ. ರಾಮಸ್ವಾಮಿ, ಭಾರ್ಗವಿ, ಶಿವಯ್ಯ, ಶ್ರೀ ಕೃಷ್ಣದೇವರಾಯನ ಜೀವನ ಸಾಧನೆಗಳು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು ೧೯೯೭, ಪುಟ.

೧೭. ಮಧು, ಎಂ.ಎನ್., ೨೦೦೭, ಪೂರ್ವೋಕ್ತ, ಪುಟ. ೬೮

೧೮. ಮೋಹನ್‌ಕೃಷ್ಣ ರೈ.ಕೆ., ೨೦೦೬, ಪೂರ್ವೋಕ್ತ, ಪುಟ. ೮೨

೧೯. ದೀಕ್ಷಿತ್, ೨೦೦೬, ಪೂರ್ವೋಕ್ತ, ಪುಟ. ೮೯

೨೦. ಮಧು ಎಂ.ಎನ್., ೨೦೦೭, ಪೂರ್ವೋಕ್ತ, ಪುಟ. ೬೯

೨೧. ಮಹಾದೇವ ಸಿ., ಮತ್ತಿತರರು, ೨೦೦೨, ಪೂರ್ವೋಕ್ತ, ಪುಟ. ೯೨

೨೨. ಹಿರೇಮಠ ಬಿ.ಆರ್., ೧೯೮೬, ಪೂರ್ವೋಕ್ತ, ಪುಟ. ೪೪

೨೩. ರಾಮಕೃಷ್ಣ ಕೆ.ಆರ್., (ಇತರರು) ೧೯೯೯, ಪೂರ್ವೋಕ್ತ ಪುಟ. ೧೦೭

೨೪. ಮೋಹನ್‌ಕೃಷ್ಣ ರೈ.ಕೆ. ವಸಾಹತುಶಾಹಿ ಮತ್ತು ನಗರೀಕರಣ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭, ಪುಟ. ೩೭; ಶರ್ಮ, ಜಿ.ಡಿ. ಅರ್ಬನ್ ಎಕೋನಮಿ ಇನ್ ವೆಸ್ಟರ್ನ್ ಇಂಡಿಯಾ ಇನ್ ಲೇಟ್ ಎೈಟೀನ್ತ್ ಸೆಂಚುರಿ; ಇನ್ ದಿ ಸಿಟಿ ಇನ್ ಇಂಡಿಯನ್ ಹಿಸ್ಟರಿ (ಸಂ. ಇಂದು ಭಂಗ) ದೆಹಲಿ, ೧೯೯೧, ಪುಟ. ೯೯೧-೧೦೩

೨೫. ಮಧು ಎಂ.ಎನ್., ೨೦೦೭, ಪೂರ್ವೋಕ್ತ ಪುಟ. ೮೫

೨೬. ಅದೇ, ಪುಟ. ೮೬

೨೭. ಮೋಹನ್‌ಕೃಷ್ಣ ರೈ.ಕೆ., ೨೦೦೭, ಪೂರ್ವೋಕ್ತ ಪುಟ. ೩೫

೨೮. ವಿರೂಪಾಕ್ಷಿ ಪೂಜಾರಹಳ್ಳಿ, ವಸಾಹತುಕಾಲೀನ ಬಳ್ಳಾರಿ ಜಿಲ್ಲೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨-೦೩, ಪುಟ. ೪೬

೨೯. ಮಧು ಎಂ.ಎನ್., ೨೦೦೭, ಪೂರ್ವೋಕ್ತ ಪುಟ. ೮೬

೩೦. ವಿರೂಪಾಕ್ಷಿ ಪೂಜಾರಹಳ್ಳಿ, ೨೦೦೨-೦೩, ಪೂರ್ವೋಕ್ತ, ಪುಟ. ೪೭; ಅರವಿಂದ ಸಿನ್ಹ, ಪೊಲಿಟಿಕಲ್ ಟ್ರೇಟ್, ಮನೋಹರ ಪಬ್ಲಿಕೇಷನ್, ನ್ಯೂಡೆಲ್ಲಿ, ೨೦೦೨, ೧೬೨-೧೭೦

೩೧. ಮೋಹನ್‌ಕೃಷ್ಣ ರೈ.ಕೆ., ೨೦೦೭, ಪೂರ್ವೋಕ್ತ ಪುಟ. ೩೫

೩೨. ವಿರೂಪಾಕ್ಷಿ ಪೂಜಾರಹಳ್ಳಿ, ೨೦೦೨-೦೩, ಪೂರ್ವೋಕ್ತ, ಪುಟ. ೪೭

೩೩. ಮಧು ಎಂ.ಎನ್., ೨೦೦೭, ಪೂರ್ವೋಕ್ತ, ಪುಟ. ೮೬

೩೪. ವಿರೂಪಾಕ್ಷಿ ಪೂಜಾರಹಳ್ಳಿ, ೨೦೦೨-೦೩, ಪೂರ್ವೋಕ್ತ ಪುಟ. ೪೮

೩೫. ಹಿರೇಮಠ, ಬಿ.ಆರ್., ಶಾಸನಗಳಲ್ಲಿ ಕರ್ನಾಟಕದ ವರ್ತಕರು, ಧಾರವಾಡ, ೧೯೮೬, ಪುಟ.೧೨-೧೬; ಮೋಹನ್‌ಕೃಷ್ಣ ರೈ.ಕೆ., ೨೦೦೭, ಪೂರ್ವೋಕ್ತ, ಪುಟ.೩೭-೩೮

೩೬. ಲಕ್ಷ್ಮಣ್ ತೆಲಗಾವಿ, ಚರಿತ್ರೆ ಅಧ್ಯಯನ, ಸಂಪುಟ - ೧, ಸಂಚಿಕೆ - ೨, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೬, ಪುಟ ೫೦

೩೭. ರಣಬೀರ್ ಚಕ್ರವರ್ತಿ, ಟ್ರೇಡ್ ಆ್ಯಂಟ್ ಟ್ರೇಡರ್ಸ್ ಇನ್ ಅರ್ಲಿ ಇಂಡಿಯನ್ ಸೊಸೈಟಿ, ಮನೋಹರ್ ಪಬ್ಲಿಕೇಷನ್, ನವದೆಹಲಿ, ೨೦೦೨-೦೭, ಪುಟ ೯೨-೧೦೨ ಅದೇ ೪೧ ಮೋಹನ್‌ಕೃಷ್ಣ ರೈ. ಕೆ., ೨೦೦೭, ಪೂರ್ವೋಕ್ತ, ಪುಟ.೪೧

೩೮. ಷೇಕ್ ಅಲಿ ಬಿ., ಕರ್ನಾಟಕ ಚರಿತ್ರೆ (ಸಂಪುಟ - ೬), ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭, ಪುಟ. ೨೦೬-೨೦೭.

೩೯. ಬಳ್ಳಾರಿ ಜಿಲ್ಲಾ ಗೆಜೆಟಿಯರ್, ಮೈಸೂರು ಸರ್ಕಾರ, ಬೆಂಗಳೂರು, ೧೯೭೨, ಪುಟ. ೨೭೧

೪೦. ಷೇಕ್ ಅಲಿ, ಬಿ., ೧೯೯೭, ಪೂರ್ವೋಕ್ತ, ಪುಟ. ೨೨೬

೪೧. ಬಳ್ಳಾರಿ ಜಿಲ್ಲಾ ಗೆಜೆಟಿಯರ್, ಪೂರ್ವೋಕ್ತ, ಪುಟ. ೧೩೬

೪೨. ಷೇಕ್ ಅಲಿ, ಬಿ., ೧೯೯೭, ಪೂರ್ವೋಕ್ತ ಪುಟ. ೨೨೫

೪೩. ಶರ್ಮ ಜಿ.ಡಿ., ೧೯೯೧, ಪೂರ್ವೋಕ್ತ, ಪುಟ. ೧೦೪-೧೦೭

೪೪. ಮೋಹನ್‌ಕೃಷ್ಣ ರೈ.ಕೆ., ೨೦೦೭, ಪೂರ್ವೋಕ್ತ, ಪುಟ. ೧೩

೪೫ ಮೌಖಿಕ ಸಂದರ್ಶನ, ಕಾಂತಿಲಾಲ್, ಗುಜರಾತ್ ಸಮುದಾಯದ ಮುಖಂಡರು, ೦೮.೦೮.೨೦೦೯, ಹೊಸಪೇಟೆ

೪೬. ಮೌಖಿಕ ಸಂದರ್ಶನ, ಪಿ. ಸತ್ಯನಾರಾಯಣ, ಸಮಾಜ ಸೇವಕರು, ೦೪.೦೮.೨೦೦೯, ಹೊಸಪೇಟೆ

೪೭. ಮೌಖಿಕ ಸಂದರ್ಶನ, ಪಾಂಡುರಂಗ ಶೆಟ್ಟಿ, ವಾಣಿಜ್ಯ ಮಂಡಳಿಯ ಅಧ್ಯಕ್ಷರು, ೨೫.೦೭.೨೦೦೯, ಹೊಸಪೇಟೆ

೪೮. ಮೌಖಿಕ ಸಂದರ್ಶನ, ಭೂಪಾಲ ರಾಘವೇಂದ್ರ ಶೆಟ್ಟಿ, ಶೆಟ್ಟಿ ಸಮುದಾಯದ ಮುಖಂಡರು, ೧೮.೦೭.೨೦೦೯, ಹೊಸಪೇಟೆ.

೪೯. ಮೌಖಿಕ ಸಂದರ್ಶನ, ವಿ. ಸತ್ಯನಾರಾಯಣ, ೨೦೦೯, ಹೊಸಪೇಟೆ

• • •

ಅಧ್ಯಾಯ ಐದು

ವರ್ತಕ ಸಮುದಾಯಗಳ ಅಸ್ತಿತ್ವ ಹಾಗೂ ಬೆಳವಣಿಗೆ

೫.೧. ಸಂಘ-ಸಂಸ್ಥೆಗಳು

೫.೨. ವ್ಯಾಪಾರ-ವಾಣಿಜ್ಯ

೫.೩. ಶಿಕ್ಷಣ

೫.೪. ಆರೋಗ್ಯ

೫.೫. ಧಾರ್ಮಿಕ ನಂಬಿಕೆಗಳು ಹಾಗೂ ಆಚರಣೆಗಳು

೫.೬. ಸಮುದಾಯಗಳ ಅಂತರ್ ಸಂಬಂಧಗಳು ಹಾಗೂ ಬಿಕಟ್ಟುಗಳು

ಅಧ್ಯಾಯ ಐದು

ವರ್ತಕ ಸಮುದಾಯಗಳ ಅಸ್ತಿತ್ವ ಹಾಗೂ ಬೆಳವಣಿಗ

ಹೊಸಪೇಟೆ ನಗರದಲ್ಲಿ ನೆಲೆಸಿರುವ ಅನೇಕ ವರ್ತಕ ಸಮುದಾಯಗಳು ವ್ಯಾಪಾರದ ಜೊತೆಗೆ ಇನ್ನಿತರ ಚಟುವಟಿಕೆಗಳಲ್ಲಿಯೂ ತೊಡಗಿಸಿಕೊಂಡಿವೆ. ಈ ವರ್ತಕ ಸಮುದಾಯಗಳ ವ್ಯಾಪಾರ, ವಾಣಿಜ್ಯ, ಸಂಘ-ಸಂಸ್ಥೆ, ಶೈಕ್ಷಣಿಕ ಕಾರ್ಯಗಳು, ಧಾರ್ಮಿಕ ಆಚರಣೆಗಳು, ಸಾಂಸ್ಕೃತಿಕ ಚಟುವಟಿಕೆಗಳಿಂದ ಹೊಸಪೇಟೆ ನಗರವು ಒಂದು ಹೊಸ ಸ್ವರೂಪವನ್ನು ಪಡೆದುಕೊಂಡಿದೆ. ಇವರು ನಗರದಲ್ಲಿ ನೂತನ ವ್ಯಾಪಾರ ಪದ್ಧತಿಗಳನ್ನು ತರುವುದರ ಜೊತೆಗೆ ಹೊಸ ಸಂಸ್ಕೃತಿಯ ಉಗಮಕ್ಕೂ ಕಾರಣರಾಗಿದ್ದಾರೆ.

ವರ್ತಕ ಸಮುದಾಯಗಳು ನಗರದ ಬೇರೆ ಬೇರೆ ಭಾಗಗಳಲ್ಲಿ ನೆಲೆಸಿದ್ದು, ಆ ಮೂಲಕ ನಗರದ ವಿಸ್ತರಣೆ ಹಾಗೂ ಬೆಳವಣಿಗೆಗೆ ಪೂರಕವಾದ ವಾತಾವರಣವನ್ನು ಕಲ್ಪಿಸಿದವು. ವರ್ತಕ ಸಮುದಾಯಗಳು ನಗರದ ಬೆಳವಣಿಗೆಯಲ್ಲಿ ಭಾಗಿಯಾಗುವುದರ ಜೊತೆಗೆ ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ಅನೇಕ ಸಂಘ- ಸಂಸ್ಥೆಗಳನ್ನು ಹುಟ್ಟುಹಾಕಿವೆ. ಈ ಸಮುದಾಯಗಳು ನಗರದಲ್ಲಿ ಪ್ರತ್ಯೇಕವಾಗಿ ತಮ್ಮದೇ ಆದ ನೆಲೆಗಳನ್ನು ಕಂಡುಕೊಂಡರೂ ಪರಸ್ಪರ ಸೌಹಾರ್ದಯುತವಾದ ಸಂಬಂಧವನ್ನು ಹೊಂದಿವೆ. ಇದು ನಗರದ ಬೆಳವಣಿಗೆಗೆ ಪೂರಕವಾಗಿ ಪರಿಣಮಿಸಿ ನಗರ ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳುವುದಕ್ಕೆ ಸಹಕಾರಿಯಾಯಿತು.

೫.೧. ಸಂಘ-ಸಂಸ್ಥೆಗಳು

ವೃತ್ತಿಗಳು ಉಗಮವಾದ ನಂತರವೇ ಸಂಘಗಳ ರಚನಾಕಾರ್ಯವು ಪ್ರಾರಂಭವಾಗುವುದು. ಆದರೆ ನಗರದಲ್ಲಿರುವ ಎಲ್ಲ ವೃತ್ತಿಗಳು ಸಂಘಗಳನ್ನು ಹೊಂದಿರುವುದಿಲ್ಲ. ಕೆಲವೊಂದು ಪ್ರಮುಖ ವೃತ್ತಿಯವರು ಮಾತ್ರ ಸಂಘಗಳನ್ನು ರಚಿಸಿಕೊಂಡಿದ್ದಾರೆ. ಹೀಗೆ ತಮ್ಮ ಸಮಾಜದ ಅಥವಾ ಸಮುದಾಯದ ಜನರೊಂದಿಗೆ ಮತ್ತು ವೃತ್ತಿಗಳಿಗೆ ಸಂಬಂಧಿಸಿದಂತೆ ಅನೇಕ ಸಂಘ-ಸಂಸ್ಥೆಗಳನ್ನು ಕಟ್ಟಿಕೊಂಡಿದ್ದಾರೆ. ಈ ಸಂಘ-ಸಂಸ್ಥೆಗಳಿಗೆ ಪ್ರಾಚೀನವಾದ ಇತಿಹಾಸವಿದೆ. ಪ್ರಾಚೀನ ಕರ್ನಾಟಕದಲ್ಲಿ ಅನೇಕ ಸಂಘ-ಸಂಸ್ಥೆಗಳು ಇದ್ದವು.

ಈ ಸಂಘ-ಸಂಸ್ಥೆಗಳು ಕೆಲವೊಂದು ಉದ್ದೇಶಗಳ್ನು ಇಟ್ಟುಕೊಂಡು ಉಗಮವಾದಂಥವು. ಅದೇ ರೀತಿಯಾಗಿ ಹೊಸಪೇಟೆಯಲ್ಲಿನ ಅನೇಕ ವರ್ತಕ ಸಮುದಾಯಗಳು ಅನೇಕ ಸಂಘ-ಸಂಸ್ಥೆಗಳನ್ನು ಸ್ಥಾಪಿಸಿಕೊಂಡಿದ್ದಾರೆ. ಹೊಸಪೇಟೆಯಲ್ಲಿ ಇರುವ ವರ್ತಕ ಸಂಘಗಳೆಂದರೆ ಬಟ್ಟೆ ವ್ಯಾಪಾರಿಗಳು, ಕಿರಾಣಿ ವರ್ತಕರು, ಎಲೆಕ್ಟ್ರಾನಿಕ್ ವಸ್ತುಗಳ ವ್ಯಾಪಾರಿಗಳು, ಆಭರಣ ವ್ಯಾಪಾರಿಗಳು, ಸಿನಿಮಾ ಮಾಲಿಕರು, ಪುಟ್‌ಪಾತ್ ವ್ಯಾಪಾರಿಗಳು, ತರಕಾರಿ ಮಾರಾಟಗಾರರು, ಔಷಧಿ ಅಂಗಡಿಗಳ ಮಾಲಿಕರು, ಗಣಿ ಉದ್ಯಮಗಳು, ಮಾಂಸ ಮಾರಾಟಗಾರು, ಹಾಗೂ ಇನ್ನಿತರೆ ಸಣ್ಣ ಪುಟ್ಟ ವರ್ತಕರು ರಚಿಸಿಕೊಂಡ ಸಂಘಗಳು. ಈ ವರ್ತಕರು ಕೇವಲ ವೃತ್ತಿಗೆ ಮಾತ್ರವಲ್ಲದೆ ತಮ್ಮ ಧರ್ಮಗಳಿಗೆ ಮತ್ತು ತಮ್ಮ ಸಮುದಾಯಗಳಿಗೆ ಸಂಬಂಧಿಸಿದಂತೆಯೂ ಕೆಲವೊಂದು ಸಂಘಗಳನ್ನು ನಿರ್ಮಿಸಿಕೊಂಡಿದ್ದಾರೆ. ಸಂಘ ಸಂಸ್ಥೆಗಳು ಕೆಲವೊಂದು ಉದ್ದೇಶಗಳನ್ನು ಇಟ್ಟುಕೊಂಡಿರುತ್ತವೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ.[೨]

೧. ವರ್ತಕರ ಹಿತ ಚಿಂತನೆ, ಅವರ ವ್ಯಾಪಾರ-ವಾಣಿಜ್ಯಗಳ ವಿಷಯಕ್ಕೆ ಸಂಬಂಧಿಸಿದಂತೆ ಚರ್ಚೆ ಮಾಡುವುದು, ನೀತಿಗಳನ್ನು ರೂಪಿಸುವುದು.

೨. ವರ್ತಕರನ್ನು ರಕ್ಷಣೆ ಮಾಡುವುದು.

೩. ಸರಕಾರದ ವತಿಯಿಂದ ಆಗುವ ತೊಂದರೆಯನ್ನು ನಿವಾರಿಸಿಕೊಳ್ಳಲು ಒಗ್ಗಾಟ್ಟಾಗಿ ಹೋರಾಟ ಮಾಡುವುದು ಮತ್ತು ಸರಕಾರದಿಂದ ತಮಗೆ ಒದಗಬೇಕಾದ ಸೌಲಭ್ಯಗಳನ್ನು ಪಡೆದುಕೊಳ್ಳುವುದು.

೪. ಬ್ಯಾಂಕುಗಳಿಂದ ಆರ್ಥಿಕ ಸಹಾಯವನ್ನು ಪಡೆದುಕೊಳ್ಳುವುದು.

೫. ಸರಕಾರಿ ಅಧಿಕಾರಿಗಳಿಂದ ಆಗುವ ತೊಂದರೆಗಳ ವಿರುದ್ಧ ಹೋರಾಡವುದು.

೬. ತಮ್ಮ ಉದ್ಯಮಕ್ಕೆ ಬೇಕಾಗುವ ಕಚ್ಚಾ ಮಾಲನ್ನು ಸಂಘದ ವತಿಯಿಂದ ಒಟ್ಟಿಗೆ ತರಿಸಿಕೊಂಡು ವಿಲೇವಾರಿ ಮಾಡಿಕೊಳ್ಳುವುದು.

೭. ಉದ್ಯಮಿಗಳಿಗೆ ಆಗುವ ನಷ್ಟವನ್ನು ತಪ್ಪಿಸಲು ಪ್ರಯತ್ನಿಸುವುದು.

೮. ಉದ್ಯಮದ ತೊಡಕುಗಳನ್ನು ಕಾನೂನಿನ ಮೂಲಕ ಪರಿಹರಿಸಿಕೊಳ್ಳವುದು.

ಹೊಸಪೇಟೆ ನಗರದಲ್ಲಿರುವ ಎಲ್ಲ ವರ್ತಕ ಸಂಘಗಳ ಸ್ವರೂಪವು ಒಂದೇ ರೀತಿಯಾಗಿರುತ್ತದೆ. ಅದು ಈ ಕೆಳಗಿನಂತಿದೆ. ಅಧ್ಯಕ್ಷರು, ಉಪಾಧ್ಯಕ್ಷರು, ಕಾರ್ಯದರ್ಶಿ, ಖಜಾಂಚಿ, ನಿರ್ದೇಶಕರು, ಸದಸ್ಯರು. ಈ ಆಡಳಿತ ಮಂಡಳಿಯನ್ನು ಎಲ್ಲ ವರ್ತಕ ಸಂಘಗಳು ಹೊಂದಿರುತ್ತವೆ.

೧ ಹೊಸಪೇಟೆಯಲ್ಲಿ ವಾಣಿಜ್ಯ ಮಂಡಳಿಯು ೧೯೬೫ರಲ್ಲಿ ಸ್ಥಾಪನೆಯಾಯಿತು. ಈ ಮಂಡಳಿಯ ಉದ್ದೇಶ ವ್ಯಾಪಾರಸ್ಥರ ನಡುವೆ ಸಹಾಯ ಮತ್ತು ಸಹಕಾರ, ವ್ಯಾಪಾರ, ವಾಣಿಜ್ಯವನ್ನು ಕಾಪಾಡುವ, ಉತ್ತೇಜಿಸುವ, ಕೈಗಾರಿಕೆ, ಗಣಿಗಾರಿಕೆ, ಬ್ಯಾಂಕಿಂಗ್, ಸಾರಿಗೆ ಉದ್ಯಮಗಳ ಅಭಿವೃದ್ಧಿ. ಈ ಮಂಡಳಿಯವರು

ಗ್ರಂಥಾಲಯಗಳನ್ನು ಮತ್ತು ವಾಚನಾಲಯಗಳನ್ನು ಪೋಷಿಸಿದರು. ವ್ಯಾಪಾರಕ್ಕೆ ಸಂಬಂಧಿಸಿದ ವಸ್ತು ಪ್ರದರ್ಶನಗಳನ್ನು ಏರ್ಪಡಿಸುತ್ತಿದ್ದರು. ವಾರ್ಷಿಕ ಆದಾಯವು ಸದಸ್ಯರ ಸದಸ್ಯತ್ವದ ಹಣದಿಂದ ಮತ್ತು ಧನಸಹಾಯದಿಂದ ಬರುತ್ತಿತ್ತು.

ಪ್ರಸ್ತುತವಾಗಿ ಈ ವಾಣಿಜ್ಯ ಮಂಡಳಿಯಲ್ಲಿ ಪಾಂಡುರಂಗಶೆಟ್ಟಿಯವರು ಅಧ್ಯಕ್ಷರಾಗಿದ್ದಾರೆ. ಇತರೆ ಸದಸ್ಯರೆಂದರೆ ಅಶೋಕ ಜಿರೆ, ಪುಕರಾಜ್ ಚೋಪ್ರ, ನಾಗಲಿಂಗಪ್ಪ, ಭೀಮಸೇನಶೆಟ್ಟಿ, ಕೆ.ಎ.ಸತ್ತಾರಶೆಟ್, ಬಾಬುಲಾಲ ಜೈನ ಇನ್ನಿತರರು.[೨] ಬಳ್ಳಾರಿ ಜಿಲ್ಲಾ ಗಣಿ ಉದ್ಯಮಿಗಳ ಅಸೋಸಿಯೇಷನ್ ಹೊಸಪೇಟೆಯಲ್ಲಿದೆ. ಇದು ೪೨ ಸದಸ್ಯರಿಂದ ಪ್ರಾರಂಭವಾಯಿತು. ಈ ಸಂಘದ ಉದ್ದೇಶವು ಸದಸ್ಯರ ಒಳಿತಿಗಾಗಿ ಮತ್ತು ರಾಜ್ಯ, ಕೇಂದ್ರ ಸರ್ಕಾರ ಮತ್ತು ರೈಲ್ವೆ ಬೋರ್ಡ್‌ಗಳಿಂದ ಹೆಚ್ಚಿನ ಸೌಲಭ್ಯ ಮತ್ತು ರಿಯಾಯಿತಿಗಳನ್ನು ಪಡೆಯುವುದು.[೩]

೩. ಗುಜರಾತಿನ ವರ್ತಕರಲ್ಲಿ ಪಟೇಲ ಸಮುದಾಯದವರು ಅನೇಕ ಸಾಮಿಲ್‌ಗಳನ್ನು ಹೊಂದಿದ್ದಾರೆ. ಇವರು ತಮ್ಮ ವ್ಯಾಪಾರಕ್ಕೆ ಸಂಬಂಧಿಸಿದಂತೆ ಸ್ಥಳೀಯವಾಗಿ ಯಾವುದೇ ಸಂಘಟನೆಯನ್ನು ಹೊಂದಿಲ್ಲ. ಇವರು 'ಅಖಿಲ ಕರ್ನಾಟಕ ಟಿಂಬರ್ ಮರ್ಚಂಟ್ಸ್ ಅಸೋಸಿಯೇಷನ್'ನ ಸದಸ್ಯರಾಗಿದ್ದಾರೆ. ಈ ಸಂಘಟನೆಯು ವ್ಯಾಪಾರಕ್ಕೆ ಸಂಬಂಧಿಸಿದ ಸಮಸ್ಯೆಗಳ ಬಗ್ಗೆ ಚರ್ಚೆಮಾಡುತ್ತದೆ.[೪]

೪. ನಗರದಲ್ಲಿ ಬಟ್ಟೆ ಮತ್ತು ರೆಡಿಮೇಡ್ ವ್ಯಾಪಾರದ ಮಳಿಗೆಗಳನ್ನು ಹೊಂದಿರುವ ವರ್ತಕರು ಎಲ್ಲರೂ ಸೇರಿಕೊಂಡು ಕ್ರಿ.ಶ.೧೯೮೭ರಲ್ಲಿ ಹೊಸಪೇಟೆ ನಗರದಲ್ಲಿ 'ಬಟ್ಟೆ ಮತ್ತು ರೆಡಿಮೆಡ್ ವರ್ತಕರ ಅಸೋಸಿಯೇಷನ್' ಸ್ಥಾಪಿಸಿದ್ದಾರೆ. ಈ ಅಸೋಸಿಯೇಷನ್ ನಗರದ ಸ್ಟೇಶನ್ ರೋಡನಲ್ಲಿದೆ. ಪ್ರಸ್ತುತವಾಗಿ ಈ ಸಂಘದಲ್ಲಿ ೧೭೦ ಜನ ಸದಸ್ಯರಿದ್ದಾರೆ. ಈ ಸಂಘದ ಅಧ್ಯಕ್ಷರು ಎಸ್.ಜಿ.ಮಧುಕರ ರಾವ್, ಉಪಧ್ಯಾಕ್ಷರು, ಪುಷ್ಪ ಸಂಕಲ, ಕಾರ್ಯದರ್ಶಿಗಳು ಮಂಗೀಲಾಜಿ, ಜಂಟಿಕಾರ್ಯದರ್ಶಿಗಳು ಉತ್ತಮ ಚಂದ, ಖಜಾಂಚಿ ರಾಜ್ ಪುರೋಹಿತ, ನಿರ್ದೇಶಕರು ಮೀರಾಲಾಲ್, ಚಂಪಾಲಾಲ್, ಮಲ್ಲಿಕಾರ್ಜುನ ಇನ್ನಿತರರು.[೫]

ಈ ಸಂಘದ ಮುಖ್ಯ ಉದ್ದೇಶವು ವರ್ತಕರಿಗೆ ಸಂಬಂಧಿಸಿದಂತೆ ಸರಕಾರವು ಏನಾದರೂ ತೊಂದರೆಯನ್ನು ನೀಡಿದರೆ, ಸೆಲ್ಸ್ ತೆರಿಗೆಯವರು ಹೆಚ್ಚಿನ ಪ್ರಮಾಣದಲ್ಲಿ ತೆರಿಗೆಯನ್ನು ವಿಧಿಸಿದರೆ ಈ ವ್ಯಾಪಾರಿಗಳು ತಮ್ಮ ವ್ಯಾಪಾರಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಈ ಸಂಘದಲ್ಲಿ ಚರ್ಚೆಮಾಡಿ ಒಂದು ತೀರ್ಮಾನಕ್ಕೆ ಬರುತ್ತಾರೆ. ಈ ಸಂಘದ ಕಾರ್ಯವೈಖರಿಯು ತಿಂಗಳಿಗೆ ಒಂದು ಸಲ ನಿರ್ದೇಶಕರ ಸಭೆ ನಡೆಯುತ್ತದೆ. ವರ್ಷಕ್ಕೆ ಒಂದು ಸಲ ವರ್ತಕರ ಸಭೆ ನಡೆಯುತ್ತದೆ. ಇಲ್ಲಿ ಎಲ್ಲ ಲೆಕ್ಕ ಪತ್ರಗಳನ್ನು ತೋರಿಸಲಾಗುತ್ತದೆ. ಎಲ್ಲ ಸದಸ್ಯರಿಂದ ಸದಸ್ಯತ್ವದ ಹಣವನ್ನು ವಸೂಲಿ ಮಾಡಲಾಗುತ್ತರೆ.[೬]

ಚಿನ್ನ-ಬೆಳ್ಳಿ ಮಾರಾಟ ಮತ್ತು ತಯಾರಿಕೆಗಾರರು ಸೇರಿಕೊಂಡು 'ಸಾರಾಫ್ ಅಸೋಸಿಯೆಷನ್' ಎಂಬ ಸಂಘವನ್ನು ಕ್ರಿ.ಶ. ೧೯೬೫ರಲ್ಲಿ ಸ್ಥಾಪಿಸಿಕೊಂಡಿದ್ದಾರೆ. ಈ ಅಸೋಸಿಯೇಷನ್ ಆಡಳಿತ ಮಂಡಳಿಯ ಅಧ್ಯಕ್ಷರು ಚಂಪಾಲಾಲಾ ಸೋನಿ, ಕಾರ್ಯದರ್ಶಿಗಳು ಉಲ್ಲಾಸ್, ಖಜಾಂಚಿ ಹೀರಾಲಾಲ್, ನ್ಯಾಯಾಧೀಶರು ದೇವೇಂದ್ರ ಕುಮಾರ ಸೋನಿ ಇವರಲ್ಲದೆ ಇನ್ನು ೪೫ ಜನ ಸದಸ್ಯರಿದ್ದಾರೆ. ಈ ಸಂಘವು ಸಭೆ ಸೇರಿದಾಗ ಸರಕಾರದ ಹೊಸ ಕಾಯಿದೆ ಹಾಗೂ ಕಾನೂನುಗಳನ್ನು ಕುರಿತು ಚರ್ಚೆ ಮಾಡುತ್ತಾರೆ. ಕೇಂದ್ರ ಸರಕಾರದ ಬಜೆಟ್‌ನಲ್ಲಿ ಬಂಗಾರದ ಬೆಲೆಗೆ ಸಂಬಂಧಿಸಿದಂತೆ ಇರುವ ತೀರ್ಮಾನದ ಕುರಿತು ವರ್ಷಕ್ಕೆ ಒಂದು ಸಲ ಬೆಲೆಗಳ ಬಗ್ಗೆ ಹೆಚ್ಚಿನ ಚರ್ಚೆಯಾಗುತ್ತದೆ. ಇವರಿಗೆ ತಮ್ಮ ವ್ಯಾಪಾರಕ್ಕೆ ಸಂಬಂಧಿಸಿದಂತೆ ಆರ್ಥಿಕ ಸಹಾಯಕ್ಕಾಗಿ ಬ್ಯಾಂಕಿನ ಅವಶ್ಯಕತೆಯು ಹೆಚ್ಚಿನ ಪ್ರಮಾಣದಲ್ಲಿರುತ್ತದೆ. ಒಂದು ಸಂಘಟನೆಯ ಮೂಲಕ ಹೋರಾಡಿದರೆ ಅಧಿಕ ಶಕ್ತಿಬರುತ್ತದೆ. ಆದ್ದರಿಂದ ಇವರು ಸಂಘದಿಂದ ಎಲ್ಲ ಉದ್ದೇಶಗಳನ್ನು ಇಟ್ಟುಕೊಂಡು ಹೋರಾಟ ಮಾಡುತ್ತಾರೆ.[೭]

ಕಿರಾಣಿ ವರ್ತಕರ ಸಂಘವು ಈ ಪ್ರದೇಶದ ಎಲ್ಲ ಕಿರಾಣಿ ವರ್ತಕರು ಸೇರಿಕೊಂಡು ತಮ್ಮದೇ ಆದ ಒಂದು ಸಂಘವನ್ನು ಕ್ರಿ.ಶ.೧೯೭೭ರಲ್ಲಿ ಸ್ಥಾಪಿಸಿಕೊಂಡಿದ್ದಾರೆ. ಈ ಸಂಘವು ಹೊಸಪೇಟೆಯ ಬಳ್ಳಾರಿ ರಸ್ತೆಯಲ್ಲಿದೆ. ಇದನ್ನು 'ಕಿರಾಣಿ ರಿಟೇಲ್ ಡಿಲರ್ಸ್ ಅಸೋಸಿಯೇಷನ್' ಎಂದು ಕರೆಯುತ್ತಾರೆ. ಈ ಅಸೋಸಿಯೇಷನ ಆಡಳಿತ ಮಂಡಳಿಯಲ್ಲಿ ಅಧ್ಯಕ್ಷರಾಗಿ ಅಮದಾಲ್ ವೆಂಕಣ್ಣಶೆಟ್ಟಿ, ಉಪಾಧ್ಯಕ್ಷರಾಗಿ ರಘುರಾಮುಲು, ಕಾರ್ಯದರ್ಶಿ ರಘುನಾಥಶೆಟ್ಟಿ, ಜಂಟಿ ಕಾರ್ಯದರ್ಶಿ ಜಿ.ರಾಮನಾಥ ಶೆಟ್ಟಿ, ಖಜಾಂಚಿಯಾಗಿ ಸೀತಾರಾಮಶೆಟ್ಟಿ, ನಿರ್ದೇಶಕರಾಗಿ ಆರ್.ಎಲ್ಲಪ್ಪ, ಎನ್. ಗುರುಬಸವರಾಜಶೆಟ್ಟಿ, ಇನ್ನಿತರು ಸೇರಿದಂತೆ ೨೦೦ ಸದಸ್ಯರಾಗಿದ್ದಾರೆ. ಈ ಸಂಘವು ವರ್ಷಕ್ಕೆ ಒಂದು ಸಲ ಸಾಮಾನ್ಯ ಸಭೆಯನ್ನು ಸೇರುತ್ತದೆ. ಸಭೆಯಲ್ಲಿ ಮುಖ್ಯವಾಗಿ ಪ್ರಸ್ತುತ ವ್ಯಾಪಾರ ವಾಣಿಜ್ಯಕ್ಕೆ ಸಂಬಂಧಿಸಿದ ಸಮಸ್ಯೆಗಳ ಬಗ್ಗೆ ಚರ್ಚಿಸುತ್ತಾರೆ. ಎಲ್ಲ ವಿಷಯಗಳ ಬಗ್ಗೆ ಚರ್ಚೆಮಾಡಿ ಸಂಘದ ಆಡಳಿತ ಮಂಡಳಿಯು ಒಂದು ನಿರ್ಧಾರಕ್ಕೆ ಬರುತ್ತದೆ.[೮] ವೃತ್ತಿಗೆ ಸಂಬಂಧಿಸಿದಂತೆ ಅಲ್ಲದೆ ಸಮುದಾಯಕ್ಕೆ ಸಂಬಂಧಿಸಿದಂತೆ ಕೆಲವರು ತಮ್ಮದೇ ಸಂಘಗಳನ್ನು ರಚಿಸಿಕೊಂಡಿದ್ದಾರೆ. ಶೆಟ್ಟಿ ಸಮುದಾಯದವರು ತಮ್ಮದೇ ಆದ ಅನೇಕ ಸಂಘಗಳನ್ನು ಹೊಂದಿದ್ದಾರೆ. ಇವರು ವಿಜಯನಗರ ಕಾಲದಿಂದಲೂ ಹೊಸಪೇಟೆ ನಗರದಲ್ಲಿ ಇದ್ದಾರೆ. ಇವರು ೧೦೦ ವರ್ಷಗಳ ಹಿಂದೆಯೇ ಆರ್ಯವೈಶ್ಯ ಸಂಘ ಎಂಬ ಸಂಘವನ್ನು ಸ್ಥಾಪಿಸಿಕೊಂಡಿದ್ದಾರೆ. ಈ ಸಂಘವು ನಗರೇಶ್ವರ ದೇವಸ್ಥಾನದಲ್ಲಿದೆ. ಆರ್ಯವೈಶ್ಯ ಸಂಘವಲ್ಲದೆ ನಗರದಲ್ಲಿ ವಾಸವಿ ಸಂಘ, ವಾಸವಿ ಯುವಕರ ಸಂಘ, ವಾಸವಿ ಮಹಿಳಾ ಸಂಘಗಳಿವೆ. ಈ ಸಂಘಗಳು ಸಮುದಾಯದ ಹಿತ ಚಿಂತನೆಯಿಂದ ಸ್ಥಾಪನೆಯಾಗಿವೆ. ಆರ್ಯವೈಶ್ಯ ಸಂಘದ ಅಧ್ಯಕ್ಷರು ಕಾಕುಬಾಳ ಸೀತಾರಾಮಶೆಟ್ಟಿ, ಕಾರ್ಯದರ್ಶಿಗಳು ಭೂಪಾಲರಾಘವೇಂದ್ರ ಶೆಟ್ಟಿ, ಕಟ್ಟಾಲಕ್ಷ್ಮಣರವರು ಖಜಾಂಚಿಯಾಗಿದ್ದಾರೆ. ಇವರಲ್ಲದೆ ಇನ್ನಿತರ ಸದಸ್ಯರು ಮತ್ತು ನಿರ್ದೇಶಕರಿದ್ದಾರೆ.

ನಗರದಲ್ಲಿನ ಪ್ರಮುಖ ವರ್ತಕರಾದ ಪಟೇಲ ಸಮುದಾಯದವರು ಸ್ಥಳೀಯವಾಗಿ ಸಂಘಟನೆಯನ್ನು ಹೊಂದಿಲ್ಲ, ಆದರೂ ಈ ಸಮುದಾಯದವರು ಹೊಸಪೇಟೆ ನಗರವಲ್ಲದೆ ಕೊಪ್ಪಳ, ಗಂಗಾವತಿಯ ಪಟೇಲ ಸಮುದಾಯದವರು ಸೇರಿ ತಮ್ಮ ವ್ಯಾಪಾರಕ್ಕೆ ಸಂಬಂಧಿಸಿದಂತೆ ಮತ್ತು ಇನ್ನಿತರ ಸಮಸ್ಯೆಗಳಿದ್ದರೆ, ಚರ್ಚೆಮಾಡುತ್ತಾರೆ. ಈ ಕಾರ್ಯ ಚಟುವಟಿಕೆಗಳು ಕ್ರಿ.ಶ.೧೯೭೦ರಿಂದ ಪ್ರಾರಂಭವಾಗಿವೆ. ಮೇಲಿನ ನಗರಗಳು ಸೇರಿ ಈ ಸಮುದಾಯದವರು ೬೦೦ ಜನರಿದ್ದಾರೆ. ಈ ಸಮುದಾಯದವರು ಸ್ಥಳೀಯವಾಗಿ ಸಂಘಟನೆಯನ್ನು ಹೊಂದಿಲ್ಲ. ಆದರೆ ಉತ್ತರ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿನ ಈ ಸಮುದಾಯದವರು ಸೇರಿಕೊಂಡು ಉತ್ತರ ಕರ್ನಾಟಕ ಪಟೇಲ ಸಂಘಟನೆಯನ್ನು ಸ್ಥಾಪಿಸಿಕೊಂಡಿದ್ದಾರೆ. ಇದರ ಮುಖ್ಯ ಕಛೇರಿಯು ಬೆಳಗಾವಿಯಲ್ಲಿದೆ. ನಗರದ ಪಟೇಲ ಸಮುದಾಯದ ಮುಖಂಡರಾದ ಕಾಂತಿಲಾಲ್‌ರವರು ಈ ಸಂಘದಲ್ಲಿ ನ್ಯಾಯ ಸಮಿತಿಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಅದೇ ರೀತಿಯಾಗಿ ಇವರು 'ಅಖಿಲ ಕರ್ನಾಟಕ ಕಛ್ ಸಂಘ' 'ಅಖಿಲ ಭಾರತ ಕಛ್ ಸಂಘ'ವನ್ನು ಸ್ಥಾಪಿಸಿಕೊಂಡಿದ್ದಾರೆ. ಅದರ ಸದಸ್ಯರಾಗಿದ್ದಾರೆ. ಭಾರತದಲ್ಲಿ ಇದರ ೨೯ ಸಂಘಗಳಿವೆ. ಈ ಸಂಘವು ಅನೇಕ ಸಾಮೂಹಿಕ ವಿವಾಹಗಳನ್ನು ಮಾಡುತ್ತದೆ.[೧೦]

ಇವರಲ್ಲದೆ ರಾಜಸ್ಥಾನಿ ವರ್ತಕರಲ್ಲಿನ ಸೋನಿ ಸಮುದಾಯದವರು ಅನೇಕ ರೀತಿಯ ಕಾರ್ಯಚಟುವಟಿಕೆಗಳನ್ನು ನಡೆಸುತ್ತಿದ್ದಾರೆ. ಇವರು ತಮ್ಮ ವ್ಯಾಪಾರಕ್ಕೆ ಸಂಬಂಧಿಸಿದಂತೆ ಏನಾದರೂ ಸಮಸ್ಯೆಗಳು ಬಂದರೆ ಸಮುದಾಯದ ಮುಖಂಡರು ಸಭೆ ಸೇರಿ ತೀರ್ಮಾನ ಕೈಗೊಳ್ಳುತ್ತಾರೆ. ಇವರು ಎಲ್ಲರೂ ಸೇರಿ ಸಹ ಭೋಜನವನ್ನು ಮಾಡುತ್ತಾರೆ. ಮತ್ತು ಪಂಪಾಸರೋವರಕ್ಕೆ ಹೋಗುತ್ತಾರೆ. ಮುಖ್ಯವಾಗಿ ಧಾರ್ಮಿಕ ಆಚರಣೆಗಳಲ್ಲಿ ಎಲ್ಲ ಸದಸ್ಯರಿರುತ್ತಾರೆ.[೧೧]

ರಾಜಸ್ಥಾನಿಗಳಲ್ಲಿ ಜೈನ ಸಮುದಾಯದವರ ಪ್ರತ್ಯೇಕವಾದ ಸಂಘವಿಲ್ಲ. ಆದರೆ ನಗರದಲ್ಲಿ ಹಂಪಿ ರಸ್ತೆಯಲ್ಲಿ ತಮ್ಮದೇ ಆದ ಪ್ರತ್ಯೇಕ ಪ್ರದೇಶದಲ್ಲಿ ವಾಸವಾಗಿದ್ದಾರೆ. ಇಲ್ಲಿ ತಾವು ಆರಾಧಿಸುವ ದೇವರ ದೇವಾಲಯ, ಕಲ್ಯಾಣ ಮಂಟಪಗಳು ನಿರ್ಮಾಣ ಹಂತದಲ್ಲಿವೆ. ಇವರು ನಗರದಲ್ಲಿ ಪ್ರತ್ಯೇಕವಾಗಿ ಗುರುತಿಸಿಕೊಂಡಿದ್ದು, ಅಧಿಕ ಸಂಖ್ಯೆಯಲ್ಲಿದ್ದಾರೆ. ಹೆಚ್ಚಿನ ಪ್ರಮಾಣದ ವ್ಯಾಪಾರವನ್ನು ಈ ಸಮುದಾಯದವರು ಮಾಡುತ್ತಾರೆ.[೧೨]

ಅದೇ ರೀತಿಯಾಗಿ ಮುಸ್ಲಿಮ ಸಮುದಾಯದವರು ನಗರದಲ್ಲಿ ಕರ್ನಾಟಕ ಮುಸ್ಲಿಮ ಸಂಘ, ಹಂಜಮಾನ ಸಂಘ, ಕರ್ನಾಟಕ ಯೂತ್ ಮುಸ್ಲಿಮ ಸಂಘವನ್ನು ಸ್ಥಾಪಿಸಿಕೊಂಡಿದ್ದಾರೆ. ಈ ಸಂಘಗಳಡಿಯಲ್ಲಿ ಅನೇಕ ಆರ್ಥಿಕ, ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಕಾರ್ಯಗಳನ್ನು ಮಾಡುತ್ತಾರೆ. ಬ್ರಾಹ್ಮಣ ಸಮುದಾಯದವರು ಕೆಲವೊಂದು ಸಂಘಗಳನ್ನು ಹೊಂದಿದ್ದಾರೆ. ಹೊಸಪೇಟೆ ನಗರದ ಬ್ರಾಹ್ಮಣರ ಸಂಘವು ಈ ಸಮುದಾಯಕ್ಕೆ ಸಂಬಂಧಿಸಿದ ಸಂಘಟನೆಯಾಗಿದೆ. ಅದೇ ರೀತಿಯಾಗಿ ಅಖಿಲ ಕರ್ನಾಟಕ ಬ್ರಾಹ್ಮಣರ

ಸಂಘವು ಇದೆ. ಈ ರೀತಿಯಾಗಿ ಸಂಘ-ಸಂಸ್ಥೆಗಳನ್ನು ಸ್ಥಾಪಿಸಿಕೊಂಡಿದ್ದಾರೆ. ಮೇಲಿನ ಎಲ್ಲ ಸಂಘ-ಸಂಸ್ಥೆಗಳು ಹೊಸಪೇಟೆ ನಗರದಲ್ಲಿದ್ದು ವ್ಯಾಪಾರಕ್ಕೆ ಸಂಬಂಧಿಸಿದಂತೆ ಅಲ್ಲದೆ ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ, ಸಾಂಸ್ಕೃತಿಕ ಕಾರ್ಯಚಟುವಟಿಕೆಗಳನ್ನು ಮಾಡುತ್ತವೆ. ಈ ಸಂಘ-ಸಂಸ್ಥೆಗಳು ತಮ್ಮದೇ ಆದ ಆಡಳಿತದ ಸ್ವರೂಪವನ್ನು ಹೊಂದಿದ್ದು, ನಗರದ ಬೆಳವಣಿಗೆಯಲ್ಲಿ ಪ್ರಮುಖಪಾತ್ರ ವಹಿಸುತ್ತಿವೆ.[೬]

ನಗರದಲ್ಲಿನ ವರ್ತಕ ಸಮುದಾಯಗಳು ತಮ್ಮ ವ್ಯವಹಾರಕ್ಕೆ ಅನುಕೂಲವಾಗಲೆಂದು ಮತ್ತು ನಗರದಲ್ಲಿ ತಮ್ಮದೇ ಆದ ಅಸ್ತಿತ್ವವನ್ನು ಹೊಂದಲು ತಮ್ಮ ವ್ಯಾಪಾರ-ವಾಣಿಜ್ಯದ ಬೆಳವಣಿಗೆಯಾಗಲೆಂದು ಈ ಬಗೆಯ ಸಂಘ-ಸಂಸ್ಥೆಗಳನ್ನು ಸ್ಥಾಪಿಸಿಕೊಂಡಿದ್ದಾರೆ.

೫.೨ ವ್ಯಾಪಾರ-ವಾಣಿಜ್ಯ

ಹೊಸಪೇಟೆಯ ವ್ಯಾಪಾರ ವಾಣಿಜ್ಯದಲ್ಲಿ ರಾಜಸ್ಥಾನಿ ಸಮುದಾಯದವರ ಪಾತ್ರವು ಪ್ರಮುಖವಾದದ್ದು. ಇಲ್ಲಿ ಈ ಸಮುದಾಯದವರು ಬಟ್ಟೆ, ಪಾತ್ರೆ ಸಾಮಾನಿನ, ಕಿರಾಣಿ, ಎಲೆಕ್ಟ್ರಾನಿಕ್ ವಸ್ತುಗಳು, ಆಟೋಮೊಬೈಲ್, ಆಭರಣಗಳ, ಲೇವಾದೇವಿ ವ್ಯವಹಾರ, ಗಣಿಗಾರಿಕೆ, ಹೋಟೆಲ್, ಸಾರಿಗೆ ಉದ್ಯಮ, ಈ ಮೇಲಿನ ವ್ಯಾಪಾರ ಮತ್ತು ಉದ್ಯಮಗಳಲ್ಲದೆ ಇನ್ನಿತರವ್ಯಾಪಾರಗಳನ್ನು ಮಾಡುತ್ತಾರೆ. ಈ ಸಮುದಾಯದ ವರ್ತಕರು ಹೆಚ್ಚಾಗಿ ಬಟ್ಟೆ ವ್ಯಾಪಾರವನ್ನು ಮಾಡುತ್ತಾರೆ. ಇವರು ಬಟ್ಟೆಗಳನ್ನು ದೇಶದ ಪ್ರಮುಖ ನಗರಗಳಿಂದ ಆಮದು ಮಾಡಿಕೊಳ್ಳುತ್ತಾರೆ. ಸೂರತ್‌ನಿಂದ ಸೀರೆಗಳನ್ನು, ಬಾಂಬೆಯಿಂದ ಪ್ಯಾಂಟ್, ಶರ್ಟ್‌ಗಳನ್ನು, ತಮಿಳುನಾಡಿನಿಂದ ಲುಂಗಿ, ಬನಿಯನ್, ಪಂಚೆ, ಟವಾಲ್‌ಗಳನ್ನು ತರಿಸಿಕೊಳ್ಳುತ್ತಾರೆ. ಅದೇ ರೀತಿಯಾಗಿ ಅಹಮದಬಾದ್‌ನಿಂದ ಕುಬಸ್, ಕಾಟನ್ ಬಟ್ಟೆಗಳನ್ನು ತರಿಸಿಕೊಳ್ಳುತ್ತಾರೆ.[೭] ಇವರು ಇಲ್ಲಿಂದ ಯಾವುದೇ ವಸ್ತುಗಳನ್ನು ರಫ್ತು ಮಾಡುವುದಿಲ್ಲ. ಯಾವುದೇ ಬೇರೆ ದೇಶಗಳೊಂದಿಗೆ ತಮ್ಮ ವ್ಯಾಪಾರಕ್ಕೆ ಸಂಬಂಧಿಸಿದಂತೆ ಸಂಪರ್ಕವನ್ನು ಇಟ್ಟುಕೊಂಡಿಲ್ಲ. ಇವರು ಆಮದು ಮಾಡಿಕೊಳ್ಳುವ ಬಟ್ಟೆಗಳ ಮೇಲೆ ರಾಜ್ಯ ಸರಕಾರವು ಕೆಲವೊಂದು ತೆರಿಗೆಯನ್ನು ವಿಧಿಸುತ್ತದೆ. ಆಮದು ಸುಂಕ ಶೇಕಡಾ.೧ರಂತೆ ವಿಧಿಸುತ್ತದೆ. ಕೈಮಗ್ಗದ ಬಟ್ಟೆಗಳಿಗೆ ಯಾವುದೇ ರೀತಿಯ ಸುಂಕವಿರುವುದಿಲ್ಲ. ಮಾರಾಟ ಮಾಡುವ ಎಲ್ಲ ವಸ್ತುಗಳ ಮೇಲೆ ಶೇಕಡಾ.೪ರಷ್ಟು ವ್ಯಾಟ್ ತೆರಿಗೆಯನ್ನು ವಿಧಿಸುತ್ತಾರೆ. ಈ ಮೇಲಿನ ತೆರಿಗೆಗಳಲ್ಲದೆ ಎಂಟ್ರನ್ಸ್, ಕಮರ್ಶಲ್ ಹಾಗೂ ಸೇಲ್ಸ್ ತೆರಿಗೆಗಳನ್ನು ವಿಧಿಸುತ್ತಾರೆ.[೮]

ರಾಜಸ್ಥಾನಿಗಳಲ್ಲಿ ಅತಿ ಚಿಕ್ಕ ಸಮುದಾಯವಾದ ಸೋನಿ ಸಮುದಾಯದವರು ಅಕ್ಕಸಾಲಿಗರ ಕೆಲಸವನ್ನು ಮಾಡುತ್ತಾರೆ. ಕರ್ನಾಟಕದಲ್ಲಿ ಆಭರಣಗಳ ತಯಾರು ಮಾಡುವವರನ್ನು ಅಕ್ಕಸಾಲಿಗರು ಎನ್ನುವರು. ಅದೇ ರೀತಿಯಾಗಿ ರಾಜಸ್ಥಾನದಲ್ಲಿ ಆಭರಣಗಳ ತಯಾರು ಮಾಡುವವರಿಗೆ ಸೋನಿಗಳು ಎನ್ನುವರು. ಇವರ ವೃತ್ತಿ ಚಿನ್ನ ಬೆಳ್ಳಿ ಆಭರಣಗಳ ತಯಾರಿಕೆ ಮತ್ತು ಮಾರಾಟ ಮಾಡುವುದು.[೯] ಇವರು ತಮಗೆ ಬೇಕಾದ

ಆಭರಣಗಳನ್ನು ಬೆಂಗಳೂರು, ಗಂಗಾವತಿ, ಬಳ್ಳಾರಿ, ಆಂಧ್ರ ಪ್ರದೇಶ, ಮಹಾರಾಷ್ಟ್ರ, ತಮಿಳುನಾಡಿನಿಂದ ಮತ್ತು ಸಗಟು ವ್ಯಾಪಾರಿಗಳಿಂದ ತರಿಸಿಕೊಳ್ಳುತ್ತಾರೆ. ಬೆಳ್ಳಿಯನ್ನು ಕೊಯಮತ್ತೂರಿನಿಂದ, ಮುತ್ತುಗಳನ್ನು ಹೈದ್ರಬಾದಿನಿಂದ ತರಿಸಿಕೊಳ್ಳುತ್ತಾರೆ. ಹೀಗೆ ತರಿಸಿಕೊಂಡ ಆಭರಣಗಳನ್ನು ಇವರು ಮಾರಾಟ ಮಾಡುತ್ತಾರೆ.ಹೊಸಪೇಟೆಯಿಂದ ತಯಾರಾದ ಆಭರಣಗಳು ಬಳ್ಳಾರಿಗೆ ಮತ್ತು ಸುತ್ತಮುತ್ತಲಿನ ಪ್ರದೇಶಗಳಿಗೆ ಹೋಗುತ್ತವೆ. ಸರಕಾರವು ಇವರ ಆಭರಣಗಳಿಗೆ ಶೇಕಡಾ.೧ರಷ್ಟು ವ್ಯಾಟ್ ತೆರಿಗೆಯನ್ನು ವಿಧಿಸುತ್ತದೆ.[೨]

ರಾಜಸ್ಥಾನಿಗಳಲ್ಲಿ ಕೆಲವು ಸಮುದಾಯದವರು ಗಣಿಗಾರಿಕೆಯನ್ನು ನಡೆಸುತ್ತಾರೆ ಅದರಲ್ಲಿ ರಜಪೂತ ಸಮುದಾಯಕ್ಕೆ ಸೇರಿದ ಸಿಂಗರು ಹೆಚ್ಚಿನ ಪ್ರಮಾಣದಲ್ಲಿ ನಡೆಸುತ್ತಾರೆ. ಅದೇ ರೀತಿಯಾಗಿ ಶೆಟ್ಟಿಗಳು, ಜೈನರು, ಮುಸ್ಲಿಮರು ಇನ್ನಿತರ ಸಮುದಾಯದವರು ಹೊಸಪೇಟೆಯಲ್ಲಿ ಗಣಿಗಾರಿಕೆಯನ್ನು ನಡೆಸುತ್ತಾರೆ. ಹೊಸಪೇಟೆಯಲ್ಲಿ ಗಣಿಗಾರಿಕೆಯನ್ನು ಸ್ವಾತಂತ್ರ್ಯ ಬಂದ ನಂತರ ಬೇರೆ ಪ್ರದೇಶಗಳ ಉದ್ಯಮಿಗಳು ಬಂದು ಪ್ರಾರಂಭಿಸಿದರು. ಸ್ಥಳೀಯ ಜನರು ಕೆಲಸ ಮಾಡುತ್ತಿದ್ದರು. ೭೦ರ ದಶಕದ ನಂತರ ಸ್ಥಳೀಯ ಜನರು ಗಣಿಗಾರಿಕೆಯ ಮಹತ್ವವನ್ನು ಅರಿತು ಗಣಿಗಾರಿಕಾ ಉದ್ಯಮಿಗಳಾಗಿ ಪರಿವರ್ತನೆಗೊಂಡು ಅಭಿವೃದ್ಧಿ ಹೊಂದಿದ್ದಾರೆ. ಕಬ್ಬಿಣದ ಅದಿರನ್ನು ಉತ್ತರ ಮತ್ತು ದಕ್ಷಿಣ ಕೋರಿಯಾ, ಚೀನಾ, ಜಪಾನ್, ಮುಸ್ಲಿಮ ದೇಶಗಳಿಗೆ ಮತ್ತು ಇತರ ಸಣ್ಣ-ಪುಟ್ಟ ದೇಶಗಳಿಗೆ ಮಂಗಳೂರು ಮತ್ತು ಮದ್ರಾಸ್ ಬಂದರುಗಳ ಮೂಲಕ ರಫ್ತು ಮಾಡುತ್ತಾರೆ. ಗಣಿಗಾರಿಕೆಯು ಹೊಸಪೇಟೆಯಲ್ಲಿ ಲಾಭದಾಯಕ ಉದ್ಯಮವಾಗಿದೆ.

ಹೊಸಪೇಟೆಯಲ್ಲಿ ಗಣಿಗಾರಿಕೆ ಮಾಡುವ ವ್ಯಕ್ತಿ ಮತ್ತು ಕಂಪನಿಗಳು.

೧. ಬಲ್ಡೋಟಾ ಕಂಪನಿ

೨. ಪತ್ತಿಕೊಂಡ ಸಹೋದರರ ಸಂಸ್ಥೆ

೩. ಆಶಾ ಮಹಮ್ಮದ ಮೈನ್ಸ

೪. ಸೋಮಶೇಖರ ಶೆಟ್ಟಿ ಸೋದರರ ಸಂಸ್ಥೆ

೫. ಸಿಂಗ್ ಸಹೋದರರ ಸಂಸ್ಥೆ

೬. ಅಬ್ದುಲ್ ವಹಾಬ್ ಸಂಸ್ಥೆ

೭. ಕಮಲಾಪುರ ಖಾಸಿಂ ಸಾಹೇಬ ಸಂಸ್ಥೆ

೮. ಕುಮಾರಸ್ವಾಮಿ ಮೈನಿಂಗ್ ಸಂಸ್ಥೆ

೯. ರಾಜಪುರ ಮೈನ್ಸ್

೧೦. ಕಾರಿಗನೂರು ಸಂಸ್ಥೆ

ಬಲ್ಡೋಟಾ ಕಂಪನಿಯು ಕ್ರಿ.ಶ.೧೯೬೧ರಲ್ಲಿ ಅಭಿರಾಜ್ ಬಲ್ಡೋಟಾರವರಿಂದ ಸ್ಥಾಪನೆಯಾಯಿತು. ಈಗ ಈ ಕಂಪನಿಯನ್ನು ನರೇಂದ್ರ ಕುಮಾರ ಮತ್ತು ರಾಹುಲ್ ಕುಮಾರ ಬಲ್ಡೋಟಾರವರು ನಡೆಸುತ್ತಿದ್ದಾರೆ. ಈ ಕಂಪನಿಯು ಗಣಿಗಾರಿಕೆಯನ್ನಲ್ಲದೆ ವಿದ್ಯುತ್ ಮತ್ತು ಆಮ್ಲಜನಕವನ್ನು ತಯಾರು ಮಾಡುತ್ತದೆ.

ಇವರು ಚೀನಾ ದೇಶಕ್ಕೆ ಕಬ್ಬಿಣದ ಅದಿರನ್ನು ರಫ್ತುಮಾಡುತ್ತಾರೆ. ಕಂಪನಿಯ ವ್ಯಾಪ್ತಿಯು ೩೪೭ ಎಕರೆ ಭೂಮಿಯನ್ನು ಹೊಂದಿದೆ. ೨೦೦೮ರಲ್ಲಿ ೪.೩೮ ಮಿಲಿಯನ್ ಮೆಟ್ರಿಕ್ ಟನ್ಸ್ ಕಬ್ಬಿಣದ ಅದಿರನ್ನು ರಫ್ತು ಮಾಡಿತ್ತು. ೨೦೦೮ರಲ್ಲಿ ೧೭೪೧ ಜನ ನೌಕರದ್ದರು.[೧೮]

ಈ ಎಲ್ಲ ಮೇಲಿನ ಸಂಸ್ಥೆಗಳಿಂದ ಹೊಸಪೇಟೆ ಮತ್ತು ಸುತ್ತ ಮುತ್ತಲಿನ ಪ್ರದೇಶಗಳ ಜನರಿಗೆ ಹೆಚ್ಚಿನ ಉದ್ಯೋಗಗಳು ದೊರೆತು ಆರ್ಥಿಕವಾಗಿ ಮುಂದುವರಿಯುವಂತಾಯಿತು.

ಹೊಸಪೇಟೆ ನಗರದಲ್ಲಿ ಅನೇಕ ಸಾಮಿಲ್‌ಗಳಿವೆ. ಈ ಸಾಮಿಲ್‌ಗಳಲ್ಲಿ ವ್ಯಾಪಾರವನ್ನು ನಡೆಸುವವರು ಗುಜರಾತಿಗಳಲ್ಲಿ ಪಟೇಲ ಸಮುದಾಯದವರು. ಇವರು ಹೊಸಪೇಟೆಗೆ ಬಂದು ಸುಮಾರು ೫೦ ವರ್ಷಗಳಾಗಿವೆ. ಇವರು ಉದ್ಯೋಗವನ್ನು ಅರಸುತ್ತಾ ಹೊಸಪೇಟೆಗೆ ಬಂದು ಮೊದಲು ಇಲ್ಲಿಯ ಡ್ಯಾಂನಲ್ಲಿ ಮುಳುಗಿದ್ದ ರೈತರ ಕಟ್ಟಿಗೆಯನ್ನು ತೆಗೆದುಕೊಂಡು ವ್ಯಾಪಾರವನ್ನು ಮಾಡುತ್ತಿದ್ದರು. ನಂತರದ ದಿನಗಳಲ್ಲಿ ಕರ್ನಾಟಕದ ಅರಣ್ಯದಲ್ಲಿನ ಮರಗಳನ್ನು ತೆಗೆದುಕೊಂಡು ವ್ಯಾಪಾರಮಾಡುತ್ತಿದ್ದರು. ಈಗ ಇವರು ಸ್ವಂತವ್ಯಾಪಾರವನ್ನು ಪ್ರಾರಂಭಿಸಿ, ಟಿಂಬರ್ ಮತ್ತು ಪೈಬರ್ ವ್ಯಾಪಾರವನ್ನು ಮಾಡುತ್ತಿದ್ದಾರೆ. ಇವರು ತಮ್ಮ ವ್ಯಾಪಾರಕ್ಕೆ ಸಂಬಂಧಿಸಿದಂತೆ ಸರಕುಗಳನ್ನು ಬರ್ಮಾ, ನೈಜೀರಿಯಾ, ಬ್ರೆಜಿಲ್, ಇಂಡೋನೇಷ್ಯದಿಂದ ತರಿಸಿಕೊಳ್ಳುತ್ತಾರೆ. ಈ ಸರಕುಗಳನ್ನು ಮಂಗಳೂರು, ಮದ್ರಾಸ್, ಗಾಂಧಿಧಾಮ, ಕಛ್, ಗುಜರಾತ್, ಮತ್ತು ಮುಂಬಯಿಯ ಬಂದರುಗಳ ಮುಖಾಂತರ ಹೊಸಪೇಟೆಗೆ ತರಿಸಿಕೊಳ್ಳುತ್ತಾರೆ.[೧೯] ಹೀಗೆ ತರಿಸಿಕೊಂಡ ಸರಕುಗಳಲ್ಲಿ ಕಟ್ಟಿಗೆ ತಯಾರಿಸಿ, ಸುತ್ತ ಮುತ್ತಲಿನ ಪ್ರದೇಶಗಳಿಗೆ ಕಳುಹಿಸುತ್ತಾರೆ.

ಹೊಸಪೇಟೆಯಲ್ಲಿ ಅನೇಕ ಕಿರಾಣಿ ವ್ಯಾಪಾರದ ಮಳಿಗೆಗಳಿವೆ ಮತ್ತು ದಲ್ಲಾಳಿಗಳು, ಸಗಟು ವ್ಯಾಪಾರಿಗಳು ಇದ್ದಾರೆ. ಈ ವ್ಯಾಪಾರವನ್ನು ಶೆಟ್ಟಿ ಸಮುದಾಯದವರು ಅಧಿಕ ಸಂಖ್ಯೆಯಲ್ಲಿ ಮಾಡುತ್ತಾರೆ. ಇತರ ಸಮುದಾಯದವರು ಕೂಡ ಮಾಡುತ್ತಾರೆ. ಇವರು ತಮ್ಮ ವ್ಯಾಪಾರಕ್ಕೆ ಸಂಬಂಧಿಸಿದಂತೆ ಸರಕುಗಳನ್ನು ದೇಶದ ಮತ್ತು ಕರ್ನಾಟಕದ ವಿವಿಧ ಪ್ರದೇಶಗಳಿಂದ ತರಿಸಿಕೊಳ್ಳುತ್ತಾರೆ. ಇವರು ಮುಖ್ಯವಾಗಿ ಯಾವ ಪ್ರದೇಶದಲ್ಲಿ ಯಾವ ಉತ್ಪನ್ನಗಳು ಅಧಿಕ ಪ್ರಮಾಣದಲ್ಲಿ ದೊರೆಯುತ್ತವೆಯೋ ಅಲ್ಲಿಂದ ತರಿಸಿಕೊಳ್ಳುತ್ತಾರೆ. ಅಕ್ಕಿಯನ್ನು ಬಳ್ಳಾರಿ, ಸಿರುಗುಪ್ಪ, ಕಂಪ್ಲಿ ಮತ್ತು ಆಂಧ್ರ ಪ್ರದೇಶದಿಂದ ತರಿಸಿಕೊಳ್ಳುತ್ತಾರೆ. ಜೋಳವನ್ನು ವಿಜಾಪುರ, ಬಾಗಲಕೋಟೆ, ಧಾರವಾಡ ಜಿಲ್ಲೆಗಳಿಂದ, ದ್ವಿದಳಧಾನ್ಯಗಳನ್ನು ಬಿಜಾಪುರ, ಬಾಗಲಕೋಟೆ, ಧಾರವಾಡ ಮತ್ತು ಮಧ್ಯಪ್ರದೇಶದಿಂದ ತರಿಸಿಕೊಳ್ಳುತ್ತಾರೆ. ಬೇಳೆಯನ್ನು

ಗುಲ್ಬರ್ಗಾ, ಮೆಣಸಿನಕಾಯಿಯನ್ನು, ಬಳ್ಳಾರಿ, ಕುರುಗೋಡು, ಬ್ಯಾಡಗಿಯಿಂದ, ಎಣ್ಣೆಯನ್ನು ಸ್ಥಳೀಯರಿಂದ, ಹಗರಿಬೊಮ್ಮನಹಳ್ಳಿ, ಬಳ್ಳಾರಿಯಿಂದ, ಹುಣಸೆಹಣ್ಣನ್ನು ಹಗರಿಬೊಮ್ಮನಹಳ್ಳಿ, ಕೂಡ್ಲಿಗಿಯಿಂದ, ಗೋಡಂಬಿಯನ್ನು ಶಿವಮೊಗ್ಗ, ಗೋವಾದಿಂದ, ದ್ರಾಕ್ಷಿಯನ್ನು ಬಿಜಾಪುರದಿಂದ, ಮಧ್ಯಪ್ರದೇಶದ ಹಿಂದೂರಿನಿಂದ ಗೋಧಿಯನ್ನು ತರಿಸಿಕೊಳ್ಳುತ್ತಾರೆ. ಅದೇ ರೀತಿಯಾಗಿ ಉಪ್ಪನ್ನು ಗುಜರಾತ್, ತಮಿಳುನಾಡು ಮತ್ತು ಆಂಧ್ರದಿಂದ ತರಿಸಿಕೊಳ್ಳುತ್ತಾರೆ. ಈ ಎಲ್ಲ ಸರಕುಗಳನ್ನು ಸ್ಥಳೀಯವಾಗಿ ಮಾರಾಟಮಾಡುತ್ತಾರೆ. ಈ ವ್ಯಾಪಾರಕ್ಕೆ ಸಂಬಂಧಿಸಿದಂತೆ ಸರಕಾರ ವ್ಯಾಟ್, ತೆರಿಗೆಯನ್ನು ವಿಧಿಸುತ್ತದೆ.[೨೦]

ಹೊಸಪೇಟೆಯಲ್ಲಿ ಕೆಲವು ಸಮುದಾಯಗಳು ವಾಹನಗಳ ಮಾರಾಟದ ವ್ಯಾಪಾರವನ್ನು ಮಾಡುತ್ತಾರೆ. ಇವರು ದೇಶದ ಇತರ ಭಾಗಗಳಿಂದ ವಿವಿಧ ವರ್ಗದ ಕಾರುಗಳನ್ನು, ಟ್ರ್ಯಾಕ್ಟರ್‌ಗಳನ್ನು, ಲಾರಿಗಳನ್ನು, ಆಟೋಗಳನ್ನು, ಮಿನಿ ವಾಹನಗಳನ್ನು ಆಮದು ಮಾಡಿಕೊಳ್ಳುತ್ತಾರೆ. ಈ ಎಲ್ಲಾ ವಾಹನಗಳನ್ನು ಸ್ಥಳೀಯವಾಗಿ ಮಾರಾಟಮಾಡುತ್ತಾರೆ. ಈ ವ್ಯಾಪಾರವನ್ನು ಹೊಸಪೇಟೆಯಲ್ಲಿ ಅನೇಕರು ಮಾಡುತ್ತಾರೆ. ಉದಾಹರಣೆಗೆ ಭಾಗ್ಯೋದಯ ಎಂಟರ್ ಪ್ರೈಸಸ್, ಮುನೀರ್ ಎಂಟರ್ ಪ್ರೈಸಸ್, ಹೊಸಪೇಟೆಯಲ್ಲಿ ಅನೇಕ ಹೋಟಲ್‌ಗಳಿವೆ. ಈ ಹೋಟಲ್‌ಗಳನ್ನು ಹೆಚ್ಚಾಗಿ ಕಾರವಾರ, ಮಂಗಳೂರು, ಉಡುಪಿ ಜಿಲ್ಲೆಯ ವಿವಿಧ ಪ್ರದೇಶಗಳಿಂದ ಬಂದ ವರ್ತಕರು ನಡೆಸುತ್ತಿದ್ದಾರೆ.[೨೧] ಈ ಮೇಲಿನ ಎಲ್ಲ ವ್ಯಾಪಾರ-ವಾಣಿಜ್ಯಗಳಿಂದಾಗಿ ಹೊಸಪೇಟೆಯು ಒಂದು ವ್ಯಾಪಾರಿ ಕೇಂದ್ರವಾಗಿ ಬೆಳೆಯುವಂತಾಯಿತು.

೫.೩ ಶಿಕ್ಷಣ

ಹೊಸಪೇಟೆಯಲ್ಲಿ ನೆಲೆಸಿರುವ ಅನೇಕ ವರ್ತಕ ಸಮುದಾಯಗಳು ವ್ಯಾಪಾರವನ್ನು ಪ್ರಧಾನ ವೃತ್ತಿಯನ್ನಾಗಿಸಿಕೊಂಡವರು. ಆದರೆ ಇವರು ಶೈಕ್ಷಣಿಕವಾಗಿಯೂ ಹಿಂದಿಲ್ಲ. ಇತ್ತೀಚಿನ ದಿನಗಳಲ್ಲಿ ಶೈಕ್ಷಣಿಕವಾಗಿ ಹೆಚ್ಚಿನ ಪ್ರಗತಿಯನ್ನು ಸಾಧಿಸಿದ್ದಾರೆ. ಇಂದಿನ ಸಂದರ್ಭದಲ್ಲಿ ವ್ಯಾಪಾರಿಯ ಮಗ ವ್ಯಾಪರಿಯೇ ಆಗಬೇಕು ಎನ್ನುವ ನಿಯಮ ಇಲ್ಲದ ಕಾರಣ ಅವರವರ ಆಸಕ್ತಿಗೆ ಅನುಗುಣವಾಗಿ ಯಾವ ವೃತ್ತಿಯಲ್ಲಿ ತೊಡಗಬೇಕು ಎನ್ನುವದನ್ನು ನಿರ್ಧರಿಸಿಕೊಳ್ಳುತ್ತಿದ್ದಾರೆ.

ಹೊಸಪೇಟೆಯಲ್ಲಿ ನೆಲೆಸಿರುವ ಪ್ರಮುಖ ವರ್ತಕ ಸಮುದಾಯವಾದ ರಾಜಸ್ಥಾನಿಗಳು ವ್ಯಾಪಾರವನ್ನು ವೃತ್ತಿಧರ್ಮವನ್ನಾಗಿ ಮಾಡಿಕೊಂಡವರು. ಇವರು ತಮ್ಮ ಮಕ್ಕಳಿಗೆ ಉನ್ನತ ಶಿಕ್ಷಣವನ್ನು ಕೊಡಿಸುತ್ತಿದ್ದಾರೆ. ಇವರು ತಮ್ಮದೇ ಆದ ಶಿಕ್ಷಣ ಸಂಸ್ಥೆಯನ್ನು ಹೊಂದಿದ್ದಾರೆ. ಉದಾಹರಣೆಗೆ ಮಹಾವೀರ ಸ್ಕೂಲ್. ಹೊಸಪೇಟೆಯಲ್ಲಿ ನೆಲೆಸಿರುವ ಮುಸ್ಲಿಮ ಸಮುದಾಯವರು ಇತ್ತೀಚಿನ ದಿನಗಳಲ್ಲಿ ಶೈಕ್ಷಣಿಕವಾಗಿ ಪ್ರಗತಿಯನ್ನು ಸಾಧಿಸಿದ್ದಾರೆ. ಇವರು ತಮ್ಮ ಮಕ್ಕಳಿಗೆ ಉತ್ತಮ ರೀತಿಯ ಶಿಕ್ಷಣವನ್ನು ಕೊಡಿಸುತ್ತಿದ್ದಾರೆ. ಬ್ರಾಹ್ಮಣರು ಶೈಕ್ಷಣಿಕವಾಗಿ ಮುಂದುವರಿದ ಸಮುದಾಯವಾಗಿದೆ. ಇವರು ಎಲ್ಲರೂ ಶಿಕ್ಷಣವನ್ನು

ಪಡೆದಿರುತ್ತಾರೆ. ವೇದಗಳ ಪಂಡಿತರಾಗಿರುತ್ತಾರೆ. ಹೊಸಪೇಟೆಯಲ್ಲಿ ಬಹಳ ವರ್ಷಗಳಿಂದ ನೆಲೆಸಿರುವ ಶೆಟ್ಟಿ ಸಮುದಾಯದವರು ಈ ಪ್ರದೇಶದಲ್ಲಿ ಅನೇಕ ಶಾಲೆ, ಶಿಕ್ಷಣಸಂಸ್ಥೆಗಳನ್ನು ಮತ್ತು ಟ್ರಸ್ಟ್‌ಗಳನ್ನು ಪ್ರಾರಂಭಿಸಿ ಇಲ್ಲಿಯ ಜನರಿಗೆ ಶಿಕ್ಷಣವನ್ನು ನೀಡುತ್ತಿದ್ದಾರೆ. ಈ ಸಮುದಾಯದವರು ಸ್ಥಾಪಿಸಿರುವ ಶಾಲೆಗಳೆಂದರೆ ವಾಸವಿ ಪ್ರೌಢಶಾಲೆ, ಪೂಣ್ಯಮೂರ್ತಿ ರಾಗಪ್ಪ ಶೆಟ್ಟಿ ಶಾಲೆ. ಇವರು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದ್ದಾರೆ ಅವುಗಳೆಂದರೆ ಕನ್ನಿಕ ವಿದ್ಯಾಸಂಸ್ಥೆ, ಚಾರಿಟಬಲ್ ಟ್ರಸ್ಟ್, ಜೂನಿಯರ್ ಕಾಲೇಜುಗಳನ್ನು ಸ್ಥಾಪಿಸಿದ್ದಾರೆ. ಪತ್ತಿಕೊಂಡ ವೆಂಕಣ್ಣಶೆಟ್ಟಿ ಮತ್ತು ಸಹೋದರರ ಧರ್ಮ ಸಂಸ್ಥೆ ನಗರದಲ್ಲಿ ಕ್ರಿ.ಶ.೧೯೬೪ರಲ್ಲಿ ಸ್ಥಾಪಿಸಲಾಯಿತು. ಇದನ್ನು ಪತ್ತಿಕೊಂಡ ಸಹೋದರರು ಸ್ಥಾಪಿಸಿದರು. ಈ ಸಂಸ್ಥೆಯ ಅಡಿಯಲ್ಲಿ ವಾಸವಿ ಪ್ರೌಢಶಾಲೆಯು ನಡೆಯುತ್ತಿದೆ. ಈ ಶಾಲೆಯು ನಗರದ ಹಂಪಿ ರಸ್ತೆಯಲ್ಲಿದೆ. ಈ ರೀತಿಯಾಗಿ ವರ್ತಕ ಸಮುದಾಯಗಳು ನಗರದಲ್ಲಿ ಅನೇಕ ಶಾಲೆ ಮತ್ತು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ಅನೇಕ ಜನರಿಗೆ ಶಿಕ್ಷಣವನ್ನು ನೀಡುತ್ತಿವೆ.

೫.೪. ಆರೋಗ್ಯ

ಹೊಸಪೇಟೆಯಲ್ಲಿ ನೆಲೆಸಿರುವ ಅನೇಕ ವರ್ತಕ ಸಮುದಾಯಗಳು ವ್ಯಾಪಾರದ ಜೊತೆಗೆ ಇನ್ನಿತರ ಕಾರ್ಯಗಳಲ್ಲೂ ತೊಡಗಿದ್ದಾರೆ. ಇದರಲ್ಲಿ ಮುಖ್ಯವಾಗಿ ಇವರು ಆರೋಗ್ಯಕ್ಕೆ ಸಂಬಂಧಿಸಿದಂತೆ ಅನೇಕ ಕಾರ್ಯಗಳನ್ನು ಮಾಡಿದ್ದಾರೆ. ತಮ್ಮ ವೃತ್ತಿಯ ಜೊತೆಗೆ ಅನೇಕ ಜನರು ಖಾಸಗಿ ಆಸ್ಪತ್ರೆಗಳನ್ನು ಸ್ಥಾಪಿಸಿದ್ದಾರೆ. ಈ ಆಸ್ಪತ್ರೆಗಳಿಂದ ತಮ್ಮ ಸಮುದಾಯದವರಿಗೆ ಅಲ್ಲದೆ ಅನೇಕ ಸಾರ್ವಜನಿಕರಿಗೂ ಅನುಕೂಲಗಳಾಗಿವೆ. ನಗರದಲ್ಲಿ ನೆಲೆಸಿರುವ ವರ್ತಕ ಸಮುದಾಯಗಳಲ್ಲಿ ರಾಜಸ್ಥಾನಿಗಳು ಪ್ರಮುಖರಾಗಿದ್ದು ಇವರು ಆರೋಗ್ಯಕ್ಕೆ ಸಂಬಂಧಿಸಿದಂತೆ ಅನೇಕ ಕಾರ್ಯಗಳನ್ನು ಮಾಡಿದ್ದಾರೆ. ಈ ಸಮುದಾಯದವರು ವ್ಯಾಪಾರದ ಜೊತೆಗೆ ಉನ್ನತ ಶಿಕ್ಷಣವನ್ನು ಪಡೆದುಕೊಂಡು ಅನೇಕರು ವೈದ್ಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಕೆಲವೊಬ್ಬರು ತಮ್ಮದೇ ಖಾಸಗಿ ಆಸ್ಪತ್ರೆಗಳನ್ನು ಕಟ್ಟಿಕೊಂಡು ಚಿಕಿತ್ಸೆಯನ್ನು ನೀಡುತ್ತಿದ್ದಾರೆ.[೨೨] ಇವರು ಸರಕಾರಿ ಆಸ್ಪತ್ರೆಯಲ್ಲಿ ಸಾರ್ವಜನಿಕರಿಗೆ ಅನುಕೂಲವಾಗಲೆಂದು ನೀರಿನ ಅರವಟ್ಟಿಗೆಯನ್ನು ಸ್ಥಾಪಿಸಿದ್ದಾರೆ. ತುರ್ತು ಚಿಕಿತ್ಸೆಗೆ ಸಹಾಯವಾಗಲು ಅಂಬುಲೆನ್ಸ್ ವ್ಯವಸ್ಥೆಯನ್ನು ಕಲ್ಪಿಸಿದ್ದಾರೆ. ಸಾರ್ವಜನಿಕರಿಗೆ ಹಾಗೂ ಬಡವರಿಗೆ ಹೆಚ್ಚಿನ ಚಿಕಿತ್ಸೆಗೆ ಆರ್ಥಿಕ ಸಹಾಯವನ್ನು ಮಾಡುತ್ತಿದ್ದಾರೆ. ಶೆಟ್ಟಿ ಸಮುದಾಯದವರು ಧಾರ್ಮಿಕ ಪ್ರವೃತ್ತಿಯುಳ್ಳವರಾಗಿದ್ದು, ಇನ್ನಿತರೆ ಸಾರ್ವಜನಿಕ ಕಾರ್ಯಗಳನ್ನು ಮಾಡುತ್ತಿದ್ದಾರೆ. ಇವರು ವೃತ್ತಿಯ ಜೊತೆಗೆ ಉನ್ನತ ಶಿಕ್ಷಣವನ್ನು ಪಡೆದುಕೊಂಡು ವೈದ್ಯರಾಗಿಯೂ ಸೇವೆ ಸಲ್ಲಿಸುತ್ತಿದ್ದಾರೆ. ಇವರು ನಗರದಲ್ಲಿ ಆನೇಕ ಆಸ್ಪತ್ರೆಗಳನ್ನು ಸ್ಥಾಪಿಸಿದ್ದಾರೆ. ಉದಾಹರಣೆಗೆ ವಿನಾಯಕ ಆಸ್ಪತ್ರೆ, ಪತ್ತಿಕೊಂಡು ಕಣ್ಣಿನ ಆಸ್ಪತ್ರೆ, ದೀಪಾಲಿ ಆಸ್ಪತ್ರೆ, ಮೆಡಿನೋವ ಆಸ್ಪತ್ರೆ, ಮಲ್ಲಿಗೆ ಆಸ್ಪತ್ರೆ. ಈ ಮೇಲಿನ ಆಸ್ಪತ್ರೆಗಳನ್ನು ಸ್ಥಾಪಿಸಿರುವದಲ್ಲದೆ, ಆರೋಗ್ಯಕ್ಕೆ ಸಂಬಂಧಿಸಿದಂತೆ ಅನೇಕ ಸೇವಾ ಕಾರ್ಯಗಳನ್ನು ಮಾಡುವುದರ ಜೊತೆಗೆ,

ಬಡವರಿಗೆ ಹೆಚ್ಚಿನ ಚಿಕಿತ್ಸೆಗೆ ಧನಸಹಾಯವನ್ನು ಮಾಡುತ್ತಿದ್ದಾರೆ. ಬ್ರಾಹ್ಮಣ ಸಮುದಾಯದವರು ಅನೇಕರು ವೈದ್ಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇವರು ನಗರದಲ್ಲಿ ಅನೇಕ ಆಸ್ಪತ್ರೆಗಳನ್ನು ಸ್ಥಾಪಿಸಿದ್ದಾರೆ. ಅವುಗಳೆಂದರೆ ಶ್ರೀಪತಿ ಆಸ್ಪತ್ರೆ, ಭಾಗವತ ಆಸ್ಪತ್ರೆ, ಭಟ್ಟ ಆಸ್ಪತ್ರೆ.

ಈ ಮೇಲಿನವರಲ್ಲದೆ ನಗರದಲ್ಲಿರುವ ಇನ್ನಿತರ ಸಮುದಾಯಗಳು ತಮ್ಮದೇ ಆದ ವೈದ್ಯಕೀಯ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಇವರು ವ್ಯಾಪಾರದ ಜೊತೆಗೆ ಇನ್ನಿತರ ಸಾರ್ವಜನಿಕ ಕಾರ್ಯಗಳನ್ನು ಮಾಡುತ್ತಿದ್ದಾರೆ. ಈ ಸಮುದಾಯಗಳ ಆರ್ಥಿಕ ಸಹಾಯದಿಂದ ಅನೇಕ ಬಡ ಜನತೆಗೆ ಅನುಕೂಲಗಳಾಗುತ್ತಿವೆ.[೨೩]

೫.೫. ಧಾರ್ಮಿಕ ನಂಬಿಕೆಗಳು ಹಾಗೂ ಆಚರಣೆಗಳು

ಹೊಸಪೇಟೆಯಲ್ಲಿ ನೆಲೆಸಿರುವ ಅನೇಕ ವರ್ತಕ ಸಮುದಾಯಗಳು ತಮ್ಮದೇ ಆದ ಧಾರ್ಮಿಕ ನಂಬಿಕೆ ಹಾಗೂ ಆಚರಣೆಗಳನ್ನು ಹೊಂದಿದ್ದಾರೆ. ವಲಸೆ ಬಂದ ವರ್ತಕರು ತಾವು ತಮ್ಮ ಸ್ವಂತ ಸ್ಥಳಗಳಲ್ಲಿ ಆಚರಿಸುವ ಆಚರಣೆಗಳನ್ನೇ ಇಲ್ಲಿ ಆಚರಿಸುತ್ತಾರೆ. ಈ ಪ್ರದೇಶದಲ್ಲಿ ಅನೇಕ ಹೊಸ ಆಚರಣೆ ಮತ್ತು ನಂಬಿಕೆಗಳನ್ನು ಆಚರಿಸುವುದರಿಂದ ಹೊಸ ಸಂಸ್ಕೃತಿಯ ಉಗಮಕ್ಕೆ ಈ ವರ್ತಕ ಸಮುದಾಯಗಳು ಕಾರಣವಾಗಿವೆ.[೨೪]

ಹೊಸಪೇಟೆಯಲ್ಲಿ ನೆಲೆಸಿರುವ ಅನೇಕ ವರ್ತಕ ಸಮುದಾಯಗಳಲ್ಲಿ ರಾಜಸ್ಥಾನಿಗಳು ಒಬ್ಬರು. ಇವರಲ್ಲಿ ಜೈನರು ಎಂಬ ಒಂದು ಸಮುದಾಯವಿದೆ. ಇವರು ತಮ್ಮದೇ ಆದ ಧಾರ್ಮಿಕ ಆಚರಣೆಗಳನ್ನು ಆಚರಿಸುತ್ತಾರೆ. ಧಾರ್ಮಿಕ ಆಚರಣೆಯಲ್ಲಿ ನಂಬಿಕೆವುಳ್ಳವರಾಗಿದ್ದು, ಅಹಿಂಸೆಯನ್ನು ಪಾಲಿಸುತ್ತಾರೆ. ಅಹಿಂಸೋ ಪರೋಧರ್ಮವೆಂದು ಭಾವಿಸಿದ್ದಾರೆ. ಯಾವುದೇ ರೀತಿಯ ಪ್ರಾಣಿ ಹಿಂಸೆಯನ್ನು ಇವರು ಮಾಡುವುದಿಲ್ಲ ಹಾಗೂ ಬೆಂಬಲಿಸುವುದಿಲ್ಲ. ಇವರು ಪ್ರಮುಖವಾಗಿ ಭಗವಾನ್ ಮಹಾವೀರನನ್ನು ಆರಾಧಿಸುತ್ತಾರೆ. ಸ್ಥಳೀಯವಾಗಿ ದೇವಾಲಯಗಳನ್ನು ಕಟ್ಟಿಕೊಂಡಿದ್ದಾರೆ. ಇವರು ಪ್ರಮುಖವಾಗಿ ದೀಪಾವಳಿ, ರಾಖಿ, ಮಹಾವೀರ ಜಯಂತಿ ಈ ಹಬ್ಬಗಳನ್ನು ವಿಶಿಷ್ಟವಾಗಿ ಆಚರಿಸುತ್ತಾರೆ. ಇವರ ಆಹಾರ ಪದ್ಧತಿಯು ಭಿನ್ನವಾಗಿದ್ದು. ಇವರು ಸಸ್ಯಹಾರಿಗಳು. ಇವರು ಹೆಚ್ಚಾಗಿ ಚಪಾತಿಯನ್ನು ತಿನ್ನುತ್ತಾರೆ. ಗೋಧಿಯ ಬಳಕೆ ಹೆಚ್ಚು ಮಾಡುತ್ತಾರೆ. ಅಕ್ಕಿಯ ಬಳಕೆ ಕಡಿಮೆ. ಬದನೆಕಾಯಿ, ಬೆಳ್ಳುಳ್ಳಿ, ಈರುಳ್ಳಿ, ಆಲೂಗಡ್ಡೆಯನ್ನು ತಿನ್ನುವುದಿಲ್ಲ. ಮಹಾವೀರ ಜಯಂತಿಯ ದಿನ ಪೂಜೆ ಇರುತ್ತದೆ. ಸಮುದಾಯದವರು ಎಲ್ಲರೂ ಸೇರಿ ಊಟವನ್ನು ಮಾಡುತ್ತಾರೆ. ೪ ತಿಂಗಳ ಚತುರ್ಮಾಸವಿರುತ್ತದೆ. ಈ ದಿನಗಳಲ್ಲಿ ೮ ದಿನ ಪ್ರದೂಷಣವಿರುತ್ತದೆ. ಈ ದಿನಗಳಲ್ಲಿ ೨ ದಿನ ವ್ಯಾಪಾರವನ್ನು ಮಾಡುವುದಿಲ್ಲ, ೬ ರಿಂದ ಊಟವನ್ನು ಮಾಡುವುದಿಲ್ಲ. ಬರಿ ಬಿಸಿನೀರನ್ನು ಕುಡಿಯುತ್ತಾರೆ. ಉಪವಾಸವಿರುತ್ತಾರೆ. ಪ್ರವಚನಗಳು ಇರುತ್ತವೆ. ಇವರ ಆಹಾರ ಪದ್ಧತಿಯು ಬಹಳ ಕಟ್ಟು ನಿಟ್ಟು. ೪ ತಿಂಗಳ ಚತುರ್ಮಾಸ ದೀಪಾವಳಿಯಾದ ೧೫ ದಿನಕ್ಕೆ ಮುಗಿಯುತ್ತದೆ.

ರಾಜಸ್ಥಾನಿಗಳಲ್ಲಿ ಒಬ್ಬರಾದ ಸೋನಿ ಸಮುದಾಯದವರ ಧಾರ್ಮಿಕ ಆಚರಣೆಗಳು ಕೂಡ ಭಿನ್ನವಾಗಿವೆ. ಇವರು ಹಿಂದೂ ಪದ್ಧತಿಯ ಎಲ್ಲ ಆಚರಣೆ, ಹಬ್ಬಗಳನ್ನು ಮಾಡುತ್ತಾರೆ. ಶಿವ, ಶಕ್ತಿಯ ಆರಾಧನೆ ಮಾಡುತ್ತಾರೆ. ಈ ಸಮುದಾಯದವರಿಗೆ ಪ್ರತ್ಯೇಕವಾದ ದೇವಾಲಯವಿಲ್ಲ. ಆದ್ದರಿಂದ ನಗರೇಶ್ವರ, ಈಶ್ವರ ದೇವಾಲಯಕ್ಕೆ ಹೋಗುತ್ತಾರೆ. ಈ ಸಮುದಾಯದವರು ಗುರು ಪೂರ್ಣಿಮೆಯಲ್ಲಿ ಎಲ್ಲರು ಸೇರಿ ಊಟಮಾಡುತ್ತಾರೆ. ಶ್ರಾವಣ ಮಾಸದಲ್ಲಿ ಪಂಪಾಸರೋವರಕ್ಕೆ ಹೋಗುತ್ತಾರೆ. ರಜಪೂತರಲ್ಲಿ ಬರುವ ಸಿಂಗರು ಧಾರ್ಮಿಕ ಪ್ರವೃತ್ತಿಯುಳ್ಳವರಾಗಿದ್ದು ಹೊಸಪೇಟೆಯ ಪಾಟೀಲ ನಗರದಲ್ಲಿನ ಶ್ರೀ ವೇಣುಗೋಪಾಲಕೃಷ್ಣ ದೇವಾಲಯವನ್ನು ಕಟ್ಟಿ ಅಭಿವೃದ್ಧಿಪಡಿಸಿ ಇಂದಿಗೂ ಸಾರ್ವಜನಿಕರಿಗೆ ಅನುಕೂಲವಾಗುವಂತಹ ಉಚಿತ ಸಾಮೂಹಿಕ ವಿವಾಹಗಳು, ಅನ್ನಸಂತರ್ಪಣೆಗಳು ಇತರ ಧಾರ್ಮಿಕ ಉತ್ಸವಗಳನ್ನು ನಡೆಸುತ್ತಿದ್ದಾರೆ. ಈ ಸಮುದಾಯದವರು ಬೇರೆ ಜನಾಂಗದವರಿಗೆ ದೇವಸ್ಥಾನಗಳನ್ನು ನಿರ್ಮಿಸಲು ಮತ್ತು ಇತರ ಕಲ್ಯಾಣ ಕಾರ್ಯಗಳಿಗೆ ಸಹಾಯವನ್ನು ಮಾಡುತ್ತಾರೆ.

ಹೊಸಪೇಟೆಯಲ್ಲಿ ನೆಲೆಸಿರುವ ವರ್ತಕ ಸಮುದಾಯಗಳಲ್ಲಿ ಗುಜರಾತಿ ವರ್ತಕರು ಒಬ್ಬರಾಗಿದ್ದಾರೆ. ಇವರ ಅನೇಕ ಪಂಗಡಗಳು ಈ ನಗರದಲ್ಲಿ ನೆಲೆಸಿವೆ. ಗುಜರಾತಿಗಳಲ್ಲಿ ಹೊಸಪೇಟೆ ನಗರದಲ್ಲಿ ಅಧಿಕ ಸಂಖ್ಯೆಯಲ್ಲಿ ಪಾಟೇಲ ಸಮುದಾಯದವರು ಇದ್ದಾರೆ. ಇವರ ಕುಲದೇವತೆ ಉಮಿಯಾದೇವಿ ಪಾರ್ವತಿ. ಈ ದೇವತೆಯ ದೇವಾಲಯವೂ ಅಹಮದಾಬಾದ್‌ನಲ್ಲಿದೆ. ಇವರು ರಾಮ;ಕೃಷ್ಣ ದೇವರನ್ನು ಆರಾಧಿಸುತ್ತಾರೆ. ಇವರಿಗೆ ಧಾರ್ಮಿಕ ವಿಷಯಗಳಲ್ಲಿ ಹೆಚ್ಚಿನ ಆಸಕ್ತಿ ಇದೆ. ಇವರು ಸಸ್ಯಹಾರಿಗಳಾಗಿದ್ದು, ಇವರು ದೇವರಿಗೆ ಸಿಹಿ ನೈವೇದ್ಯವನ್ನು ಅರ್ಪಿಸುತ್ತಾರೆ. ಇವರು ದೀಪಾವಳಿ, ದಸರಾ, ಗೋಕುಲಾಷ್ಟಮಿ, ಹೋಳಿ, ಹಬ್ಬಗಳನ್ನು ಆಚರಿಸುತ್ತಾರೆ.

ಹೊಸಪೇಟೆಯಲ್ಲಿ ನೆಲೆಸಿರುವ ಮತ್ತೊಂದು ಪ್ರಮುಖ ಸಮುದಾಯವೆಂದರೆ ಶೆಟ್ಟಿಗಳು. ಇವರು ಮೂಲತಃ ಧಾರ್ಮಿಕ ಪ್ರವೃತ್ತಿವುಳ್ಳವರಾಗಿದ್ದು, ಇವರ ಆರಾಧ್ಯ ದೈವ ವಾಸವಿ. ಇವರ ಕುಲದೇವತೆ ಕನ್ನಿಕ ಪರಮೇಶ್ವರಿ. ಇವರು ಹಿಂದೂಧರ್ಮದ ಎಲ್ಲ ಹಬ್ಬಗಳನ್ನು ಆಚರಿಸುತ್ತಾರೆ. ಅದರಲ್ಲಿ ಇವರು ವಾಸವಿಜಯಂತಿ, ಶಂಕರ, ಮಧ್ವರ ಜಯಂತಿಗಳನ್ನು ಆಚರಿಸುತ್ತಾರೆ. ಇವರು ರಾಜಸ್ಥಾನಿ ಮತ್ತು ಗುಜರಾತ್ ಸಮುದಾಯದವರು ಆಚರಿಸುವ ಹಬ್ಬಗಳಲ್ಲಿಯೂ ಭಾಗವಹಿಸುತ್ತಾರೆ. ಶ್ರೀಶೈಲಾ, ಮಂತ್ರಾಲಯ, ಶಿರಡಿ, ತಿರುಪತಿಗಳಲ್ಲಿ ನಡೆಯುವ ಅನ್ನದಾನಕ್ಕೆ ಈ ಸಮುದಾಯದವರು ಸಹಾಯವನ್ನು ಮಾಡುತ್ತಾರೆ. ಇವರು ನಗರದಲ್ಲಿ ನಗರೇಶ್ವರ ಮತ್ತು ವೆಂಕಟೇಶ್ವರ ದೇವಾಲಯಗಳನ್ನು ನಿರ್ಮಿಸಿದ್ದಾರೆ. ದೇವಾಲಯಗಳ ನಿರ್ಮಾಣದ ಜೊತೆಗೆ ಅನೇಕ ಕಲ್ಯಾಣ ಮಂಟಪಗಳನ್ನು ನಿರ್ಮಿಸಿದ್ದಾರೆ. ಅವುಗಳೆಂದರೆ,

೧. ಕಾಕುಬಾಳ ಲಕ್ಷ್ಮಣ್ಣ ಶೆಟ್ಟಿ ಕಲ್ಯಾಣ ಮಂಟಪ.

೨. ಬಂಡ್ರಿ ರಾಘಪ್ಪ ಶೆಟ್ಟಿ ಕಲ್ಯಾಣ ಮಂಟಪ (೧೯೬೩)

೩. ಕಟ್ಟಿ ನಂಜಪ್ಪ ಶೆಟ್ಟಿ ಕಲ್ಯಾಣ ಮಂಟಪ. ೧೯೪೩

೪. ವಾಸವಿ ಕಲ್ಯಾಣ ಮಂಟಪ

೫. ಪತ್ತಿಕೊಂಡ ಛತ್ರ (೧೯೦೩)

ಈ ರೀತಿಯಾಗಿ ಅನೇಕ ಕಲ್ಯಾಣ ಮಂಟಪಗಳನ್ನು ನಿರ್ಮಿಸಿದ್ದಾರೆ.[೨೫]

ಈ ಎಲ್ಲ ಮೇಲಿನ ಧಾರ್ಮಿಕ ಆಚರಣೆಗಳನ್ನು ಶೆಟ್ಟಿ ಸಮುದಾಯವು ಆಚರಿಸುತ್ತದೆ.

ಹೊಸಪೇಟೆಯ ವರ್ತಕ ಸಮುದಾಯಗಳಲ್ಲಿ ಒಬ್ಬರಾದ ಮುಸ್ಲಿಮ ಅನೇಕ ಧಾರ್ಮಿಕ ಆಚರಣೆಗಳನ್ನು ಆಚರಿಸುತ್ತಾರೆ. ಇವರು ಮುಖ್ಯವಾಗಿ ರಂಜಾನ್, ಬಕ್ರೀದ್, ಮೊಹರಂ, ಗ್ಯಾರವಿ, ಈದ್‌ಮಿಲಾದ್, ಬಡಿರಾತ್ ಎಂಬ ಹಬ್ಬಗಳನ್ನು ಆಚರಿಸುತ್ತಾರೆ. ಸಾಮಾನ್ಯವಾಗಿ ಧಾರ್ಮಿಕ ವ್ಯಕ್ತಿಗಳು ದಿನಕ್ಕೆ ೫ ಸಲ ನಮಾಜ್ ಮಾಡುತ್ತಾರೆ. ರಂಜಾನ್ ಅವಧಿಯಲ್ಲಿನ ತಿಂಗಳು ಉಪವಾಸವನ್ನು ಮಾಡುತ್ತಾರೆ. ಬಕ್ರೀದ್ ಹಬ್ಬಗಳಲ್ಲಿ ಪ್ರಾಣಿಗಳನ್ನು ಬಲಿಕೊಟ್ಟು ಮಾಂಸವನ್ನು ದಾನ ಮಾಡುತ್ತಾರೆ. ಗ್ಯಾರವಿ ಎಂಬ ಹಬ್ಬವನ್ನು ಆಚರಿಸುತ್ತಾರೆ. ಮೆಬೂಬಾನಿ ಧ್ವಜ ಸೇರಿಸಿ ತಮ್ಮ ಯೋಗ್ಯತಾ ಅನುಸಾರ ಊಟವನ್ನು ಹಾಕಿಸುತ್ತಾರೆ. ಬಡಿರಾತ್ ಹಬ್ಬದಲ್ಲಿ ದಿವಂಗತ ಹಿರಿಯರಿಗೆ ಬಟ್ಟೆಗಳನ್ನು ಇಟ್ಟು ಹಬ್ಬವನ್ನು ಆಚರಿಸುತ್ತಾರೆ. ಈ ಸಮುದಾಯದವರು ಪ್ರತಿ ಶುಕ್ರವಾರ ಮಸೀದಿಗಳಿಗೆ ಹೋಗಿ ಪ್ರಾರ್ಥನೆ ಮಾಡುತ್ತಾರೆ.

ಹೊಸಪೇಟೆಯಲ್ಲಿ ನೆಲೆಸಿರುವ ವರ್ತಕ ಸಮುದಾಯಗಳಲ್ಲಿ ಬ್ರಾಹ್ಮಣ ಸಮುದಾಯವೂ ಒಂದಾಗಿದೆ. ಇವರಲ್ಲಿ ವೈಷ್ಣವರು, ಸ್ಮಾರ್ತರು ಎಂಬ ಪಂಗಡಗಳಿವೆ. ಸ್ಮಾರ್ತರು ಶೈವಧರ್ಮವನ್ನು ಆಚರಣೆ ಮಾಡುತ್ತಾರೆ. ವಿಶೇಷವಾಗಿ ಶಿವ ಪೂಜೆಯನ್ನು ಇವರು ಮಾಡುತ್ತಾರೆ. ವಿಭೂತಿಯನ್ನು ಧರಿಸುತ್ತಾರೆ. ವೈಷ್ಣವರು ವಿಷ್ಣುವಿನ ಭಕ್ತರು ಸಾಮಾನ್ಯವಾಗಿ ವೈಷ್ಣವಧರ್ಮ ಆಚರಣೆ ಮಾಡುತ್ತಾರೆ. ಇವರು ನಾಮಧಾರಿಗಳಾಗಿದ್ದು, ವಿಶೇಷವಾಗಿ ವಿಷ್ಣುವಿನ ಪೂಜೆ ಮಾಡುತ್ತಾರೆ. ಸಾಮಾನ್ಯವಾಗಿ ಎರಡೂ ಪಂಗಡದವರು ಪೂಜಾರಿಗಳಾಗಿದ್ದು, ಅವರವರ ಮತಗಳಿಗೆ ಸಂಬಂಧಿಸಿದ ಪೂಜಾ ಕಾರ್ಯಗಳನ್ನು ನೆರವೇರಿಸುತ್ತಾರೆ. ಮತ್ತು ಬೇರೆ ಸಮುದಾಯಗಳ ಧಾರ್ಮಿಕ ಆಚರಣೆಗಳನ್ನು ನೆರವೇರಿಸುತ್ತಾರೆ. ಈ ಸಮುದಾಯದವರು ಹೆಚ್ಚಾಗಿ ದೇವಾಲಯಗಳಲ್ಲಿ ಅರ್ಚಕರಾಗಿ ಕಾರ್ಯನಿರ್ವಹಿಸುತ್ತಾರೆ.

ಈ ಮೇಲಿನ ವರ್ತಕ ಸಮುದಾಯಗಳಲ್ಲದೆ ಇನ್ನಿತರ ಸಮುದಾಯಗಳು ತಮ್ಮದೇ ಆದ ಧಾರ್ಮಿಕ ಆಚರಣೆಗಳನ್ನು ಆಚರಿಸುತ್ತಾರೆ. ಮೇದಾರರು ಓಂಕಾರೇಶ್ವರ ಮತ್ತು ಚೌಡೇಶ್ವರ ದೇವರನ್ನು ಆರಾಧಿಸುತ್ತಾರೆ. ಚೌಡೇಶ್ವರಿ ಇವರ ಕುಲದೇವತೆಯಾಗಿದ್ದಾಳೆ. ಗೌಳಿಗರು ವೀರಭದ್ರ ದೇವರ ಆರಾಧಕರಾಗಿದ್ದಾರೆ.

ಈ ರೀತಿಯಾಗಿ ಅನೇಕ ವರ್ತಕ ಸಮುದಾಯಗಳು ತಮ್ಮದೇ ನಂಬಿಕೆ ಆಚರಣೆಗಳನ್ನು ಹೊಂದಿದ್ದು, ವಿವಿಧ ಸಮುದಾಯದ ವಿಶಿಷ್ಟ ನಂಬಿಕೆ ಹಾಗೂ ಆಚರಣೆಗಳು ಸೇರಿ ಹೊಸ ಸಂಸ್ಕೃತಿಯ ಉಗಮವಾದಂತಾಗಿದೆ.

ಈ ಸಮುದಾಯಗಳು ತಮ್ಮ ವ್ಯಾಪಾರ ವೃತ್ತಿಯಿಂದ ಬಂದ ಆದಾಯವನ್ನು ವಿವಿಧ ಧಾರ್ಮಿಕ ಕಾರ್ಯಗಳಿಗೆ ವಿನಿಯೋಗಿಸುತ್ತಾರೆ. ಇವರು ಹೆಚ್ಚಿನ ಪ್ರಮಾಣದ ಧಾನ ಧರ್ಮಗಳನ್ನು ಮಾಡುತ್ತಾರೆ. ಅನೇಕ ದೇವಾಲಯ, ಮಂಟಪ, ಮಠ, ಅನ್ನಛತ್ರ ಮೊದಲಾದವುಗಳ ನಿರ್ಮಾಣ ಮತ್ತು ಜೀರ್ಣೋದ್ಧಾರಕ್ಕಾಗಿ ಅನೇಕ ರೀತಿಯ ಸಹಾಯವನ್ನು ಮಾಡುತ್ತಾರೆ.[೨]

ಹೊಸಪೇಟೆಯಲ್ಲಿ ನೆಲೆಸಿರುವ ವರ್ತಕ ಸಮುದಾಯಗಳು ಧಾರ್ಮಿಕ, ಶೈಕ್ಷಣಿಕ, ಸಾಂಸ್ಕೃತಿಕ, ಆರ್ಥಿಕ, ರಾಜಕೀಯ ಕಾರ್ಯಚಟುವಟಿಕೆಗಳ ಜೊತೆಗೆ ಅನೇಕ ಸಾರ್ವಜನಿಕ ಕಾರ್ಯಗಳನ್ನು ಮಾಡುತ್ತಾರೆ.

ರಾಜಸ್ಥಾನಿ ಸಮುದಾಯದವರು ವ್ಯಾಪಾರದ ಜೊತೆಗೆ ಇನ್ನಿತರ ಸಾರ್ವಜನಿಕ ಕಾರ್ಯಗಳನ್ನು ಮಾಡುತ್ತಾರೆ. ಉದಾಹರಣೆಗೆ ಹಂಪಿ, ಕನ್ನಡ ವಿಶ್ವವಿದ್ಯಾಲಯ, ಕಮಲಾಪುರ, ರೈಲ್ವೆಸ್ಟೇಷನ್, ಬಸ್ ನಿಲ್ದಾಣ ಸರಕಾರಿ ಆಸ್ಪತ್ರೆಯಲ್ಲಿ ನೀರಿನ ಅರವಟ್ಟಿಗೆಯನ್ನು ಸ್ಥಾಪಿಸಿದ್ದಾರೆ. ಕಾಲೇಜುಗಳಿಗ ಭೂಮಿಯನ್ನು ದಾನ ಮಾಡಿದ್ದಾರೆ. ತುರ್ತು ಪರಿಸ್ಥಿತಿಯಲ್ಲಿ ಶೀಘ್ರವಾದ ಚಿಕಿತ್ಸೆಯನ್ನು ಒದಗಿಸಲು ಅಂಬುಲೈನ್ಸ್ ವ್ಯವಸ್ಥೆಯನ್ನು ಕಲ್ಪಿಸಿದ್ದಾರೆ.

ಗುಜರಾತ್ ಸಮುದಾಯದವರು ಅನೇಕ ಸಾರ್ವಜನಿಕ ಕಾರ್ಯಗಳನ್ನು ಮಾಡುತ್ತಿದ್ದಾರೆ. ಇವರು ಗೋಶಾಲೆಯನ್ನು ನಡೆಸುತ್ತಿದ್ದಾರೆ. ಧಾರ್ಮಿಕ ಪ್ರವೃತ್ತಿಯವರಾಗಿದ್ದು ಹೆಚ್ಚಿನ ದಾನ ಧರ್ಮಗಳನ್ನು ಮಾಡುತ್ತಾರೆ. ಪಂಪಸರೋವರದಲ್ಲಿ ಇಲ್ಲಿಗೆ ಬರುವ ಯಾತ್ರಿಕರಿಗೆ ಅನುಕೂಲವಾಗಲೆಂದು ಯಾತ್ರಾ ನಿಲಯವನ್ನು ನಿರ್ಮಿಸಿದ್ದಾರೆ. ಈ ನಿಲಯದಲ್ಲಿ ದೊಡ್ಡ ಸಭಾಂಗಣವನ್ನು ನಿರ್ಮಿಸಿದ್ದಾರೆ.

ನಗರದಲ್ಲಿನ ವರ್ತಕ ಸಮುದಾಯಗಳು ಈ ಮೇಲಿನ ಎಲ್ಲ ಅಂಶಗಳಿಂದ ನಗರದಲ್ಲಿ ತಮ್ಮದೆ ಆದ ಅಸ್ತಿತ್ವವನ್ನು ಹೊಂದಲು ವ್ಯಾಪಾರದಲ್ಲಿ ಬೆಳವಣಿಗೆ ಹೊಂದಲು, ತಮ್ಮದೇ ಆದ ಪ್ರತ್ಯೇಕತೆಯನ್ನು ಗುರುತಿಸಿಕೊಳ್ಳಲು ನಗರದಲ್ಲಿ ವ್ಯಾಪಾರ ಮಾತ್ರವಲ್ಲದೆ ಸಾಮಾಜಿಕ, ಧಾರ್ಮಿಕ, ಆರ್ಥಿಕ, ಶೈಕ್ಷಣಿಕ, ಆರೋಗ್ಯ, ಸಾರ್ವಜನಿಕ ಕಾರ್ಯಗಳನ್ನು ಮಾಡುತ್ತಿದ್ದಾರೆ.

೫.೬. ಸಮುದಾಯಗಳ ಅಂತರ್ ಸಂಬಂಧಗಳು ಹಾಗೂ ಬಿಕ್ಕಟ್ಟುಗಳು

ಹೊಸಪೇಟೆ ನಗರದಲ್ಲಿ ಅನೇಕ ವರ್ತಕ ಸಮುದಾಯಗಳು ನೆಲೆಸಿದ್ದು, ಇವು ನಗರದ ಆರ್ಥಿಕ, ರಾಜಕೀಯ, ಸಾಮಾಜಿಕ ಸಾಂಸ್ಕೃತಿಕ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸಿವೆ. ಹೊಸಪೇಟೆಯಲ್ಲಿ ಅನೇಕ ವರ್ತಕ ಸಮುದಾಯಗಳಿದ್ದು, ಕೆಲವರು ಸ್ಥಳೀಯ ವರ್ತಕರಾಗಿದ್ದು ಇನ್ನು ಕೆಲವರು ದೇಶದ ವಿವಿಧ ಪ್ರದೇಶಗಳಿಂದ ವಲಸೆ ಬಂದವರಾಗಿರುತ್ತಾರೆ. ಬೇರೆ ಕಡೆಯಿಂದ ಬಂದು ಇಲ್ಲಿ ವ್ಯಾಪಾರ ಮಾಡಿ ಯಶಸ್ಸನ್ನು ಗಳಿಸಬೇಕಾದರೆ ಈ ಪ್ರದೇಶದ ವರ್ತಕರ ಸಹಕಾರ ಬೇಕಾಗುತ್ತದೆ.

ದೇಶದ ವಿವಿಧ ಭಾಗಗಳಿಂದ ವಲಸೆ ಬಂದಿರುವ ವಿವಿಧ ವರ್ತಕ ಸಮುದಾಯಗಳಿಗೆ ಇಲ್ಲಿಯ ಸ್ಥಳೀಯ ವರ್ತಕರೂ ಎಲ್ಲ ರೀತಿಯ ಸಹಾಯ, ಸಹಕಾರವನ್ನು ನೀಡಿದ್ದಾರೆ. ವಲಸೆ ಬಂದು ಇಲ್ಲಿ ವ್ಯಾಪಾರ ಮಾಡಲು ಇಲ್ಲಿಯ ಸರಕಾರವಾಗಲಿ ಹಾಗೂ ಸ್ಥಳೀಯ ವರ್ತಕರಾಗಲಿ ಅಡ್ಡಿಯಾಗಿ ಪರಿಣಮಿಸಲಿಲ್ಲ. ಉದಾಹರಣೆಗೆ ಹೊಸಪೇಟೆಯಲ್ಲಿ ಇಂದಿನ ದಿನಗಳಲ್ಲಿ ಸ್ಥಳೀಯ ವರ್ತಕರಿಗಿಂತ ವಲಸೆ ವರ್ತಕರ ಸಂಖ್ಯೆ ಹೆಚ್ಚಾಗಿದ್ದು, ಅವರ ವ್ಯಾಪಾರ-ವಾಣಿಜ್ಯವೆ ಅಧಿಕವಾಗಿ, ಆರ್ಥಿಕವಾಗಿ ಸದೃಢರಾಗಿದ್ದಾರೆ. ಕುಟುಂಬ ಸಮೇತರಾಗಿ ಇಲ್ಲಿಯೇ ನೆಲೆಸಿದ್ದಾರೆ. ಈ ಎಲ್ಲದಕ್ಕೂ ಸ್ಥಳೀಯರ ಸಹಕಾರವು ಅಷ್ಟೆ ಮುಖ್ಯವಾಗಿದೆ.

ಸ್ಥಳೀಯ ವರ್ತಕರ ಮತ್ತು ವಲಸೆ ಬಂದ ವರ್ತಕರ ನಡುವೆ ಒಳ್ಳೆಯ ಸಂಬಂಧವಿದೆ. ಈ ಸಮುದಾಯಗಳು ಪರಸ್ಪರ ಪ್ರೀತಿ, ವಿಶ್ವಾಸ, ಸಹಕಾರ ಗುಣಗಳಿಂದ ತಮ್ಮ ವ್ಯಾಪಾರವನ್ನು ಮುನ್ನಡೆಸಿಕೊಂಡು ಹೋಗುತ್ತಿದ್ದಾರೆ.

ಈ ವರ್ತಕ ಸಮುದಾಯಗಳು ತಮ್ಮ ವೃತ್ತಿಗೆ ಸಂಬಂಧಿಸಿದಂತೆ ವೃತ್ತಿ ಸಂಘಗಳನ್ನು ರಚಿಸಿಕೊಂಡಿದ್ದಾರೆ. ಯಾವುದೇ ಸಮಸ್ಯೆ ಬಂದರೆ ಎಲ್ಲ ವರ್ತಕ ಸಮದಾಯಗಳು ಒಗ್ಗಟ್ಟಾಗಿ ಹೋರಾಟ ಮಾಡುತ್ತಾರೆ.

ಈ ವರ್ತಕ ಸಮುದಾಯಗಳಲ್ಲಿ ಯಾವುದೆ ರೀತಿಯ ವ್ಯತ್ಯಾಸಗಳಿಲ್ಲ. ಎಲ್ಲರೂ ಒಗ್ಗಟ್ಟಾಗಿ ವ್ಯಾಪಾರ ವಹಿವಾಟನ್ನು ನಡೆಸಿ ಹೊಸಪೇಟೆಯ ಆರ್ಥಿಕ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಈ ನಗರದಲ್ಲಿನ ವರ್ತಕ ಸಮುದಾಯಗಳು ಪರಸ್ಪರ ಅನುಸರಿಸಿಕೊಂಡು ಹೋಗುವ ಸ್ವಭಾವವನ್ನು ಹೊಂದಿದ್ದಾರೆ. ಇಂದಿನವರೆಗೆ ಹೊಸಪೇಟೆ ವರ್ತಕ ಸಮುದಾಯಗಳ ನಡುವೆ ಯಾವುದೇ ಬಿಕ್ಕಟ್ಟುಗಳು ತಲೆದೋರಿಲ್ಲ. ಎಲ್ಲ ವರ್ತಕರ ನಡುವೆ ಅಂತರ ಸಂಬಂಧವು ಉತ್ತಮವಾಗಿದೆ. ಯಾವುದೇ ಸಣ್ಣ ಪುಟ್ಟ ಸಮಸ್ಯೆಯಿದ್ದರೆ ಸಂಘಗಳಲ್ಲಿ ಚರ್ಚೆಮಾಡಿ ಬಗೆಹರಿಸಿಕೊಳ್ಳುತ್ತಾರೆ. ಯಾವುದೇ ಒಂದು ಪ್ರದೇಶದ ಬೆಳವಣಿಗೆಯಲ್ಲಿ ಅಲ್ಲಿ ನೆಲೆಸಿರುವ ಸಮುದಾಯಗಳ ಸಂಬಂಧಗಳು ಮುಖ್ಯವೆನಿಸುತ್ತವೆ. ಅದೇ ರೀತಿಯಾಗಿ ಹೊಸಪೇಟೆ ನಗರದ ಬೆಳವಣಿಗೆಯಲ್ಲಿ ವರ್ತಕ ಸಮುದಾಯಗಳ ಪಾತ್ರವು ಅಷ್ಟೆ ಮುಖ್ಯವಾದದ್ದು. ಹೊಸಪೇಟೆಯಲ್ಲಿ ನೆಲೆಸಿರುವ ವಿವಿಧ ವರ್ತಕ ಸಮುದಾಯಗಳು ತಾವು ಆಚರಣೆ ಮಾಡುವ ವಿವಿಧ ಹಬ್ಬ ಹರಿದಿನಗಳಲ್ಲಿ ಇತರ ಸಮುದಾಯವರನ್ನು ಆಹ್ವಾನಿಸುತ್ತಾರೆ. ಎಲ್ಲರೂ ಸೇರಿ ಹಬ್ಬವನ್ನು ಆಚರಣೆ ಮಾಡುತ್ತಾರೆ. ಯಾವುದೇ ಒಂದು ನಗರ ಪ್ರದೇಶದಲ್ಲಿ ನೆಲೆಸಿರುವ ವರ್ತಕ ಸಮುದಾಯಗಳ ನಡುವೆ ಯಾವುದೇ ರೀತಿಯ ಬಿಕ್ಕಟ್ಟುಗಳು ಇಲ್ಲದಿದ್ದರೂ, ತಮ್ಮ ವ್ಯಾಪಾರ ವಾಣಿಜ್ಯಕ್ಕೆ ಸಂಬಂಧಿಸಿದಂತೆ ಪೈಪೋಟಿ ಇರುತ್ತದೆ.

ಹೊಸಪೇಟೆ ನಗರವು ಪ್ರಮುಖ ವ್ಯಾಪಾರ ಕೇಂದ್ರವಾಗಿ ಬೆಳೆಯುತ್ತಿದೆ. ಈ ನಗರದಲ್ಲಿ ಅನೇಕ ವರ್ತಕ ಸಮುದಾಯಗಳು ವಾಸವಾಗಿದ್ದು, ಈ ಸಮುದಾಯಗಳು ತಮ್ಮ ಬಹುಮುಖಿ ಚಟುವಟಿಕೆಗಳಿಂದ ನಗರದ ವ್ಯಾಪ್ತಿ ವಿಸ್ತಾರವಾಗುವಂತೆ ಮಾಡಿವೆ. ಇದರಿಂದ ನಗರಗಳು ರಚನಾತ್ಮಕವಾಗಿ ಹಾಗೂ ಕಾರ್ಯಾತ್ಮಕವಾಗಿ

ಬೆಳವಣಿಗೆ ಹೊಂದುವಂತಾಗಿದೆ. ಈ ಸಮುದಾಯಗಳು ಹೆಚ್ಚಾಗಿ ತಮ್ಮ ವಾಸಕ್ಕೆ ಪ್ರತ್ಯೇಕವಾಗಿ ವಾಸಮಾಡಲು ಇಷ್ಟಪಡುತ್ತಾರೆ. ಆದ್ದರಿಂದ ಪ್ರತ್ಯೇಕವಾದ ಪ್ರದೇಶಗಳನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಒಂದು ಜಾತಿಯ ಅಥವಾ ಧರ್ಮದ ಜನರು ಒಂದೆ ಕಡೆ ನೆಲೆ ನಿಲ್ಲಲು ಇಷ್ಟಪಡುತ್ತಾರೆ. ಇದಕ್ಕೆ ಅವರ ವ್ಯಾಪಾರದ ಮತ್ತು ಧರ್ಮದ ಹಿತಾಸಕ್ತಿಗಳನನು ಕಾಪಾಡಿಕೊಳ್ಳುವುದು ಉದ್ದೇಶವಾಗಿರಬೇಕು. ಉದಾಹರಣೆಗೆ ರಾಜಸ್ಥಾನಿಗಳು, ಗುಜರಾತಿಗಳು, ಶೆಟ್ಟಿಗಳು, ಮುಸ್ಲಿಮರು ಪ್ರತ್ಯೇಕವಾಗಿಯೇ ಗುರುತಿಸಿಕೊಳ್ಳಲು ಇಷ್ಟಪಡುತ್ತಾರೆ. ಏಕೆಂದರೆ ವ್ಯಾಪಾರದಲ್ಲಿ ಪರಸ್ಪರ ಪೈಪೋಟಿ ಇರುತ್ತದೆ. ಆದರೆ ಇದು ಧಾರ್ಮಿಕ, ಕಲಹಗಳಿಗೆ ಮತ್ತು ಯಾವುದೇ ರೀತಿಯ ಕಲಹಗಳಿಗೆ ಕಾರಣವಾಗಿದ್ದು ಕಂಡುಬರುವುದಿಲ್ಲ. ಇವರೆಲ್ಲರೂ ವ್ಯಾಪಾರಿ ಸಮುದಾಯಗಳಾಗಿದ್ದರಿಂದ ಸಹಜವಾಗಿಯೇ ಪರಸ್ಪರ ವಿರೋಧಗಳು ಏರ್ಪಡುತ್ತವೆ. ಆದರೆ ಇವುಗಳು ದೊಡ್ಡ ಬಿಕ್ಕಟ್ಟುಗಳಾಗಿಲ್ಲ. ಈ ಸಮುದಾಯಗಳು ತಾವು ನೆಲೆ ನಿಂತ ಪ್ರದೇಶಗಳಲ್ಲಿ ತಮ್ಮ ಧರ್ಮಕ್ಕೆ ಸಂಬಂಧಿಸಿದ ಸಂಘ-ಸಂಸ್ಥೆಗಳನ್ನು, ಶಿಕ್ಷಣ ಸಂಸ್ಥೆಗಳನ್ನು, ಆಸ್ಪತ್ರೆ, ಇನ್ನಿತರ ಸಂಸ್ಥೆಗಳನ್ನು ನಿರ್ಮಿಸಿಕೊಂಡಿದ್ದಾರೆ. ಆದ್ದರಿಂದ ನಗರವು ವಾಸದ, ಧಾರ್ಮಿಕ ಕೆಲಸ ಕಾರ್ಯಗಳ ವ್ಯಾಪಾರ ಮತ್ತು ವಾಣಿಜ್ಯದ ಕೇಂದ್ರಗಳಾಗಿಯೂ ಬೆಳೆಯುತ್ತಿದೆ.[೨೭] ನಗರದಲ್ಲಿನ ಕೆಲವೊಂದು ವರ್ತಕ ಸಮುದಾಯಗಳು ಒಂದೇ ಕಡೆ ವ್ಯಾಪಾರವನ್ನು ನಡೆಸುತ್ತಿವೆ.

ಈ ರೀತಿಯಾಗಿ ನಗರದಲ್ಲಿ ಅನೇಕ ವರ್ತಕ ಸಮುದಾಯಗಳಿದ್ದು, ಈ ಸಮುದಾಯಗಳು ಪ್ರತ್ಯೇಕವಾಗಿ ಗುರುತಿಸಿಕೊಳ್ಳುತ್ತಿವೆ. ಈ ವರ್ತಕ ಸಮುದಾಯಗಳ ನಡುವೆ ಪೈಪೋಟಿ ಇದ್ದರೂ. ಎಲ್ಲ ವರ್ತಕ ಸಮುದಾಯಗಳು ಉತ್ತಮ ಸಂಬಂಧವನ್ನು ಹೊಂದಿವೆ.

ಟಿಪ್ಪಣಿಗಳು

೧. ಹಿರೇಮಠ ಬಿ.ಆರ್., ಶಾಸನಗಳಲ್ಲಿ ಕರ್ನಾಟಕದ ವರ್ತಕರು, ಧಾರವಾಡ, ೧೯೮೬, ಪುಟ ೭೧-೭೨; ಚಿದಾನಂದ ಮೂರ್ತಿ ಎನ್., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಸಂಪುಟ - ೧, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೬೬, ಪುಟ ೪೨೧-೨೩.

೨. ಮೋಹನ್‌ಕೃಷ್ಣ ರೈ.ಕೆ., ವಸಾಹತುಪೂರ್ವ ಕರ್ನಾಟಕದ ನಗರ ಚರಿತ್ರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬ ಪುಟ.೩೮-೪೦.

೩. ಬಳ್ಳಾರಿ ಜಿಲ್ಲಾ ಗೆಜೆಟಿಯರ್, ಮೈಸೂರು ಸರಕಾರ, ಬೆಂಗಳೂರು, ೧೯೭೨; ಮೌಖಿಕ ಸಂದರ್ಶನ, ಪಾಂಡುರಂಗ ಶೆಟ್ಟಿ, ವಾಣಿಜ್ಯ ಮಂಡಳಿಯ ಅಧ್ಯಕ್ಷರು, ೨೫.೦೬.೨೦೦೯ ಹೊಸಪೇಟೆ

೪. ಮೌಖಿಕ ಸಂದರ್ಶನ, ಕಾಂತಿಲಾಲ್, ಗುಜರಾತ್ ಸಮುದಾಯದ ಮುಖಂಡರು, ೦೮.೦೮.೨೦೦೯ ಹೊಸಪೇಟೆ

೫. ಮೌಖಿಕ ಸಂದರ್ಶನ, ಮಧುಕರರಾವ್, ಬಟ್ಟೆ ವ್ಯಾಪಾರಿಗಳ ಸಂಘದ ಅಧ್ಯಕ್ಷರು, ೧೦.೦೮.೨೦೦೯ ಹೊಸಪೇಟೆ

೬. ಮೋಹನಕೃಷ್ಣ ರೈ. ಕೆ., ವಸಾಹತುಶಾಹಿ ಮತ್ತು ನಗರೀಕರಣ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭, ಪುಟ. ೨೫

೭. ಮೌಖಿಕ ಸಂದರ್ಶನ, ಆರ್.ಡಿ. ಸೋನಿ, ಸೋನಿ ಸಮುದಾಯದ ಮುಖಂಡರು, ೧೫.೦೭.೨೦೦೯

೮. ಮೌಖಿಕ ಸಂದರ್ಶನ, ರಘುನಾಥ ಶೆಟ್ಟಿ, ಕಿರಾಣಿ ರಿಟೇಲ ಡಿಲಕ್ಸ್ ಅಸೋಸಿಯೇಷನ್ ಕಾರ್ಯದರ್ಶಿಗಳು, ೨೦೦೯

೯. ಮೌಖಿಕ ಸಂದರ್ಶನ, ಭೂಪಾಲರಾಘುವೇಂದ್ರ ಶೆಟ್ಟಿ, ಆರ್ಯ ವೈಶ್ಯ ಸಂಘದ ಕಾರ್ಯದರ್ಶಿಗಳು, ೦೮.೦೭.೨೦೦೯

೧೦. ಮೌಖಿಕ ಸಂದರ್ಶನ, ಕಾಂತಿಲಾಲ್, ಪಾಟೀಲ ಸಮುದಾಯದ ಮುಖಂಡರು, ೨೦೦೯

೧೧. ಮೌಖಿಕ ಸಂದರ್ಶನ, ಆರ್.ಡಿ. ಸೋನಿ, ಸೋನಿ ಸಮುದಾಯದ ಮುಖಂಡರು, ೨೦೦೯

೧೨. ಮೌಖಿಕ ಸಂದರ್ಶನ, ರಾಜೇಶ, ಜೈನ ಸಮುದಾಯದವರು, ೨೦೦೯

೧೩. ಮೌಖಿಕ ಸಂದರ್ಶನ, ವಿ. ಸತ್ಯನಾರಾಯಣ, ಸಮಾಜಸೇವಕರು, ೨೦೦೯

೧೪. ಹಿಂದೂಭಂಗ, ಪೋರ್ಟ್ಸ್ ಆ್ಯಂಡ್ ದೇರ್ ಇಂಟರಲ್ಯಾಂಡ್ಸ್ ಇನ್ ಇಂಡಿಯಾ, ಮನೋಹರ ಪಬ್ಲಿಕೇಷನ್, ನ್ಯೂಡೆಲ್ಲಿ ೧೯೯೨, ಪುಟ. ೧೮೧-೮೫

೧೫. ಮೌಖಿಕ ಸಂದರ್ಶನ, ರಾಜೇಶ, ೨೦೦೯

೧೬. ರಣಬೀರ್ ಚಕ್ರವರ್ತಿ, ಟ್ರೇಡ್ ಆ್ಯಂಡ್ ಟ್ರೇಡರ್ಸ್ ಇನ್ ಅರ್ಲಿ ಇಂಡಿಯನ್ ಸೊಸೈಟಿ, ಮನೋಹರ ಪಬ್ಲಿಕೇಷನ, ನ್ಯೂಡೆಲ್ಲಿ, ೨೦೦೨-೦೭ ಪುಟ. ೯೨-೧೦೨

೧೭. ಮೌಖಿಕ ಸಂದರ್ಶನ, ಆರ್.ಡಿ. ಸೋನಿ, ೨೦೦೯

೧೮. ಮೌಖಿಕ ಸಂದರ್ಶನ, ವಿ. ಸತ್ಯನಾರಾಯಣ, ೨೦೦೯

೧೯. ಡ್ಯಾನಿಸ್ ಲ್ಯಾಂಬರ್ಡ್ ಅಂಡ್ ಜೀನ್, ಮರ್ಚ್‌ಂಟಸ್ಸ್ ಆ್ಯಂಡ್ ಬಿಸ್‌ನೆಸ್‌ಇನ್ ಇಂಡಿಯನ್ ಓಸಿಸ್ ಅಂಡ್ ಚೈನಾ ಸೀ, ಆಕ್ಸ್‌ಫರ್ಡ್ ಯೂನಿವರ್ಸಿಟಿ, ೨೦೦೦, ಪುಟ. ೧೦೫-೧೧೩.

೨೦. ಮೌಖಿಕ ಸಂದರ್ಶನ, ಭೂಪಾಲರಾಘುವೇಂದ್ರ ಶೆಟ್ಟಿ, ೨೦೦೯

೨೧. ಮಹಾದೇವ ಸಿ. ಹೊಸಪೇಟೆ ತಾಲೂಕು ದರ್ಶನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨ ಪುಟ.೪೦೦

೨೨. ಅದೇ ಪುಟ.೩೨೫-೩೨೮

೨೩. ಮೌಖಿಕ ಸಂದರ್ಶನ, ವಿ. ಸತ್ಯನಾರಾಯಣ, ೨೦೦೯

೨೪. ಮಹಾದೇವ ಸಿ. ಹಾಗೂ ಇನ್ನಿತರರು ೨೦೦೨ ಪೂರ್ವೋಕ್ತ, ಪುಟ.೪೦೦

೨೫. ಅದೇ ಪುಟ ೪೦೧

೨೬. ಅದೇ ಪುಟ. ೧೫೧.

೨೭. ಮೋಹನ್‌ಕೃಷ್ಣ ರೈ.ಕೆ., ೨೦೦೭, ಪೂರ್ವೋಕ್ತ, ಪುಟ ೨೫

• • •

ಅಧ್ಯಾಯ ಆರು

ಸಮಾರೋಪ

ಅಧ್ಯಾಯ ಆರು

ಸಮಾರೋಪ

ಚರಿತ್ರೆಯನ್ನು ಆರ್ಥಿಕ ಹಿನ್ನಲೆಯಿಂದ ಅಧ್ಯಯನ ನಡೆಸುವಾಗ ವ್ಯಾಪಾರ-ವಾಣಿಜ್ಯ, ವರ್ತಕರು ಹಾಗೂ ನಗರ ಪ್ರದೇಶಗಳು ವಿಶೇಷ ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತವೆ. ಇತ್ತೀಚೆಗೆ ಈ ಬಗೆಯ ಅಧ್ಯಯನ ಕ್ರಮದ ಕಡೆಗೆ ಹೆಚ್ಚಿನ ಒಲವು ಕಂಡುಬರುತ್ತಿದೆ. ರಾಜಕೀಯ ನೆಲೆಯಲ್ಲಿ ವ್ಯಾಖ್ಯಾನಗೊಳ್ಳುತ್ತಿದ್ದ ಚರಿತ್ರೆ ಇಂದು ಆರ್ಥಿಕ ಚರಿತ್ರೆಯಾಗಿ ಹಾಗೂ ಸಮಾಜಮುಖಿಯಾಗಿ ವಿಶ್ಲೇಷಣೆಗೊಳ್ಳುತ್ತಿದ್ದು, ಕೃಷಿ, ಉದ್ದಿಮೆ, ವ್ಯಾಪಾರ ಮುಂತಾದ ವಿಚಾರಗಳು ಅಧ್ಯಯನಕ್ಕೊಳಗಾಗುತ್ತಿವೆ. ನಗರೀಕರಣ ಪ್ರಕ್ರಿಯೆಯು ಆಯಾ ಸಮಯ, ಸಂದರ್ಭ ಹಾಗೂ ಪ್ರದೇಶದ ಅರ್ಥ ವ್ಯವಸ್ಥೆಯನ್ನು ರೂಪಿಸುತ್ತಿತ್ತು. ಇದಕ್ಕೆ ರಾಜಪ್ರಭುತ್ವ, ವಸಾಹತು ಪ್ರಭುತ್ವ ಹಾಗೂ ಪ್ರಜಾಪ್ರಭುತ್ವಗಳೆನ್ನುವ ವ್ಯತ್ಯಾಸಗಳಿರುವುದಿಲ್ಲ. ಎಲ್ಲ ಪ್ರಭುತ್ವಗಳ ಕಾಲಾವಧಿಯಲ್ಲಿಯೂ ನಗರೀಕರಣ ಪ್ರಕ್ರಿಯೆ ನಿರ್ಣಾಯಕವಾಗಿತ್ತು.

ರಾಜ್ಯಪ್ರಭುತ್ವದ ಅಸ್ತಿತ್ವ ಆಯಾ ಸಂದರ್ಭದ ಆರ್ಥಿಕತೆಯನ್ನು ಅವಲಂಬಿಸಿರುತ್ತಿತ್ತು. ಆದ್ದರಿಂದ ರಾಜರು ಪೇಟೆ-ಪಟ್ಟಣಗಳ ಉಗಮಕ್ಕೆ ಹಾಗೂ ಆ ಮೂಲಕ ವ್ಯಾಪಾರ ವಹಿವಾಟಿನ ಅಭಿವೃದ್ಧಿಗೆ ಸ್ಪಂದಿಸಿದರು. ಪೇಟೆ-ಪಟ್ಟಣಗಳನ್ನು ನಿರ್ಮಿಸುವ ಅಧಿಕಾರಿಗಳಿಗೆ, ಶ್ರೀಮಂತ ವರ್ತಕರಿಗೆ ಹಾಗೂ ಭೂ ಮಾಲೀಕರಿಗೆ ತೆರಿಗೆ ವಿನಾಯಿತಿಯನ್ನು ಪ್ರಭುತ್ವವು ಘೋಷಿಸಿತ್ತು. ಈ ವಿಚಾರವನ್ನು ಅಂದಿನ ಶಾಸನಗಳು ಹಾಗೂ ಸಾಹಿತ್ಯ ಕೃತಿಗಳು ತಿಳಿಸುತ್ತವೆ. ಹೊಸಪೇಟೆಯೂ ವಿಜಯನಗರದ ಅರಸರ ಆಳ್ವಿಕೆಯ ಕಾಲಾವಧಿಯಲ್ಲಿ ಪಟ್ಟಣದ ಸ್ವರೂಪವನ್ನು ಪಡೆದುಕೊಂಡಿರುವ ಪ್ರದೇಶ.

ವಸಾಹತು ಪ್ರಭುತ್ವದ ಕಾಲಾವಧಿಯಲ್ಲಿ ವಸಾಹತು ನೀತಿಗಳಿಗೆ ಅನುಗುಣವಾಗಿ, ಸ್ಥಳೀಯ ವರ್ತಕರನ್ನು ಬಳಸಿಕೊಳ್ಳಲಾಯಿತು. ಇವರ ವಸಾಹತು ನೀತಿಗೆ ಅನುಗುಣವಾಗಿ ಅನೇಕ ಪಟ್ಟಣಗಳು ವ್ಯಾಪಾರ ಕೇಂದ್ರಗಳಾಗಿ ಬೆಳೆದವು. ಇವರು ತಮ್ಮ ಆಡಳಿತ, ವ್ಯಾಪಾರ ಮತ್ತು ಮಿಲಿಟರಿ ಉದ್ದೇಶಗಳಿಗಾಗಿ ಅನೇಕ

ನಗರಗಳನ್ನು ಬೆಳೆಸಿದರು. ಅದೇ ರೀತಿಯಾಗಿ ಖನಿಜ ಸಂಪತ್ತು ಅಧಿಕವಾಗಿರುವ ಬಳ್ಳಾರಿ ಜಿಲ್ಲೆಯಲ್ಲಿ ಬ್ರಿಟಿಷ್ ಅಧಿಕಾರಿಗಳು ಗಣಿ ಪ್ರದೇಶಗಳ ಸರ್ವೆನಡೆಸಿ, ಅನೇಕ ಗಣಿ ಪ್ರದೇಶಗಳನ್ನು ಗುರುತಿಸಿ, ಗಣಿಗಾರಿಕೆಯನ್ನು ಮಾಡುತ್ತಿದ್ದರು. ತಮ್ಮ ವ್ಯಾಪಾರ-ವಾಣಿಜ್ಯಕ್ಕೆ ಸಂಬಂಧಿಸಿದಂತೆ ಈ ನಗರಕ್ಕೆ ಇತರ ನಗರಗಳಿಂದ ಬರಲು ಅನುಕೂಲವಾಗಲು ಅನೇಕ ರಸ್ತೆ ಮತ್ತು ರೈಲು ಮಾರ್ಗಗಳ ನಿರ್ಮಾಣ ಮಾಡಿದ್ದರು. ೧೮೭೧, ೧೮೮೪ ಮತ್ತು ೧೯೦೫ರಲ್ಲಿ ಈ ಪ್ರದೇಶಕ್ಕೆ ರೈಲುಮಾರ್ಗಗಳ ನಿರ್ಮಾಣಯಿತು. ಇದು ಇಲ್ಲಿನ ವರ್ತಕ ಸಮುದಾಯಗಳು ಬೇರೆ ಪ್ರದೇಶಗಳೊಂದಿಗೆ ಮುಖಾಮುಖಿಯಾಗುವುದಕ್ಕೂ ನೆರವಾಯಿತು. ಅದೇ ರೀತಿ ಆಮದು-ರಫ್ತು ವ್ಯಾಪಾರ ಚುರುಕುಗೊಂಡಿತು.

ಬ್ರಿಟಿಷರಿಗೆ ಸ್ಥಳೀಯ ಮಧ್ಯವರ್ತಿಗಳ ಸಹಕಾರ ಬೇಕಾಗಿತ್ತು. ಇವರು ಮಧ್ಯವರ್ತಿಗಳನ್ನು ಗರಿಷ್ಠ ಪ್ರಮಾಣದಲ್ಲಿ ಬಳಸಿಕೊಂಡರು. ಈ ಪ್ರಕ್ರಿಯೆಯಲ್ಲಿ ಈ ಮಧ್ಯವರ್ತಿಗಳು ಶ್ರೀಮಂತ ವರ್ತಕರಾಗಿ, ಹಣಕಾಸಿನ ವ್ಯವಹಾರ ನಡೆಸುವ ಸಂಸ್ಥೆಗಳಾಗಿ ಹಾಗೂ ಲೇವಾದೇವಿದಾರರಾಗಿ ಬೆಳೆದರು. ಗುಜರಾತಿಗಳು, ರಾಜಸ್ಥಾನಿಗಳು, ಬಣಜಿಗರು ಬ್ರಿಟಿಷರೊಂದಿಗೆ ವ್ಯಾಪಾರದ ಮತ್ತು ಹಣಕಾಸಿನ ಸಂಬಂಧವನ್ನು ಹೊಂದಿದ್ದರು. ಈ ರೀತಿಯಾಗಿ ವರ್ತಕ ಸಮುದಾಯಗಳು ನಾನಾ ರೀತಿಯ ಕೆಲಸಕಾರ್ಯಗಳನ್ನು ನಿರ್ವಹಿಸುವುದರ ಜೊತೆಗೆ ಬ್ರಿಟಿಷರಿಗೆ ನೆರವಾಗಿ ತಮ್ಮ ಆರ್ಥಿಕ ಮಟ್ಟವನ್ನು ಸುಧಾರಿಸಿಕೊಂಡರು. ಇದರಿಂದ ಇವರಿಗೆ ವ್ಯಾಪಾರದಲ್ಲಿ ವಿಶೇಷ ತರಬೇತಿ ದೊರೆತಂತಾಯಿತು.

ಹೊಸಪೇಟೆ ನಗರದಲ್ಲಿ ಅನೇಕ ವರ್ತಕ ಸಮುದಾಯಗಳು ನೆಲೆಸಿವೆ. ಈ ಸಮುದಾಯಗಳಲ್ಲಿ ಕೆಲವರು ಸ್ಥಳೀಯರಾಗಿದ್ದು, ಇನ್ನು ಕೆಲವರು ದೇಶದ ವಿವಿಧ ಪ್ರದೇಶಗಳಿಂದ ಹೊಸಪೇಟೆಗೆ ಉದ್ಯೋಗವನ್ನು ಮಾಡಲು ವಲಸೆ ಬಂದವರು. ವರ್ತಕ ಸಮುದಾಯಗಳಲ್ಲಿ ಮುಖ್ಯವಾಗಿ ಗುಜರಾತಿಗಳು ಹಾಗೂ ರಾಜಸ್ಥಾನಿಗಳು ಇಲ್ಲಿಗೆ ವಲಸೆ ಬಂದವರು. ಇವರು ತಮ್ಮ ವ್ಯಾಪಾರಕ್ಕೆ ಸಂಬಂಧಿಸಿದಂತೆ ದೇಶದ ವಿವಿಧ ಭಾಗಗಳಿಗೆ ವಲಸೆ ಹೋದಂಥವರು. ನಗರದಲ್ಲಿ ನೆಲೆಸಿರುವ ಪ್ರಮುಖರಲ್ಲಿ ಶೆಟ್ಟಿ ಮತ್ತು ಮುಸ್ಲಿಂ ಸಮುದಾಯದವರು ವಿಜಯನಗರ ಕಾಲದಿಂದಲೂ ಇದ್ದಂಥವರು. ಈ ಪ್ರಮುಖ ವರ್ತಕ ಸಮುದಾಯಗಳು ವಿವಿಧ ರೀತಿಯ ವ್ಯಾಪಾರ-ವಾಣಿಜ್ಯಗಳಲ್ಲಿ ತೊಡಗಿ ನಗರದ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರವಹಿಸಿದ್ದಾರೆ.

ರಾಜಪ್ರಭುತ್ವ ಹಾಗೂ ವಸಾಹತು ಪ್ರಭುತ್ವದ ಅವಧಿಗಳಲ್ಲಿ ವರ್ತಕರು ಸಂಪೂರ್ಣ ಸ್ವಾತಂತ್ರವನ್ನು ಪಡೆದುಕೊಂಡಿರಲಿಲ್ಲ. ಪ್ರಭುತ್ವ ಇವರನ್ನು ಅವಲಂಬಿಸಿದ್ದರೂ, ಪ್ರಭುತ್ವದ ಅಧಿಕಾರ ಇವರನ್ನು ನಿಯಂತ್ರಿಸುತ್ತಿತ್ತು. ಆದರೆ ಪ್ರಜಾಪ್ರಭುತ್ವದ ಅವಧಿಯಲ್ಲಿ ವರ್ತಕರು ಸ್ವತಂತ್ರ್ಯವಾಗಿ ವ್ಯವಹರಿಸಲಾರಂಭಿಸಿದರು. ವರ್ತಕ ಸಮುದಾಯಗಳು ಸ್ವತಂತ್ರ್ಯವಾಗಿ ಗುರುತಿಸಿಕೊಳ್ಳುವುದನ್ನೇ ಇಷ್ಟಪಡುತ್ತಾರೆ. ಹೊಸಪೇಟೆಯಲ್ಲಿ ನೆಲೆಸಿರುವ ಅನೇಕ ಸಮುದಾಯಗಳ ಕೆಲವೊಂದು ಉದ್ದೇಶಗಳನ್ನು ಇಟ್ಟುಕೊಂಡು ಹಲವಾರು ಸಂಘ-ಸಂಸ್ಥೆಗಳನ್ನು ಸ್ಥಾಪಿಸಿಕೊಂಡವು. ಇವುಗಳಲ್ಲದೇ ತಮ್ಮದೇ ಆದ ಶಿಕ್ಷಣ

ಸಂಸ್ಥೆಗಳನ್ನು ಮತ್ತು ಆಸ್ಪತ್ರೆಗಳನ್ನು ನಿರ್ಮಿಸಿಕೊಂಡು ತಮ್ಮ ಸಮುದಾಯದವರಿಗೆ ಮಾತ್ರವಲ್ಲದೆ ನಗರದಲ್ಲಿನ ಇತರರಿಗೂ ಈ ಸಂಘ-ಸಂಸ್ಥೆಗಳಿಂದ ನೆರವಾದರು. ಗುಜರಾತಿಗಳು, ರಾಜಸ್ಥಾನಿಗಳು ಮುಂತಾದ ಸಮುದಾಯದವರು ನಗರದಲ್ಲಿನ ಇತರರಿಗಿಂತ ಭಿನ್ನವಾದ ಧಾರ್ಮಿಕ ಆಚರಣೆ ಮತ್ತು ನಂಬಿಕೆಗಳನ್ನು ಹೊಂದಿದ್ದಾರೆ. ವ್ಯಾಪಾರಕ್ಕೆ ಸಂಬಂಧಿಸಿದಂತೆ ಸಮುದಾಯಗಳ ನಡುವೆ ಇದುವರೆಗೂ ಯಾವುದೇ ಬಿಕ್ಕಟ್ಟುಗಳು ತಲೆದೋರಿಲ್ಲ, ಒಂದು ವೇಳೆ ಸಣ್ಣ ಪುಟ್ಟ ತೊಂದರೆಗಳು ಇದ್ದರೆ ಸಂಘ-ಸಂಸ್ಥೆಗಳ ಮುಖಾಂತರ ಬಗೆಹರಿಸಿಕೊಳ್ಳುತ್ತಾರೆ. ನಗರದಲ್ಲಿ ಕೆಲವೊಂದು ವರ್ತಕ ಸಮುದಾಯಗಳು ಇತ್ತೀಚಿನ ದಿನಗಳಲ್ಲಿ ರಾಜಕೀಯದಲ್ಲಿಯೂ ತಮ್ಮನ್ನು ಗುರುತಿಸಿಕೊಂಡಿದ್ದಾರೆ. ಸರ್ಕಾರ ಈ ಸಮುದಾಯದ ವ್ಯಾಪಾರದ ವೃದ್ಧಿಗೆ ಸಂಬಂಧಿಸಿದಂತೆ ಅನೇಕ ರೀತಿಯ ಸೌಲಭ್ಯಗಳನ್ನು ಒದಗಿಸಿದೆ. ತೆರಿಗೆಯಿಂದಾಗುವ ತೊಂದರೆಯನ್ನು ತಪ್ಪಿಸಲು ವ್ಯಾಟ್ ತೆರಿಗೆಯನ್ನು ಜಾರಿಗೆ ತರಲಾಗಿದೆ.

ರಾಜ್ಯದ ಅರ್ಥ ವ್ಯವಸ್ಥೆಯಲ್ಲಿ ವ್ಯಾಪಾರ ಹಾಗೂ ವಾಣಿಜ್ಯ ನಿರ್ಣಾಯಕ ಪಾತ್ರವನ್ನು ವಹಿಸುವುದುದರಿಂದಾಗಿ ಸಹಜವಾಗಿಯೇ ವರ್ತಕರು ವಿಶೇಷ ಸವಲತ್ತುಗಳಿಗೆ ಪಾತ್ರರಾಗುತ್ತಾರೆ. ಭಾರತದ ಪ್ರಮುಖ ವರ್ತಕ ಸಮುದಾಯಗಳಾದ ಗುಜರಾತಿಗಳು, ರಾಜಸ್ಥಾನಿಗಳು ಹಾಗೂ ಗೌಡ ಸಾರಸ್ವತ ಬ್ರಾಹ್ಮಣರು ಚರಿತ್ರೆಯುದ್ದಕ್ಕೂ ಆಯಾ ಸಂದರ್ಭದ ಪ್ರಭುತ್ವದೊಂದಿಗೆ ಉತ್ತಮ ಸಂಬಂಧವನ್ನು ಹೊಂದಿದ್ದರು. ಇಂದಿಗೂ ಈ ವರ್ತಕ ಸಮುದಾಯಗಳು ತಮ್ಮ ಪ್ರಾಮುಖ್ಯತೆಯನ್ನು ಉಳಿಸಿಕೊಂಡಿದ್ದು. ತಾವು ವಲಸೆ ಹೋದ ಪ್ರದೇಶಗಳಲ್ಲಿ ವ್ಯಾಪಾರ-ವಾಣಿಜ್ಯದ ಹೊಸ ವಾತಾವರಣವನ್ನು ಸೃಷ್ಟಿಮಾಡಿವೆ.

• • •

ಅನುಬಂಧ

೧. ಪರಾಮರ್ಶನ ಗ್ರಂಥಗಳು

೨. ಮೌಖಿಕ ಸಂದರ್ಶನ

೩. ನಿಯತಕಾಲಿಕೆಗಳು

೪. ನಕ್ಷೆಗಳು

೫. ಛಾಯಾಚಿತ್ರಗಳು

೧. ಪರಾಮರ್ಶನ ಗ್ರಂಥಗಳು

೦೧. ಕರ್ನಾಟಕದ ಪರಂಪರೆ, ಸಂಪುಟ ೧,೨, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೧೯೯೨.

೦೨. ಕುಂಬಾಸ್, ಬಳ್ಳಾರಿ ಜಿಲ್ಲಾ ಸಾಂಸ್ಕೃತಿಕ ದರ್ಶನ, ಮಾಲತೇಶ ಪ್ರಕಾಶನ ಕುಂಚೂರು ತಾ, ಹರಪನಹಳ್ಳಿ, ೧೯೯೦.

೦೩. ಕೃಷ್ಣ ಕೊಲ್ಹಾರ ಕುಲಕರ್ಣಿ, ಬಿಜಾಪುರ ಆದಿಲ್‌ಶಾಹಿ, ಸಿಕ್ಯಾಬ ಆದಿಲ್‌ಶಾಹಿ ಅಧ್ಯಯನ ಸಂಸ್ಥೆ, ಬಿಜಾಪುರ. ೨೦೦೨.

೦೪. ಕೃಷ್ಣಪ್ಪ ಎಂ.ವಿ., ವಿಜಯನಗರ ಅಧ್ಯಯನ, ಸಂಪುಟ - ೬, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ, ೨೦೦೧.

೦೫. ಕೃಷ್ಣರಾವ್ ಎಂ.ವಿ., ಮತ್ತು ಕೇಶವಭಟ್ಟ ಎಂ., ಕರ್ನಾಟಕದ ಇತಿಹಾಸ ದರ್ಶನ, ಕರ್ನಾಟಕ ಸಹಕಾರ ಪ್ರಕಾಶನ ಮಂದಿರ, ಬೆಂಗಳೂರು, ೧೯೭೦.

೦೬. ಗೋಪಾಲ್ ಬಿ.ಆರ್., ಕರ್ನಾಟಕದ ಇತಿಹಾಸ, ಕನ್ನಡ ಅಧ್ಯಯನ ಸಂಸ್ಥೆ., ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೮೬

೦೭. ಚನ್ನಬಸಪ್ಪ ಎಸ್. ಪಾಟೀಲ, ಕರ್ನಾಟಕ ಶಾಸನಗಳು, ಸಂಪುಟ - ೧, ವಿಜಯನಗರದ ಹಂಪೆಯ ಶಾಸನಗಳು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, ೧೯೯೬

೦೮. ಚಂದ್ರಶೇಖರಪ್ಪ ಟಿ.ಜಿ., ಭಾರತದ ಇತಿಹಾಸ, ಪೂರ್ಣ ಪ್ರಕಾಶನ, ಶಿವಮೊಗ್ಗ, ೨೦೦೭.

೦೯. ಚಿದಾನಂದ ಮೂರ್ತಿ ಎಂ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಬೆಂಗಳೂರು, ೧೯೯೬

೧೦. ಜಯಪ್ಪಗೌಡ ಡಿ.ಎಸ್., ಕರ್ನಾಟಕದ ಕಡಲಾಚೆಯ ಸಂಪರ್ಕಗಳು, ಶುಭೋದಯ ಪ್ರಕಾಶನ, ಮೈಸೂರು, ೧೯೮೩.

೧೧. ತುಕಾರಾಮ ಎಚ್., ಹೊಸಪೇಟೆ ಚಾರಿತ್ರಿಕ ವಿವೇಚನೆ; ಐತಿಹ್ಯ; ಪರಿಶೀಲನೆ, ಶ್ರೀ ಶರಣರ ಸುಹಾಸಿನಿ ಬಳಗ ಹೊಸಪೇಟೆ, ೧೯೮೬

೧೨. ತಂಬಂಡ ವಿಜಯ ಪೂಣಚ್ಚ (ಸಂ), ಚರಿತ್ರೆ ವಿಶ್ವಕೋಶ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧.

೧೩. ದೇವರಕೊಂಡಾರೆಡ್ಡಿ, ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ - ೧ (ಬಳ್ಳಾರಿ ಜಿಲ್ಲೆ), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೮

೧೪. ನಂಜುಂಡಸ್ವಾಮಿ ಎ.ಎಸ್., ಕರ್ನಾಟಕ ಇತಿಹಾಸ (ವಿಜಯನಗರದ ಇತಿಹಾಸ), ಸಮಾಜ ಪುಸ್ತಕಾಲಯ, ಶಿವಾಜಿ ಬೀದಿ, ಧಾರವಾಡ, ೧೯೯೯.

೧೫. ನಾಗೇಗೌಡ ಎಚ್.ಎಲ್., ಪ್ರವಾಸಿ ಕಂಡ ಇಂಡಿಯಾ, ಸಂಪುಟ -೧, ಬೆಂಗಳೂರು, ೨೦೦೬

೧೬. ನಾಗರಾಜು ಎಚ್.ಎಮ್., ವಿಜಯನಗರದ ಇಮ್ಮಡಿ ದೇವರಾಯ, ಶಿವಾರಾಂಪೇಟೆ, ಮೈಸೂರು, ೧೯೯೯.

೧೭. ನಾಗರಾಜ್ ಎಮ್.ಜಿ., ಇತಿಹಾಸ ದರ್ಶನ, ಸಂಪುಟ ೧೨, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು, ೧೯೯೭.

೧೮. ನಾಗರಾಜ ಬಿ.ಎಸ್., ವಿಜಯನಗರ ಸಾಮ್ರಾಜ್ಯದಲ್ಲಿ ನಗರ ಬೆಳವಣಿಗೆ, ವಿಜಯನಗರ ಅಧ್ಯಯನ, ಸಂಪುಟ- ೨, ಮೈಸೂರು, ೧೯೯೭.

೧೯. ಪರಮಶಿವಮೂರ್ತಿ ಡಿ.ವಿ., ಪ್ರೌಢ ದೇವರಾಯನ ಶಾಸನಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭.

೨೦. ಪಂಚಮುಖಿ ರಾ.ಸ್ವಾ., ಕರ್ನಾಟಕದ ಇತಿಹಾಸ, ಸಂಪುಟ ೧, ಕರ್ನಾಟಕ ಇತಿಹಾಸ ಸಂಶೋಧನ ಮಂಡಲ ಧಾರವಾಡ, ೨೦೦೮.

೨೧. ಪ್ರಕಾಶ ಎಂ.ಪಿ., ಡೋಮಿಂಗೋಸ್ ಪಿಯಾಸ್ ಕಂಡ ವಿಜಯನಗರ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮.

೨೨. ಬಳ್ಳಾರಿ ಡಿಸ್ಟ್ರಿಕ್ಟ್ ಗೆಜೆಟಿಯರ್, ಮೈಸೂರು ಸರ್ಕಾರ, ಬೆಂಗಳೂರು, ೧೯೭೨.

೨೩. ಮಹಾದೇವ ಸಿ., ಸುಬ್ಬಣ್ಣ ರೈ., ಮಾಧವ ಪೆರಾಜೆ, ಹೊಸಪೇಟೆ ತಾಲೂಕು ದರ್ಶನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨.

೨೪. ಮುಜುಂದಾರ್ (ಸಂ), ಶಾರದಾ ಪ್ರಸಾದ್ (ಅನು), ಭಾರತದ ಪ್ರೌಢ ಇತಿಹಾಸ, ಪ್ರಸಾರಾಂಗ, ಮಾನಸ ಗಂಗೋತ್ರಿ, ಮೈಸೂರು, ೨೦೦೩.

೨೫. ಮೋಹನ್‌ಕೃಷ್ಣ ರೈ.ಕೆ., ವಸಾಹತುಪೂರ್ವ ಕರ್ನಾಟಕದ ನಗರ ಚರಿತ್ರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬.

೨೬. ಮೋಹನ್‌ಕೃಷ್ಣ ರೈ.ಕೆ., ಪ್ರಭುತ್ವ ಮತ್ತು ಜನತೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪.

೨೭. ಮೋತಿ ಚಂದ್ರ, ಸಾರ್ಥವಾಹ, (ಅನು.) ಪಾಟೀಲ್ ಎಚ್.ಎಸ್., ಸಾಹಿತ್ಯ ಅಕಾಡೆಮಿ, ಹೊಸದೆಹಲಿ, ೧೯೭೨.

೨೮. ಮೋಹನ್‌ಕೃಷ್ಣ ರೈ.ಕೆ., ದಕ್ಷಿಣ ಭಾರತದ ಚರಿತ್ರೆ, ದೂರ ಶಿಕ್ಷಣ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬.

೨೯. ಮೋಹನ್‌ಕೃಷ್ಣ ರೈ.ಕೆ., ವಸಾಹತುಶಾಹಿ ಮತ್ತು ನಗರೀಕರಣ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭.

೩೦. ರಮೇಶ ನಾಯಕ, ಕರ್ನಾಟಕದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನಗಳ ಮರುಚಿಂತನೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭.

೩೧. ರಾಮಕೃಷ್ಣ ಕೆ.ಆರ್., ವಿಜಯನಗರ ಅಧ್ಯಯನ, ಸಂಪುಟ - ೮, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ, ೨೦೦೩.

೩೨. ರಾಮಕೃಷ್ಣ ಕೆ.ಆರ್., ವಿಜಯನಗರ ಅಧ್ಯಯನ, ಸಂಪುಟ - ೦೭, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ, ೨೦೦೧

೩೩. ರಾಜಾರಾಮ ಹೆಗಡೆ, ವಿಜಯನಗರ, ದೂರ ಶಿಕ್ಷಣ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭.

೩೪. ಲಕ್ಷ್ಮಣ್ ತೆಲಗಾವಿ, ಮೌರ್ಯ ಮತ್ತು ಶಾತವಾಹನ ಯುಗ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪.

೩೫. ಲಕ್ಷ್ಮಣ್ ತೆಲಗಾವಿ, ಚರಿತ್ರೆ ಅಧ್ಯಯನ, ಸಂಪುಟ - ೧, ಸಂಚಿಕೆ - ೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬.

೩೬. ವಸು ಎಂ.ವಿ., ಕರ್ನಾಟಕ ಚರಿತ್ರೆ, ದೂರ ಶಿಕ್ಷಣ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬.

೩೭. ವಾಸುದೇವನ್ ಸಿ.ಎಸ್., ವಿಜಯನಗರ ಪಟ್ಟಣ ಮತ್ತು ಅದರ ಉಪನಗರಗಳು, ವಿಜಯನಗರ ಅಧ್ಯಯನ, ಸಂಪುಟ-೨, ಮೈಸೂರು, ೧೯೯೭.

೩೮. ವಿವೇಕ ರೈ.ಬಿ.ಎ., ಪ್ರವಾಸಿ ಕಂಡ ವಿಜಯನಗರ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೫

೩೯. ವಿರೂಪಾಕ್ಷಿ ಪೂಜಾರಹಳ್ಳಿ, ವಸಾಹತುಕಾಲೀನ ಬಳ್ಳಾರಿ ಜಿಲ್ಲೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨-೦೩

೪೦. ಸುಂದರ ಅ., ಕರ್ನಾಟಕ ಚರಿತ್ರೆ, ಸಂಪುಟ - ೧, ಆದಿಹಳೆ ಶಿಲಾಯುಗದಿಂದ ಕ್ರಿ.ಶ. ೬೪೦, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭.

೪೧. ಸುರೇಂದ್ರರಾವ್ ಬಿ., ಕರ್ನಾಟಕ ಚರಿತ್ರೆ, ಸಂಪುಟ - ೨, ಕ್ರಿ.ಶ. ೬೪೦ - ೧೩೩೬, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೪೨. ಸೂರ್ಯನಾಥ ಯು. ಕಾಮತ್, ಇತಿಹಾಸ ದರ್ಶನ, ಸಂಪುಟ - ೧೦, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು, ೧೯೯೫.

೪೩. ಸೂರ್ಯನಾಥ ಯು. ಕಾಮತ್, ಕರ್ನಾಟಕ ರಾಜ್ಯ ಗೆಜೆಟಿಯರ್, ಭಾಗ - ೨, ಬೆಂಗಳೂರು, ೧೯೮೫.

೪೪. ಶರ್ಮ ಆರ್.ಎಸ್., ಪ್ರಾಚೀನ ಭಾರತ, ನವ ಕರ್ನಾಟಕ ಪಬ್ಲಿಕೇಷನ್ಸ್. ಬೆಂಗಳೂರು, ೧೯೮೫.

೪೫. ಶಿವಣ್ಣ ಕೆ.ಎಸ್., ಕರ್ನಾಟಕ ಚರಿತ್ರೆ, ಸಂಪುಟ - ೩, ಕ್ರಿ.ಶ. ೧೩೩೬ - ೧೭೬೦, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭.

೪೬. ಶಿವಶಂಕರ ಎಮ್.ಎಲ್., ಚನ್ನಬಸಪ್ಪ ಎಸ್. ಪಾಟೀಲ, ವಿಜಯನಗರ ಅಧ್ಯಯನ, ಸಂಪುಟ - ೩, ಪ್ರಾಚ್ಯ ವಸ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, ೧೯೯೭.

೪೭. ಷೇಕ್ ಅಲಿ. ಬಿ., ಕರ್ನಾಟಕದ ಇತಿಹಾಸ, ಸಂಪುಟ - ೨ ರಿಂದ ೬, ಕರ್ನಾಟಕ ಇತಿಹಾಸ ಸಂಶೋಧನೆ ಮಂಡಲ, ಧಾರವಾಡ, ೨೦೦೮,

೪೮. ಹಿರೇಮಠ ಬಿ.ಆರ್., ಶಾಸನಗಳಲ್ಲಿ ಕರ್ನಾಟಕದ ವರ್ತಕರು, ಧಾರವಾಡ, ೧೯೮೬.

೪೯. Agarwala P.N., A Comprehensive History of Business in India from 3000 B.C.to 2000 A.D. Tata MC Graw Hill Publishing Company Limited, New Delhi, 2001

೫೦. Amales Tripathi, Trade and Finance in the Bengal Presidency 1793-1833, Oxford University Press, Calcutta 1956

೫೧. Anthony King D.Colonial Urban Development; Culture, Social Power and Government, Rotuledge and Kegam Paul, Lodon,1976

೫೨. Ashis Das Gupta, Indian Machads and the Decline of Surat C.1700-1750, Wiesbaden,1979

೫೩. Arasaratnam, s, Merchants,Companies and Commerce on the Coromandel Coast, 1650-1740, Oxford University Press, New Delhi,1986

೫೪. Bari,S.A,The Economics of Taxation in a Medieval State, Karnataka under Vijayanagar 1336-1565,printed and published, M,S. Graphic's Bangalore,2003

೫೫. Baliga B.S, Studies in Madras Administration, two volumes, Goverment Press, Madras, 1949

೫೬. Bhattacharya.s.(Ed), Essays in Modern Indian Economic History, Munshiram Manoharlal Publishers Pvt.Ltd, New Delhi,1987

೫೭. Bipan Chandra, Nationalism and Colonialism in Modern India, Orient Longman, New Delhi, 1981

೫೮. Bipan Chandra, The Rise and Growth of Economic Nationalim in India, people's Publishing House,New Delhi,1982

೫೯. Bipan Chandra, Essays on Coloninalism, Orient Longman, New Delhi,1999

೬೦. Chapin. F.S. Urban Land Use Planning, New York, Harper, 1957

೬೧. Chaudhuri, K.N.(Ed). The Economic Development of India under the East India company 1814-1858, Cambriddge University Press, 1971

೬೨. Dutt R.C, The Economic History of India,two volumes, Government of India, New Delhi, 1976

೬೩. Gopal M.H, (Ed), British Sources of the Economic, Political and Social History of the Mysore State, 1799-1812, Sangam Books, Bombay,1993

೬೪. Govind Aggrawal, Samradh Bhartiya Bima Paddati, chure,1987

೬೫. Pearson M.N. Merchants and Rulers in Gujarat, California,1976

೬೬. Ramachandran. C. East India Company and South Indian Agriculture, Oxford University Press, Delhi, 1985.

೬೭. Tirthankar Ray, The Economic History of India, 1857-1947, Oxford University Press, New Delhi

೬೮. Thakur V.K. Urbanization in Ancient India, Abhinav Publication, New Delhi 1981.

೬೯. Sharma,G.D, Urban Economy in Western India in late Eighteenth Century, in The City in Indian History (Ed. Indu Banga) Delhi, 1991.

೭೦. Sanjay Subrahmanyam, The Career and lagend of Vascodagama, Cambrigdge University Press, 1997.

೭೧. Sanjay Subrahmanyam. The Political Economy of Commerce: Southern India,(1500-1650) Cambridge University, 2004.

೭೨. Saki, Making History, Karnataka's People and Their Past, Volume I, Stone Age to Mercantilism, Vimukthi Prakashana, Bangalore,1998.

೭೩. Sanjay Subramanyam (Ed), Money and Market in India, 1100-1700, Oxford University Press,Delhi, 1994.

೭೪. Shirin Metha, The Mahajans aand Business Communities of Ahmedabad, (Ed. Tripathi) New Delhi, 1984.

ಎಂ.ಫಿಲ್ ಮತ್ತು ಪಿಎಚ್.ಡಿ ಅಪ್ರಕಟಿತ ಗ್ರಂಥಗಳು

೧. ಮಧು ಎಂ.ಎಸ್., 'ಹೊಸಪೇಟೆ ಪ್ರದೇಶದ ಚಾರಿತ್ರಿಕ ಅಧ್ಯಯನ', ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭

೨. ಲೋಹಿತ್ ಕುಮಾರ್ ಆರ್., 'ಬಳ್ಳಾರಿ ಜಿಲ್ಲೆಯ ಕ್ರೈಸ್ತ ಮಿಷನರಿಗಳು; ಚಾರಿತ್ರಿಕ ಅಧ್ಯಯನ', ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬ - ೦೭

೩. ನಲ್ಲಾರೆಡ್ಡಿ, 'ದೇವದುರ್ಗ ತಾಲೂಕಿನ ಹಗಲು ವೇಷಗಾರರು: ಸಬಾಲ್ಟನ್ ಅಧ್ಯಯನ' ಹಿನ್ನೆಲೆಯಲ್ಲಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪

೪. ಸೋಮಶೇಖರ್ ಎಸ್.ವೈ., 'ಹಂಪೆಯ ಬಜಾರಗಳು', ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೪

೫. ವಿರೂಪಾಕ್ಷಿ ಪೂಜಾರಹಳ್ಳಿ, 'ಬಳ್ಳಾರಿ ಜಿಲ್ಲೆಯ ಕಲೆಕ್ಟರುಗಳ ಆಳ್ವಿಕೆ', ಕನ್ನಡ ವಿಶ್ವವಿದ್ಯಾಲಯ, ಹಂಪಿ

೨. ಮೌಖಿಕ ಸಂದರ್ಶನ

೧. ಆರ್.ಡಿ. ಸೋನಿ, ಸೋನಿ ಸಮುದಾಯದ ಮುಖಂಡರು, ೧೫.೦೭.೨೦೦೯, ಹೊಸಪೇಟೆ.

೨. ಭೂಪಾಲ ರಾಘವೇಂದ್ರ ಶೆಟ್ಟಿ, ಶೆಟ್ಟಿ ಸಮುದಾಯದ ಮುಖಂಡರು, ೧೮.೦೭.೨೦೦೯, ಹೊಸಪೇಟೆ.

೩. ವಿ. ಸತ್ಯನಾರಾಯಣ, ಸಮಾಜ ಸೇವಕರು, ೪.೮.೨೦೦೯, ಹೊಸಪೇಟೆ.

೪. ಚಿನ್ನಿ ನಾಗರಾಜಶೆಟ್ಟಿ, ಶೆಟ್ಟಿ ಸಮುದಾಯದ ಮುಖಂಡರು, ೬.೮.೨೦೦೯, ಹೊಸಪೇಟೆ.

೫. ಕಾಂತಿಲಾಲ್, ಗುಜರಾತ್ ಸಮುದಾಯದ ಮುಖಂಡರು, ೮.೮.೨೦೦೯, ಹೊಸಪೇಟೆ.

೬. ಆರೀಫ್, ಮುಸ್ಲಿಂ ಸಮುದಾಯದವರು, ೩.೦೮.೨೦೦೯, ಹೊಸಪೇಟೆ.

೭. ಪಾಂಡುರಂಗಶೆಟ್ಟಿ, ವಾಣಿಜ್ಯ ಮಂಡಳಿಯ ಅಧ್ಯಕ್ಷರು, ೨೫.೦೭.೨೦೦೯, ಹೊಸಪೇಟೆ.

೮. ದಿನೇಶ ಪಟೇಲ್, ಗುಜರಾತ್ ಸಮುದಾಯದವರು, ೨೦.೦೮.೨೦೦೯, ಹೊಸಪೇಟೆ.

೯. ಮಧುಕರರಾವ್, ಬಟ್ಟೆ ಮತ್ತು ರೆಡಿಮೆಡ ಸಂಘದ ಅಧ್ಯಕ್ಷರು ೧೮.೦೯.೨೦೦೯, ಹೊಸಪೇಟೆ.

೧೦. ರಘುನಾಥ ರಾವ್, ಕಿರಾಣಿ ವ್ಯಾಪಾರಿ ಸಂಘ ಕಾರ್ಯದರ್ಶಿಗಳು ೨೦.೦೮.೨೦೦೯ ಹೊಸಪೇಟೆ.

೧೧. ರಾಜೇಶ, ಜೈನ ಸಮುದಾಯದವರು, ೨೪.೦೮.೨೦೦೯, ಹೊಸಪೇಟೆ.

೩. ನಿಯತಕಾಲಿಕೆಗಳು

೦೧. ಪ್ರಜಾವಾಣಿ

೦೨. ಸಂಯುಕ್ತ ಕರ್ನಾಟಕ

೦೩. ವಿಜಯ ಕರ್ನಾಟಕ

೦೪. ಕನ್ನಡ ಪ್ರಭ

• • •

೪. ನಕ್ಷೆಗಳು

ಬಳ್ಳಾರಿ ಜಿಲ್ಲೆ



ಹೊಸಪೇಟೆ ತಾಲೂಕು



೫. ಛಾಯಾಚಿತ್ರಗಳು



ಶೆಟ್ಟಿ ಸಮುದಾಯದ ನಗರೇಶ್ವರ ದೇವಸ್ಥಾನ



ಹೊಸಪೇಟೆ ಮೇನ್ ಬಜಾರ್



ಜೈನ ಸಮುದಾಯದ ಮಹಾವೀರ ಶಾಲೆ



ಮಾರಾವಾಡಿ ಸಮುದಾಯದ ನೀರಿನ ಅರವಟ್ಟಿಗೆ



ಶೆಟ್ಟಿ ಸಮುದಾಯದ ಪ್ರೌಢ ಶಾಲೆ



ಶೆಟ್ಟಿ ಸಮುದಾಯದ ಮಲ್ಲಿಗಿ ಹೆಲ್ತ್ ಕೇರ್ ಸೆಂಟರ್